ಶ್ರೀ

ಹಿಂದೂಸಮಾಜವ್ಯವಸ್ಥೆ

ಬೆಲೆ) (೪ ಆಣೆ

ಹಿಂದೂ ಸಮಾಜ ವ್ಯವಸ್ಥೆ.

ಸದ್ಯಸ್ಥಿತಿ.

ಕ್ರಿಸ್ತೀ ಶಕದ ೧೯ನೆಯ ಶತಮಾನವು ಮುಗಿದು ಹೋಗಿ ಸ್ವಲ್ಪವರ್ಷಗಳಾಗಿರುವವು. ಕಳೆದ ನೂರುವರ್ಷಗಳಲ್ಲಿ ಭೂಮಿಯಲ್ಲಿ ಏನೇನು ಹೆಚ್ಚುಕಡಿಮೆಗಳಾಗಿರುವವೆಂಬದನ್ನು ಸ್ಥೂಲಮಾನದಿಂದ ಮನನ ಮಾಡಿಕೊಳ್ಳಲಿಕ್ಕೆ ಬರುವಂತಿದೆ. ತೀರ ಕಡಿಮೆ ತಿಳುವಳಿಕೆಯುಳ್ಳವರಿಗೆ ಸಹ ಕಳೆದ ಶತಕದಲ್ಲಿ ಅಸಂಖ್ಯ ಚಮತ್ಕಾರಗಳಾಗಿರುವೆಂಬ ಸಂಗತಿಯು ತಿಳಿಯಬಹುದು. ಭೂಮಿಯ ಸುತ್ತು ಮುತ್ತು ತಾರಾಯಂತ್ರದ ಜಾಳಿಗೆಯು ಹಬ್ಬಿರುವದರಿಂದ ಲಂಡನ, ನ್ಯೂಯಾರ್ಕ ಮುಂತಾದ ದೂರದ ಪಟ್ಟಣಗಳಲ್ಲಿ ಘಟಿಸಿದ ಸಂಗತಿಯು ಕೆಲವು ನಿಮಿಷಗಳಲ್ಲಿ ಮುಂಬಯಿ, ದಿಲ್ಲಿ ಮುಂತಾದ ಹಿಂದುಸ್ತಾನದೊಳಗಿನ ಪಟ್ಟಣಗಳಲ್ಲಿ ತಿಳಿಯುತ್ತದೆ. ಉಗಿಬಂಡಿ, ಉಗಿಹಡಗಗಳ ಯೋಗದಿಂದ ಈ ಹೊತ್ತು ಒಂದು ಪಟ್ಟಣದಲ್ಲಿರುವವನು ೨।೩ ದಿನಗಳಲ್ಲಿ ಸಾವಿರಾರು ಮೈಲುದೂರ ಹೋಗಲಿಕ್ಕೆ ಶಕ್ತನಾಗಿರುವನು. ಅತಿಸ್ವಲ್ಪ ಜನವಸತಿಯಿದ್ದ ಊರುಗಳು ಕಾಲು ಇಟ್ಟೇನೆಂದರೆ ಸ್ಥಳವಿಲ್ಲದಂಥ ದೊಡ್ಡನಗರಗಳಾಗಿರುವವು. ಅನಂತಕಾಲದವರೆಗೆ ಮನುಷ್ಯನ ಹೆಜ್ಜೆ ಮೂಡದೆ ಇದ್ದಂಥ, ಗಗನಚುಂಬಿಗಳಾದ ಗಿಡಗಳಿದ್ದಂಥ, ಸಿಂಹ, ವ್ಯಾಘ್ರಮುಂತಾದ ಹಿಂಸ್ರ ಮೃಗಗಳಿಗೆ ಆಶ್ರಯ ಸ್ಥಾನವಾಗಿದ್ದ ಅರಣ್ಯಗಳೆಲ್ಲ ನಾಶವಾಗಿ, ಅವುಗಳ ಸ್ಥಳದಲ್ಲಿ ಉತ್ತಮ ಫಲಭರಿತವಾದ ಹೊಲಗಳುಂಟಾಗಿವೆ. ಉಗಿಯು ಮನುಷ್ಯನ ಸೇವೆಮಾಡಲಿಕ್ಕೆ ಒಪ್ಪಿಕೊಂಡಂದಿನಿಂದಂತೂ ಹಲವು ಬಗೆಯ ಯಂತ್ರಗಳು ನಿರ್ಮಾಣಹೊಂದಿ, ಅವುಗಳ ಕರ್ಕಶ ಧ್ವನಿಯಿಂದ ಕಿವಿಗಳು ಗಡಚಿಕ್ಕಹತ್ತಿರುವವು. ಭೂಮಿಯ ಹೊಟ್ಟೆಯಲ್ಲಿ ಅನಂತಕಾಲದಿಂದ ಕತ್ತಲೆಯೊಳಗೆಬಿದ್ದುಕೊಂಡಿದ್ದ, ಬಂಗಾರ, ವಜ್ರಮುಂತಾದವುಗಳಿಂದ ತುಂಬಿದ ಬೊಕ್ಕಸವು ಬೆಳಕಿಗೆ ತರಲ್ಪಟ್ಟು, ಕಣ್ಣು ಕುಕ್ಕುವಂತೆ ಹೊಳೆಯಹತ್ತಿರುವದು. ವರ್ತಮಾನ ಪತ್ರಗಳು, ಸಭೆಗಳು, ಪ್ರದರ್ಶನಗಳು ಮುಂತಾದವುಗಳಿಂದ ಜನಾಂಗಗಳಲ್ಲಿ ಸಹಾನುಭೂತಿಯು ಮೊಳೆದೋರಹತ್ತಿರುವದು. ಗುಡ್ಡಗಳಲ್ಲಿ ಕಿಂಡಿಗ[illegible]ಡಿಸಲ್ಪಟ್ಟವು; ಸಮುದ್ರದಿಂದ ವಿಭಕ್ತವ[illegible]ಯುವಾದ ಮಾರ್ಗಗಳು ಕಟ್ಟಲ್ಪಟ್ಟವು. [illegible]ಸುಖಕರವಾಗಿ ಬೆಳವಣಿ

ಗೆ ಹೊಂದಲಿಕ್ಕೆ ಅಸಂಖ್ಯ ಕಾರ್ಯಗಳು ಜರಗಿಸಲ್ಪಟ್ಟು, ಎತ್ತ ನೋಡಿದರೂ ಸುಧಾರಣಾದೇವಿಯು ಸಾಮ್ರಾಜ್ಯವು ವ್ಯಕ್ತವಾಗಿ ಕಾಣಹತ್ತಿರುವದು.

ಕಳೆದ ಶತಮಾನದಲ್ಲಿ ಉಂಟಾದ ಮೇಲೆ ಹೇಳಿದ ಎಲ್ಲ ಸುಧಾರಣೆಯು ಯುರೋಪ, ಅಮೇರಿಕಾಖಂಡಗಳಿಂದ ಉಗಮಹೊಂದಿರುವದೆಂಬ ಸಂಗತಿಯನ್ನು, ಸುಜ್ಞನಾದ ಪ್ರತಿಯೊಬ್ಬ ಮನುಷ್ಯನು ಪ್ರಾಂಜಲಮನಸ್ಸಿನಿಂದ ಒಪ್ಪಿಕೊಳ್ಳದೆ ಇರನು. ನಾಲ್ಕೈದು ಶತಮಾನಗಳಿಂದ ಕ್ರಿಸ್ತೀ ರಾಷ್ಟ್ರಗಳು ಜಗತ್ತಿನ ಮೇಲೆಲ್ಲ ತಮ್ಮ ವರ್ಚಸ್ಸನ್ನು ಕೂಡಿಸಲಿಕ್ಕೆ ಹವಣಿಸಹತ್ತಿದವು. ಸಮಶೀತೋಷ್ಣ ಕಟಿಬಂಧದಲ್ಲಿರುವದರಿಂದ ಸ್ವಾಭಾವಿಕವಾಗಿಯೇ ದಣುವಿಗೆ ಅಸುಗೊಳ್ಳದೆ, ಸತತವಾಗಿ ಉದ್ಯೋಗ ಮಾಡುವ ಚಟುಪಟಿಕೆಯೂ, ಕಷ್ಟಕ್ಕೆ ಹೆದರದಂಥ ಸಾಹಸವೂ ಪಾಶ್ಚಿಮಾತ್ಯರ ಹುಟ್ಟುಗುಣಗಳು. ಮುಸಲ್ಮಾನಜನಾಂಗದವರಿಂದ ಭಯಂಕರ ಪೀಡೆಯುಂಟಾಗಿ, ಪಾಶ್ಚಿಮಾತ್ಯ ದೇಶಗಳಲ್ಲಿ ಅಸಹ್ಯವಾದ ಬಡತನವು ನೆಲೆಗೊಂಡದ್ದರಿಂದ, ಕಡಲಪಯಣದಲ್ಲಿ ಎದೆಗಾರಿಕೆಯನ್ನು ಪಡೆದ ಹೊರತು ಆ ದೇಶಗಳ ನಿರ್ವಾಹವು ಸಾಗದಂತಾಯಿತು. ಇದೇಕಾಲಕ್ಕೆ ಸೃಷ್ಟಪದಾರ್ಥವಿಜ್ಞಾನ-ಶಾಸ್ತ್ರಜ್ಞಾನದಿಂದ ಉಂಟಾದ ಹೊಸ ಹೊಸ ಶೋಧಗಳ ನೆರವು ದೊರೆಯಿತು. ಅದರಿಂದ ಕ್ರಿಸ್ತೀ ರಾಷ್ಟ್ರಗಳ ವರ್ಚಸ್ಸು ಜಗತ್ತಿನ ಎಲ್ಲಭಾಗಗಳಲ್ಲಿ ಆಗಿರುವದು. ಭೂಮಿಯ ಬಹುದೊಡ್ಡ ಭಾಗವು ಕ್ರಿಸ್ತೀ ರಾಷ್ಟ್ರಗಳ ಪ್ರತ್ಯಕ್ಷ ಸತ್ತೆಯಲ್ಲಿರುವದು. ಬೇ[illegible] ತುಸುಪ್ರದೇಶದ ಮೇಲೆ ಪ್ರತ್ಯಕ್ಷಸತ್ತೆಯಿಲ್ಲದಿದ್ದರೂ ವ್ಯಾಪಾರದಸತ್ತೆಯು ಇರುವದು. ನಮ್ಮ ಭರತ ಭೂಮಿಯು ಪ್ರತ್ಯಕ್ಷವಾಗಿ ಕ್ರಿಸ್ತೀ ರಾಷ್ಟ್ರದ ಸತ್ತೆಯಲ್ಲಿರುವದೆಂಬ ಮಾತನ್ನು ಹಸುಗೂಸು ಸಹ ಅರಿತಿರುವದು. ಇಂಗ್ಲಿಷ ರಾಷ್ಟ್ರದ ಹಿಡಿತನವು ಜಗತ್ತಿನ ೧/೪ ಭಾಗದ ಮೇಲಿರುವದು. ಅದರಲ್ಲಿ ಎಷ್ಟೋ ಜನಾಂಗಗಳು ಅಡಕವಾಗಿರುವವು. ಪ್ರತಿಯೊಂದು ಜನಾಂಗವನ್ನು ಹೇಗೆ ನಡಿಸಿಕೊಳ್ಳಬೇಕೆಂಬದರ ಅರಿವು ಇಂಗ್ಲಿಷ ರಾಷ್ಟ್ರಕ್ಕೆ ಚೆನ್ನಾಗಿರುವದು. ಹಿಂದುಸ್ಥಾನದ ಜಾತಿಭೇದ, ಪೂರ್ವಸಂಸ್ಕೃತಿ, ಧರ್ಮಾಭಿಮಾನ, ವಿಶಾಲತೆ, ಮುಂತಾದ ಹಲವು ಸಂಗತಿಗಳನ್ನು ಚೆನ್ನಾಗಿ ಅರಿತು, ಈ ದೇಶದ ಜನಾಂಗದ ಸ್ಥಿತಿರೀತಿಗಳಿಗೆ ವಿರುದ್ಧವಾದ ಯಾವ ಸಂಗತಿಗಳಲ್ಲಿಯೂ ಕೈಹಾಕದೆ, ಯಾವ ಸುಧಾರಣೆಯನ್ನೂ ಅವಸರದಿಂದ ಅಮಲಿನಲ್ಲಿ ತರದೆ, ಬಹು ಎಚ್ಚರದಿಂದ ಕಾರಭಾರವು ಸಾಗಿಸಲ್ಪಡುವದು. ಅದರಿಂದಲೇ ಹಿಂದೂ ಸಮಾಜದಲ್ಲಿ ಸ್ಥೈರ್ಯವು ನೆಲೆಗೊಂಡಿರುವದೆಂದು ಧಾರಾಳವಾಗಿ ಹೇಳಬಹುದು.

ಭೂಮಧ್ಯರೇಷೆಯ ಪ್ರದೇಶದ ಸಮುದ್ರದಲ್ಲಿ ಹುಟ್ಟಿದ ಪ್ರಚಂಡ ತೆರೆಗಳು ಧ್ರುವಪ್ರದೇಶದಲ್ಲಿ ಅತ್ಯಲ್ಪವಾಗಿ ತೋರುವಂತೆ, ಪಾಶ್ಚಿಮಾತ್ಯ ರಾಷ್ಟ್ರಗಳ ಸುಧಾರಣೆಯ ಸುಳುವು ಹಿಂದುಸ್ತಾನದಂಥ ಅಧೀನ ರಾಷ್ಟ್ರದಲ್ಲಿ ತೋರುವದು ಸಹಜವದೆ. ಅತಿಪ್ರಾಚೀನಕಾಲದಲ್ಲಿ ಭಾರತ ಪುತ್ರರು ರೋಮ, ಇಜಿಪ್ತ, ಅರಬಸ್ತಾನ, ಮಲಾಯಾ, ಜಾವಾ ಮುಂತಾದ ದೂರ ದೂರದ ಪ್ರದೇಶಗಳಲ್ಲಿ ಹೋಗಿ ನಿಂತು ಕೆಲವಡೆಯಲ್ಲಿ ರಾಜ್ಯಭಾರಮಾಡಿ, ಆರ್ಯಸುಧಾರಣೆಗಳನ್ನು ನೆಲೆಗೊಳಿಸಿ, ಆರ್ಯಧರ್ಮವನ್ನು ಹಬ್ಬಿಸಿ, ಸುಖವಾಗಿ ಬಾಳಿದ ಸಂಗತಿಯು ನಿಜವಿರುವಂತೆ, ಸಾವಿರ ವರ್ಷಗಳಹಿಂದೆ ಅವರು ಸ್ವದೇಶಬಿಟ್ಟು ಹೊರಬೀಳಲಿಲ್ಲೆಂಬ ಸಂಗತಿಯಾದರೂ ದಿಟವಿರುತ್ತದೆ. ಆದರಿಂದ ಈ ದೇಶವು ಮಲೆತ ನೀರಿನ ಗುಂಡಿಯನ್ನು ಹೋಲುವಂತಾಯಿತು; ಹಿಂದುಸ್ತಾನದ ಹೊರಗೆ ದೇಶವೇ ಇಲ್ಲೆಂಬ ಕಲ್ಪನೆಯು ರೂಢವಾಯಿತು; ಪರದೇಶಗಳಲ್ಲಿ ತೇಜಸ್ಸಿನ ರಕ್ತವುಳ್ಳ, ವಿಲಕ್ಷಣ ಧರ್ಮಾಭಿಮಾನವುಳ್ಳ, ಅತ್ಯಂತ ಸಾಹಸವುಳ್ಳ ಜನಾಂಗಗಳು ಉದಯ ಹೊಂದಿ, ಏಳ್ಗೆಯಾಗುತ್ತಿರುವವೆಂಬದರ ಅರುವು ಸಹ ಇದ್ದಿಲ್ಲ. ಆದರೆ ಮುಸಲ್ಮಾನರ ಅಭಿಯೋಗದಿಂದ ಎಚ್ಚರಹುಟ್ಟಿತು. ಮುಸಲ್ಮಾನರನ್ನು ಹತವೀರ್ಯರನ್ನು ಮಾಡುವದರಲ್ಲಿಯೇ, ಹಿಂದೂ ಸಮಾಜವು ತನ್ನ ಎಲ್ಲ ಶೌರ್ಯ ಸಾಹಸಗಳನ್ನು ವೆಚ್ಚಮಾಡಿದ ಕಾಲದಲ್ಲಿ ಯುರೋಪದವರ ಆಗಮನವಾಗಿ, ಇಂಗ್ಲಿಷ ಸರಕಾರದ ಅಮಲು ನೆಲೆಗೊಂಡಿತು. ಹೀಗಾಗಿ ಹಿಂದುಸ್ತಾನದಲ್ಲಿ ಪಾಶ್ಚಾತ್ಯ ಸುಧಾರಣೆಯು ಕ್ರಮವಾಗಿ ನೆಲೆಗೊಳ್ಳಲಿಕ್ಕೆ ಆಸ್ಪದವಾಯಿತು. ಅಂತೂ ಹಿಂ-ದೂಸಮಾಜವು ಪಾಶ್ಚಾತ್ಯ ಸುಧಾರಣೆಯ ಚಕ್ರದಲ್ಲಿ ಸಿಲ್ಕಿರುವದೆಂಬ ಸಂಗತಿಯು ಸ್ಪಷ್ಟವಿರುವದು.

ಈಗಿನ ಯಾಂತ್ರಿಕ ಕೆಲಸಕೌಶಲ್ಯವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೂರ್ಣಪ್ರಕಾಶಮಾನವಾಗಿ ತೋರುತ್ತಿದ್ದರೂ, ಹಿಂದುಸ್ತಾನದಲ್ಲಿ ಅದರ ಅರುಣೋದಯವು, ಬಹಳವಾದರೆ ಸಂಧಿಪ್ರಕಾಶವು ಉಂಟಾಗಿರುತ್ತದೆ. ಇಷ್ಟರಿಂದಲೇ ಹಿಂದೀಸಮಾಜದಲ್ಲಿ ಹಲವು ಸ್ಥಿತ್ಯಂತರಗಳುಂಟಾಗಿರುವವು. ಜನರ ಆಚಾರ-ವಿಚಾರಗಳಲ್ಲಿ ಎಷ್ಟೋ ಹೆಚ್ಚು ಕಡಿಮೆಗಳುಂಟಾಗಿರುವವು. ಉಗಿಬಂಡಿ ಉಗಿಹಡಗಗಳಲ್ಲಿ ಸ್ಪರ್ಶಾಸ್ಪರ್ಶ ವಿಚಾರವಿಲ್ಲದೆ ಜನರು ಕೂಡ್ರುತ್ತಿರುವರು. ವಿದ್ಯಾದಾನವು ಸಕಲ ಜಾತಿಯವರಿಗೂ ಸರಿಯಾಗಿ ದೊರೆಯುತ್ತಿರುವದು. ದುರ್ಜ್ಞೇಯವೂ ಶೂದ್ರಾದಿಗಳಿಗೆ ಅಲಭ್ಯವೂ ಆಗಿದ್ದ ವೇದವಿದ್ಯೆಯು ಎಲ್ಲಜನರಿಗೆ ದೇಶಭಾಷೆಯಲ್ಲಿ,

ಭಾಷಾಂತರಿಸಲ್ಪಟ್ಟು ದೊರೆಯುಹತ್ತಿರುವದು. ಮುಡಿ-ಮೈಲಿಗೆಗಳ ಕಸುವು ಕಡಿಮೆಯಾಗಿರುವದು. ಮಹಾಯಾತ್ರೆಗಳು ಸುಲಭಸಾಧ್ಯವಾಗಿರುವವು. ಜಾತಿಮತ್ಸರವು ಬಹಳಮಟ್ಟಿಗೆ ಕಡಿಮೆಯಾಗಿರುವದು. ಬ್ರಾಹ್ಮಣರಿಗೆ ಲಿಂಗವಂತರು ಎಷ್ಟು ಬೈದರೂ ಒಬ್ಬ ಬ್ರಾಹ್ಮಣನೂ ಲಿಂಗವಂತನಾಗುವದಿಲ್ಲ; ಬ್ರಾಹ್ಮಣರು ಲಿಂಗವಂತನನ್ನು ಎಷ್ಟು ಹೀಯಾಳಿಸಿದರೂ ಒಬ್ಬ ಲಿಂಗವಂತನೂ ಈಗಿನ ಬ್ರಾಹ್ಮಣ ಧರ್ಮದ ದೀಕ್ಷೆಯನ್ನು ತಕ್ಕೊಳ್ಳುವದಿಲ್ಲ. ಇದರಂತೆ ಇತರ ಹಿಂದೂಜನರಲ್ಲಿಯೂ ಪರಸ್ಪರ ಮತಾಂತರವಾಗುವ ಸಂಭವವಿರುವದಿಲ್ಲ; ಅಂದಮೇಲೆ ಜಾತಿ ಮತ್ಸರದಿಂದ ಯಾವಜಾತಿಗೆ ಏನು ಲಾಭವಾಗುವದು? ಏನೂ ಇಲ್ಲ. ನೋಡಿರಿ, ಸಂತೆಪೇಟೆಗಳಲ್ಲಿ ಕೊಡಕೊಳ್ಳುವ ವ್ಯವಹಾರವು ನಡೆದಾಗ ಎಲ್ಲ ಜಾತಿಯ ಜನರು ಪರಸ್ಪರ ಪ್ರೇಮದಿಂದ ನಡೆಯುತ್ತಿರುವರು. ಹೊಲೆಯನು ಮಾರಲಿಕ್ಕಿಟ್ಟಿರುವ ಕಾಳುಗಳನ್ನು ಉಚ್ಚವರ್ಣದವರು ಕೊಳ್ಳುತ್ತಿರುವರು, ನಮ್ಮ ಜಾತಿಯವರಿಂದಲೇ ಧಾನ್ಯಾದಿಗಳನ್ನು ಕೊಳ್ಳಬೇಕೆಂತಲೂ, ನಮ್ಮ ಜಾತಿಯವರೇ ನಮ್ಮ ಹೊಲಮಾಡಬೇಕೆಂತಲೂ ಯಾರ ಆಗ್ರಹವೂ ಇರುವದಿಲ್ಲ. ಜಾತಿಭೇದವು ಅಡಿಗೆಯಮನೆಯ ಅಥವಾ ದೇವರಮನೆಯ ಮಟ್ಟಿಗೆ ಉಳಿದಿರುವದೇ ಹೊರತು, ಪಡಸಾಲೆಯಲ್ಲಿ ಅಂಗಳದಲ್ಲಿ, ಅಥವಾ ಓಣಿಯಲ್ಲಿ ಉಳಿದಿರುವದಿಲ್ಲ. ತಲೆತಿರುಕರೂ, ಅಜ್ಞರೂ, ಅದೂರದೃಷ್ಟಿಯವರೂ ಆದಕೆಲಜನರಿಂದ, ಜಾತಿದ್ವೇಷಮೂಲಕವಾಗಿ ಒಮ್ಮೊಮ್ಮೆ ತುಸುಗೊಂದಲವೇಳುತ್ತಿದ್ದರೂ, ಇಡಿಹಿಂದೂಸಮಾಜದ ದೃಷ್ಟಿಯಿಂದ ನೋಡಲು, ಅದು ಕೇವಲ ಕ್ಷುಲ್ಲಕವಾಗಿರುವದು. ಸುಶಿಕ್ಷಿತ ಜನರಲ್ಲಂತೂ ಜಾತಿದ್ವೇಷವು ಇಲ್ಲದಂತಾಗಿದೆ; ಮದ್ರಾಸದ ಅಯ್ಯರರು, ಪುಣೆಯ ಮರಾಠರು, ಪಂಜಾಬದ ಶೀಖರು, ಇವರೆಲ್ಲರು ಪರಸ್ಪರರ ಬಗ್ಗೆ ಪ್ರೇಮಾದರಣೆಯುಳ್ಳವರಾಗಿ ವರ್ತಿಸುವದನ್ನು ನೋಡಿದರೆ, ಬಹಳ ಕೌತುಕವೆನಿಸುವದು. ಕೆಲವು ಸುಶಿಕ್ಷಿತರು, ಹೊಲೆಮಾದಿಗರು ಮುಂತಾದ ಹಿಂದುಳಿದ ಜಾತಿಯವರು ಹಿಂದೂಸಮಾಜದ ಅವಯವವಾಗಿರುವರೆಂದು ಬಗೆದು, ಅವರಲ್ಲಿ ವಿದ್ಯಾಪ್ರಸಾರಗೊಳಿಸಿ, ಅವರ ಹೀನಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಯತ್ನಮಾಡುತ್ತಿರುವರು. ಇದಕ್ಕಿಂತ ಉದಾರಮನಸ್ಸಿನ ಸುಶಿಕ್ಷಿತರು, ಹಿಂದುಸ್ಥಾನದಲ್ಲಿಯೇ ಹುಟ್ಟಿಬೆಳೆದು ಈ ದೇಶವೇ ಮಾತೃಭೂಮಿಯೆಂದು ಬಗೆಯುತ್ತಿರುವ ಮುಸುಲ್ಮಾನರೊಡನೆ, ಅವರು ಪರಧರ್ಮಿಗಳೆಂದು ತಿಳಿಯದೆ ದೇಶಬಂಧುಗಳೆಂದು ನೆನಿಸಿ, ಅವರೊಡನೆ ಸಖ್ಯವನ್ನು ಮಾಡಲಿಕ್ಕೆ ಹೆಣಗುತ್ತಿರುವರು. ಇದಕ್ಕಿಂತ ಹೆಚ್ಚಿನ ದೂರದೃಷ್ಟಿಯ ಮಹಾತ್ಮರು

"ಈಶ್ವರೀ ಸಂಕೇತದಂತೆ ಹಿಂದುಸ್ಥಾನವು ಪಾಶ್ಚಾತ್ಯರ ಆಡಳಿತೆಗೆ ಒಳಗಾಗಿದೆ. ಅಘಟಿತ ಘಟನೆಯಾದ ಹೋಗತಕ್ಕ ಹಿಂದುಸ್ಥಾನಕ್ಕಿರುವ ಪಾಶ್ಚಾತ್ಯರ ಸಂಬಂಧವು ತಪ್ಪುವಂತೆಯಿಲ್ಲ. ಪಾಶ್ಚಾತ್ಯರಲ್ಲಿ ಅನುಕರಣೀಯವಾದ ಹಲವು ಅಮೂಲ್ಯ ಗುಣಗಳಿರುತ್ತವೆ. ಪಾಶ್ಚಾತ್ಯರ ವಿದ್ಯೆ ಕಲಿತು, ಪಾಶ್ಚಾತ್ಯರ ಕಲೆಗಳಲ್ಲಿ ಪ್ರವೀಣತೆ ಹೊಂದಿ, ಪಾಶ್ಚಾತ್ಯರ ಸದ್ಗುಣಗಳನ್ನೂ, ಸದಾಚರಣೆಗಳನ್ನೂ ಶಕ್ಯವಿದ್ದ ಮಟ್ಟಿಗೆ ಸ್ವೀಕರಿಸಿ, ಪಾಶ್ಚಾತ್ಯರ ಯೋಗ್ಯತೆಯನ್ನು ಪಡೆದು, ಪಾಶ್ಚಾತ್ಯರ ಆಧಿಪತ್ಯದಲ್ಲಿಯೇ ದೇಶದ ಉನ್ನತಿಯನ್ನೂ, ಹೆಚ್ಚಳವನ್ನೂ ಮಾಡಿ, ಪಾಶ್ಚಾತ್ಯರ ಸರಿಸಮಾನಸ್ಕಂಧರಾಗಬೇಕು; ಪಾಶ್ಚಾತ್ಯರೊಡನೆ ಸೆಣಸಿ ನಡೆಯುವದು ಸ್ವನಾಶಕ್ಕೆ ಕಾರಣವು; ಆದ್ದರಿಂದ ಪಾಶ್ಚಾತ್ಯರೊಡನೆ ಸ್ನೇಹದಿಂದಲೂ ಪ್ರೇಮದಿಂದಲೂ ನಡೆಯುವದೇ ಮೇಲಾದ ತರಣೋಪಾಯವು." ಹೀಗೆ ತಿಳಿದು ಪಾಶ್ಚಾತ್ಯರೊಡನೆ ಸಖ್ಯಬೆಳಿಸಲಿಕ್ಕೆ ಮನಮುಟ್ಟಿ ದಾವತಿಮಾಡುತ್ತಿರುವರು. ಹೀಗೆ ಹಿಂದುಸ್ಥಾನದಲ್ಲಿ ಹಿಮಾಲಯದಿಂದ ರಾಮೇಶ್ವರದ ವರೆಗೆ ಹಲವು ಬಗೆಯ ಆಂದೋಲನವು ನಡೆದಿರುವದು. ಹಿಂದೂಸಮಾಜವು ಜಾಗ್ರತೆಹೊಂದಿದ ಲಕ್ಷಣವು ಇದೇ. ಇದೆಲ್ಲವೂ ಪಾಶ್ಚಾತ್ಯ ಸುಧಾರಣೆಯ ಪರಿಣಾಮವಲ್ಲದೆ ಮತ್ತೇನಿರುವದು?

ಪಾಶ್ಚಾತ್ಯ ಸುಧಾರಣೆಯ ಪರಿಣಾಮವು ಹೀಗೆ ಅತ್ಯಂತ ಮೋಹಕವಾಗಿ ತೋರಿದರೂ, ಸ್ವತಃ ಪಾಶ್ಚಾತ್ಯರಾಷ್ಟ್ರಗಳಲ್ಲಿಯೇ ಕೆಲವು ಅನಿಷ್ಟ ಸಂಗತಿಗಳು ಮೊಳೆದೋರಹತ್ತಿರುವವು. ಉಗಿಬಂಡಿಯಿಂದ ಅತ್ಯಂತ ಲಾಭವಿರುವಂತೆ ಅದರಿಂದಾಗುವ ಅಪಘಾತವಾದರೂ ಬಲು ಭಯಂಕರವಿರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಕಡೆಗೆ ಸೂಕ್ಷ್ಮದೃಷ್ಟಿಯಿಂದ ಅವಲೋಕನ ಮಾಡುವವರಿಗೆ ಕಂಡುಬರುವದೇನೆಂದರೆ—ಅಲ್ಲಿಯ ಜನಸಮಾಜದೊಳಗಿನ ಬಲು ಸ್ವಲ್ಪ ಜನರುಮಾತ್ರ, ಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುತ್ತಾರೆ. ಲಂಡನದಲ್ಲಿ ನೋಡಿರಿ, ಪ್ಯಾರೀಸದಲ್ಲಿ ನೋಡಿರಿ, ಜರ್ಮನಿ, ಇಟಾಲಿ, ಮುಂತಾದ ಬೇರೆ ದೇಶಗಳೊಳಗಿನ ಪಟ್ಟಣಗಳಲ್ಲಿ ನೋಡಿರಿ, ಅವೆಲ್ಲವುಗಳಲ್ಲಿ ಸೌಖ್ಯದಪರಮಾವಧಿಯನ್ನು ಹೊಂದಿ, ಹೂವಿನ ಹಾಸಿಗೆಯ ಮೇಲೆ ಹೊರಳಾಡುತ್ತಿರುವ ಲಕ್ಷ್ಮೀಪುತ್ರರು ತೀರ ಸ್ವಲ್ಪಜನರಿರುವರು. ಕಳವಿಲ್ಲದ ಒಡಕಮಗಿಯಂತಿರುವ ಹೊಟ್ಟೆಯನ್ನು ಹ್ಯಾಗಾದರೂ ಮಾಡಿ ತುಂಬಿಕೊಳ್ಳುತ್ತ ಕಷ್ಟದಲ್ಲಿ ತೊಳಲಾಡುತ್ತಿರುವ ಜನರುಮಾತ್ರ ಯಥೇಷ್ಟವಾಗಿರುವರು. ಅಲ್ಲಿ ೧೦೦ಕ್ಕೆ ೧ ಜನಲಕ್ಷ್ಮೀಪುತ್ರರು ಸುಖದಪರಮಾವಧಿಯಲ್ಲಿದ್ದರೆ, ಜ್ಯೇಷ್ಠಾಲಕ್ಷ್ಮಿಯ ಇರುಬಿನಲ್ಲಿ ಒದ್ದಾಡುತ್ತಿರುವ ಬಡಜನರು ಅಸಂಖ್ಯವಾಗಿರುವರು. ಇಡಿದಿನ

ದಲ್ಲಿ ಯಃಕಶ್ಚಿತನಾಗಿದ್ದರೂ ಒಮ್ಮೆ ಲೆಕ್ಕದವಹಿಯ ಮೇಲೆ ಸಹಿಮಾಡುವ ಶ್ರೀಮಂತನು, ಸೌಖ್ಯಪರ್ವತದ ಶಿಖರದ ಮೇಲೆ ಕುಳಿತು, ಸುಖಸ್ಪರ್ಶವಾಯುವನ್ನು ಸೇವಿಸುತ್ತಿರುವನು. ಆದೇ ಅವನ ಗಿರಣಿಯಲ್ಲಿ ಮುಂಜಾವಿನಿಂದ ಸಾಯಂಕಾಲದವರೆಗೆ ದುಡಿಯುವ ಸಾವಿರಾರು ಜನರು ದುಃಖಸಾಗರದಲ್ಲಿ ಮುಳುಗುತ್ತಲೂ, ತೇಲುತ್ತಲೂ ಇರುವರು. **क्वचिद्वीणानादः क्वचिदपिच हाहेतिरुदितम्॥** ಎಂಬ ಭರ್ತೃಹರಿಯ ಮಾತು ಅಲ್ಲಿ ಪ್ರತ್ಯಕ್ಷವಾಗಿ ಕಾಣುತ್ತಿರುವದು.

"ಕೂಲಿಕಾರರಿಗೆ ಸುಖವು ಹೆಚ್ಚಾದಂತೆ ಶ್ರೀಮಂತರಿಗೆ ಸುಖಕಡಿಮೆಯೆಂಬ ವಹಿಳು ಸರ್ವಶ್ರುತವು. ವಿಲಾಯತಿಯಲ್ಲಿ ವಿದ್ಯಾಪ್ರಸಾರವು ಸಾಮಾನ್ಯಜನರಲ್ಲಿಯೂ ಹೆಚ್ಚಾಗಿರುವದರಿಂದ ಕೂಲಿಕಾರರು ತಮ್ಮ ಶ್ರಮದ ಪ್ರತಿಫಲವನ್ನು ಹೆಚ್ಚು ಹೆಚ್ಚು ಬೇಡುತ್ತಿರುವರು. ಶ್ರೀಮಂತರು ಕಟ್ಟುಮಾಡಿಕೊಂಡು, ಕೂಲಿಕಾರರ ಬೇಡಿಕೆಯನ್ನು ತಿರಸ್ಕರಿಸುವರು. ಕೂಲಿಕಾರರು ಸಹ ಕಟ್ಟುಮಾಡಿಕೊಂಡು ಕಾರಖಾನೆಗಳಿಗೆ ಹೋಗದೆ, ಶ್ರೀಮಂತರಿಗೆ ಹಾನಿತಟ್ಟುವಂತೆ ಮಾಡುತ್ತಿರುವರು. ಹೀಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಶ್ರೀಮಂತರು, ಕೂಲಿಕಾರರು ಎಂಬ ೨ ವರ್ಗಗಳುಂಟಾಗಿ ಅವುಗಳಲ್ಲಿ ಅಸಮಾಧಾನವು ಹೇರಳವಾಗಿ ಬೆಳೆದಿರುವದು.

ಹಿಂದುಸ್ಥಾನದಲ್ಲಿ ಈ ಬಗೆಯ ಅಸಮಾಧಾನವು ಹೆಚ್ಚು ಕಸುವಿನದಾಗಿರುವದಿಲ್ಲ. ಆದರೂ ಅದು ತೀರ ಇಲ್ಲೆಂದೆನ್ನಲಿಕ್ಕೆ ಬರುವಂತಿಲ್ಲ. ಪರದೇಶದವರ ಸಂಬಂಧವಿಲ್ಲದ ಕಾಲದಲ್ಲಿ ಹಿಂದೂ ಸಮಾಜವು ತನಗೆ ಆವಶ್ಯಕವಾದ ಪದಾರ್ಥಗಳನ್ನು ಹುಟ್ಟಿಸಿಕೊಂಡು ಇದ್ದದ್ದರಲ್ಲಿಯೇ ತೃಪ್ತವಾಗಿತ್ತು. ಐಷಾರಾಮದ ಒಡವೆಗಳು ಅಪರೂಪವಾಗಿದ್ದವು. ಕೊಡೆಗಳು ಸಹ ಉಚ್ಚವರ್ಗದವರಿಗೆ ಮಾತ್ರ ಮರ್ಯಾದೆಯ ಚಿಹ್ನವಾಗಿದ್ದವು! ಆದರೆ ಪಾಶ್ಚಾತ್ಯರ ಸಂಬಂಧವುಂಟಾದ್ದರಿಂದ ಉಗಿಬಂಡಿ-ಉಗಿಹಡಗಗಳ ಮೂಲಕ, ಇಡಿಜಗತ್ತಿನಕೂಡ ಹಿಂದೂ ಸಮಾಜದ ವ್ಯವಹಾರವು ಕಳೆದ ೧೦೦ ವರ್ಷಗಳಲ್ಲಿ ನಡೆಯುಹತ್ತಿರುವದು. ಅಮೇರಿಕೆಯ ಫೋನೋಗ್ರಾಫ ಮುಂತಾದವುಗಳೂ, ಜರ್ಮನಿಯ ಆಟದೊಡವೆಗಳೂ, ಬೇರೆ ಹಲವು ದೇಶಗಳ ಬಗೆ ಬಗೆಯ ಉಪಯುಕ್ತವಾದ ಹಾಗು ಸುಖೋಪಭೋಗಕ್ಕೆ ಸಾಧನವಾದ ಒಡವೆಗಳೂ, ಬೆಳ್ಳಿ ಬಂಗಾರವೂ ಹಿಂದುಸ್ಥಾನದಲ್ಲಿ ಬಂದು ತುಂಬುತ್ತಿರುವವು. ಅದರಂತೆ ಹಿಂದುಸ್ಥಾನದ ಹಲವು ಬಗೆಯ ಸರಕುಗಳು ಜಗತ್ತಿನ ಹಲವು ಭಾಗಗಳಿಗೆ ಹೋಗುತ್ತಿರುವವು. ಹೀಗಾಗಿ ಪರದೇಶದ ಸ್ಥಿತಿರೀತಿಗಳ, ಸಾಂಪತ್ತಿಕ ಸ್ಥಿತಿಯ, ಹಾಗು ಸಾಮಾಜಿಕ ವ್ಯವಸ್ಥೆಯ ಪರಿಣಾಮ

ವು ಹಿಂದುಸ್ಥಾನದಮೇಲೆಯೂ ಆಗುತ್ತಿರುವದು. ಈಗ ಕೂಲಿಯು ದರವು ಈ ದೇಶದಲ್ಲಿ ಏರಿರುವದು. ಕೂಲಿಕಾರರು ಹೆಚ್ಚು ಸಂಬಳವನ್ನು ಬೇಡುವದೂ, ಶ್ರೀಮಂತರು ಅವರನ್ನು ಕಡಿಮೆ ಕೂಲಿಕೊಟ್ಟು ದುಡಿಸಿಕೊಳ್ಳುವದಕ್ಕೆ ಯುಕ್ತಿಸುವದೂ, ಹಳ್ಳಿಗಳಲ್ಲಿ ಸಹ ತೋರಹತ್ತಿರುವದು. ಮುಂಬಯಿ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಕೂಲಿಕಾರರೂ, ಬೇರೆ ಕಡೆಯಲ್ಲಿ ರೇಲ್ವೆಯ ನೌಕರರೂ ಹೆಚ್ಚು ಸಂಬಳಬೇಡುತ್ತಿರುವರು. ಹಿಂದುಸ್ಥಾನದ ಕಾಳು ಕಡಿಗಳು ಬಹಳವಾಗಿ ಹೊರಗೆ ಹೋಗುತ್ತಿರುವದರಿಂದ ಸರಕುಗಳ ಬೆಲೆಯು ಏರಿರುವದು. ಹೀಗಾಗಿ ಅರ್ಥಶಾಸ್ತ್ರದೃಷ್ಟಿಯಿಂದಲೂ ಹಿಂದೂ ಸಮಾಜದಲ್ಲಿ ಚಲನವಲನವುಂಟಾಗಿರುವದು. ಹಿಂದುಸ್ಥಾನವು ಶಾಶ್ವತ ಶಲೆಗಳುಳ್ಳ ಒಂದು ಸರೋವರವೆಂದು ತಿಳಿದರೆ, ಇದಕ್ಕೆ ಪರದೇಶದ ಹಲವು ಸರಕುಗಳ ಪ್ರವಾಹವು ಬಂದು ಕೂಡುವದೆಂತಲೂ, ಈ ದೇಶದ ಸರಕುಗಳ ಪ್ರವಾಹವು ಪರದೇಶಗಳಿಗೆ ಹರಿದು ಹೋಗುವದೆಂತಲೂ ತಿಳಿಯತಕ್ಕದ್ದು. ಇದರಿಂದ ಹಿಂದುಸ್ಥಾನದ ಸ್ಥಿರವಾದ ದ್ರವ್ಯರೂಪ-ಜಲವು ಹೆಚ್ಚುತ್ತಿರುವದೆಂದು ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರು ಹೇಳುವರು, ಕಡಿಮೆಯಾಗುತ್ತಿರುವದೆಂದು ಹಿಂದೂ ಅರ್ಥಶಾಸ್ತ್ರಜ್ಞರು ಹೇಳುವರು. ಇದರ ನಿರ್ಣಯವನ್ನು ಮಾಡುವದು ಇಲ್ಲಿ ಅವಶ್ಯವಲ್ಲ. ಪ್ರಸ್ತುತದ ಲೇಖಕನಿಗೆ ಆ ಯೋಗ್ಯತೆಯೂ, ಜ್ಞಾನವೂ ಇರುವದಿಲ್ಲ. ಕೂಲಿಯ ದರವೂ ಕಾಳು ಕಡಿಗಳಬೆಲೆಯೂ ಕಳೆದ ೫೦ ವರ್ಷಗಳಿಗಿಂತ ಬಹಳ ಹೆಚ್ಚಾಗಿರುವದರಿಂದ, ಶ್ರೀಮಂತರಲ್ಲಿಯೂ, ಬಡವರಲ್ಲಿಯೂ ಉದ್ವೇಗವುಂಟಾಗಿರುವದೆಂಬ ಮಾತು ಮಾತ್ರ ನಿರ್ವಿವಾದವಿರುತ್ತದೆ. ಇದು ಪರಂಪರೆಯಿಂದ ಪಾಶ್ಚಾತ್ಯ ಸುಧಾರಣೆಯ ಪರಿಣಾಮವಿರುವದು. ಇದೇ ಅರ್ಥಶಾಸ್ತ್ರದೃಷ್ಟಿಯಿಂದ ಹಿಂದೂ ಸಮಾಜದಲ್ಲಿ ಸೇರಿದ ಅನಿಷ್ಟಸಂಗತಿಯು.

ಧಾರ್ಮಿಕ ದೃಷ್ಟಿಯಿಂದಲೂ ಕೆಲವು ಅನಿಷ್ಟ ಸಂಗತಿಗಳು ಹಿಂದೂ ಸಮಾಜದಲ್ಲಿ ಸೇರಿಕೊಂಡಿರುವವು. ಧರ್ಮಸಂಬಂಧದ ಕೆಲವು ಉಚ್ಛೃಂಖಲ ವಿಚಾರಗಳು ಹಬ್ಬತೊಡಗಿರುವವು. ಹಿಂದೂಧರ್ಮದ ವಿಶಿಷ್ಟತೆಯ ಲಕ್ಷಣಗಳನ್ನೆಲ್ಲ ತೊರೆದು “ ಇವನು ಯಾವಧರ್ಮದವನಿರಬಹುದು ? ” ಎಂಬ ಶಂಕೆಯುಂಟಾಗವಂತೆ ನಡೆಯುವವರೆಷ್ಟೋ ಜನರಿರುವರು. ಮದ್ಯಪಾನವು ಗೊಬ್ಬರದೊಳಭಾಗದಲ್ಲಿರುವ ಬೆಂಕಿಯಂತೆ, ಸಾವಕಾಶವಾಗಿ ಹಬ್ಬುತ್ತಲಿರುವದು. ವೈದಿಕಕಾಲದಲ್ಲಿ ಆಗುತ್ತಿದ್ದ ಯಜ್ಞಗಳಲ್ಲಿ ಕುಡಿಯುತ್ತಿದ್ದ ಸೋಮರಸವೇ ಮದ್ಯವೆಂದು ಹೆಸ

ರಿಟ್ಟು ಕೆಲವರು ಕುಡಿಯುತ್ತಿರುವರು. ಮಿತಿಮೀರಿದ ಮದ್ಯ ಸೇವನೆಯು ನೈತಿಕ-ಶಾರೀರಿಕ ಹಾನಿಯನ್ನುಂಟುಮಾಡುವದೆಂದು ಮನಗಂಡು, ಪಾಶ್ಚಾತ್ಯ ರಾಷ್ಟ್ರಗಳು ಮದ್ಯಪಾನದ ಬೆಳವಣಿಗೆಯನ್ನು ಕುಗ್ಗಿಸುವದರಲ್ಲಿ ತೊಡಗಿರಲು, ಹಿಂದೂ ಸಮಾಜವು ಮಾತ್ರ ಮದ್ಯಕ್ಕೆ ಮನಸು ಹಾಕುವದು ಲಜ್ಜಾಸ್ಪದವೂ, ಹೇಯವೂ ಅಲ್ಲವೇ? ತೇಜಸ್ಸು-ವರ್ಚಸ್ಸು-ಉತ್ಸಾಹ-ಸಾಮರ್ಥ್ಯಗಳನ್ನು ಬೆಳೆಸುವ ಸೋಮರಸವೆತ್ತ! ದೌರ್ಬಲ್ಯ-ತೇಜೋಭಂಗ-ಮಾನಹಾನಿ-ಉದಾಸೀನತೆಗಳ ಬೇರೂರಿಸುವ ಮದ್ಯವೆತ್ತ! ಬಂಗಾರವೂ, ಹೇಸಿಕೆಯೂ ಒಂದೇ ಎನ್ನಬಹುದೋ? ಇದರಂತೆ ಶೀತಕಟಿಬಂಧದಲ್ಲಿರುವ ಜನರ ಉಡಿಗೆ ತೊಡಿಗೆಯನ್ನು, ಉಷ್ಣಕಟಿಬಂಧದಲ್ಲಿರುವ ಹಿಂದೂಸಮಾಜದವರು ಕಣ್ಣುಮುಚ್ಚಿಕೊಂಡು ಅನುಸರಿಸುವದರಿಂದಲೂ, ಆಹಾರದ ಸಂಬಂಧದಿಂದ ಪಾಶ್ಚಾತ್ಯರ ಅನುಕರಣ ಮಾಡುವದರಿಂದಲೂ, ಎಷ್ಟೋ ಹಾನಿಯುಂಟಾಗಿರುವದು. ಇದೆಲ್ಲವನ್ನು ಈ ಲೇಖದ ಕೊನೆಯ ಭಾಗದಲ್ಲಿ ಚನ್ನಾಗಿ ವಿವರಿಸಲಾಗುವದು. ಸದ್ಯದಲ್ಲಿ, ಪಾಶ್ಚಾತ್ಯ ಸುಧಾರಣೆಯನ್ನು ಕಣ್ಣುಮುಚ್ಚಿಕೊಂಡು ಅನುಸರಿಸುವದರಲ್ಲಿ ತಾತ್ಪರ್ಯವಿಲ್ಲ; ಗ್ರಾಹ್ಯವಾದದ್ದನ್ನು ಮಾತ್ರ ಸ್ವೀಕರಿಸತಕ್ಕದ್ದೆಂದು ಮಾತ್ರ ಹೇಳುವೆವು. ದೇವಾಸುರರು ಸಮುದ್ರವನ್ನು ಕಡೆಯಲು, ಅಮೃತವೂ ವಾಸುಕಿಯ ಮುಖದಿಂದ ವಿಷವೂ ಹುಟ್ಟಿದವು. ಆಗ ದೇವತೆಗಳು ಅಮೃತವನ್ನು ಮಾತ್ರ ಸ್ವೀಕರಿಸಿ, ಕ್ಷೇಮಿಗಳಾದಂತೆ, ಹಿಂದೂ ಸಮಾಜದವರು ಪಾಶ್ಚಾತ್ಯ ಸುಧಾರಣೆಯ ಸಮುದ್ರದೊಳಗಿಂದ, ತಾವು ಅಜರಾಮರರಾಗುವಂತೆ ಅನುಕರಿಸತಕ್ಕ ಉತ್ತಮೋತ್ತಮ ಭಾಗವನ್ನು ಮಾತ್ರ ಸ್ವೀಕರಿಸತಕ್ಕದ್ದು. ನಾಮಶೇಷರಾಗುವಂಥ, ತಮ್ಮ ಶೀಲಕ್ಕೂ, ಸೌಜನ್ಯಕ್ಕೂ, ದೇಶಕ್ಕೂ ಅಪಕಾರಕವಾದಂಥ ಭಾಗವನ್ನು ತ್ಯಾಜ್ಯವೆಂದು ಬಿಟ್ಟುಬಿಡಬೇಕು.

ಹಿಂದೂಸಮಾಜದ ಸದ್ಯದಸ್ಥಿತಿಯ ದಿಗ್ದರ್ಶನವು ಮೇಲೆಹೇಳಿದಂತೆ ಇರುವದು. ಪಾಶ್ಚಾತ್ಯ ರಾಷ್ಟ್ರಗಳಂತೆ ಹಿಂದೂ-ಸಮಾಜದಲ್ಲಿ ವಿದ್ಯೆಯ ಪ್ರಸಾರವು ಇನ್ನೂ ಆಗಿಲ್ಲ. ನೂರರಲ್ಲಿ ೧೦ ಜನರಿಗೆ ಮಾತ್ರ ಓದುಬರಹ ಬರುತ್ತಿರುವದು. ಉಳಿದ ೯೦ ಜನರಿಗೆ ವಿದ್ಯೆಯ ಗಂಧ ಸಹ ಇರುವದಿಲ್ಲ. ಅವರಿಗೆ ಸಮಾಜವೆಂದರೇನೆಂಬದರ ಜ್ಞಾನವು ಸಹ ಇರುವದಿಲ್ಲ. ತಮ್ಮ ಬಳಗದ, ಬಹಳವಾದರೆ ತಮ್ಮ ಜಾತಿಯ ಮಟ್ಟಿಗೆ ಅವರ ದೃಷ್ಟಿ ನಿಲುಕುವದು. ಇದಿ ಹಿಂದು-ಸಮಾಜವೆಷ್ಟಿರುವು? ಅದರ ಕರ್ತವ್ಯಗಳಾವವು? ಸಮಾಜದಲ್ಲಿ ಎಷ್ಟರ ಮಟ್ಟಿಗೆ ವರ್ತನ ಸ್ವಾತಂತ್ರ್ಯವಿರುವದು? ಸಾಮಾಜಿಕ ಪರತಂತ್ರತೆಯನ್ನು ತಾಳುವದರಿಂದ

ಆಗುವ ಲಾಭ ಹಾನಿಗಳು ಯಾವವಿರುವವು? ಎಂಬ ಕಲ್ಪನೆಗಳು ಬರುವದಂತೂ ದೂರವೇ ಸರಿ. ಇದಕ್ಕೆ ವಿಪರೀತವಾಗಿ ಸಮಾಜದಲ್ಲಿ ತೀರಸ್ವಲ್ಪ ಪ್ರಮಾಣದಿಂದ ಇರುವ ಸುಶಿಕ್ಷಿತರ ವರ್ತನವಿರುವದು. ಸುಶಿಕ್ಷಿತರು ಪಾಶ್ಚಾತ್ಯ ವಿದ್ಯಾವಿಭೂಷಿತರು; ಪಾಶ್ಚಾತ್ಯವಿದ್ಯೆಯು ಹೆಣ್ಣು ಹುಲಿಯ ಹಾಲಿಗೆ ಸರಿಯಾದದ್ದು. ಅದನ್ನು ಕುಡಿದ ಸುಶಿಕ್ಷಿತರಲ್ಲಿ ಬಹು ಜನರು ಸ್ವೈರವರ್ತನದವರಾಗಿರುವರು. ಅವರು ಸಾಮಾಜಿಕ ವಿಚಾರಗಳನ್ನು ಪಾಶ್ಚಾತ್ಯ ಗ್ರಂಥಗಳಿಂದ ಚೆನ್ನಾಗಿ ಅರಿತವರಾದರೂ ಅಜ್ಞರಾದ ತಮ್ಮ ದೇಶ ಬಂಧುಗಳ ಮನಸ್ಸನ್ನು ಆಕರ್ಷಿಸಿಕೊಂಡು ಅವರಲ್ಲಿ ಕರ್ತವ್ಯಜಾಗ್ರತಿಯನ್ನುಂಟುಮಾಡುವದು ಅವರಿಂದಾಗುವದಿಲ್ಲ. ಅವರು ಬಹುಜನ ಸಮಾಜಕ್ಕೆ "ಪಶುಶಕ್ತಿ" ಎಂದು ಹೀಯಾಳಿಸುವರು; ಸಮಾಜದಲ್ಲಿ ಬಹುಶಃ ಮಿಶ್ರರಾಗದೆ ಒಂಟಿಗರಾಗಿ ಕಾಲಹರಣ ಮಾಡುವರು. ಆದ್ದರಿಂದ ಅಜ್ಞಜನರಿಗೆ ಸಾಮಾಜಿಕ ಕರ್ತವ್ಯಗಳ ತಿಳುವಳಿಕೆಯಾಗಲಿಕ್ಕೂ, ಸ್ವಸ್ಥಿತಿಯನ್ನು ಮರೆತ ಸುಜ್ಞರಿಗೆ ಪುನಃ ಅದನ್ನು ನೆನಪು ಮಾಡಿಕೊಡಲಿಕ್ಕೂ ಮನುಷ್ಯಜಾತಿಯ ಆರಂಭಕಾಲದಿಂದ ಸಮಾಜಸ್ಥಿತಿಯುಂಟಾಗುವವರೆಗೆ ವರ್ತಿಸಿದ ಸಂಗತಿಗಳನ್ನು ಅತಿ ಸಂಕ್ಷಿಪ್ತವಾಗಿ ಮುಂದಿನ ಪ್ರಕರಣದಲ್ಲಿ ವಿವರಿಸುವೆವು.

ಮನುಷ್ಯ ಸಮಾಜವು ನೆಲೆಗೊಂಡದ್ದು.

ಈಗ ಜಗತ್ತಿನಲ್ಲಿ ನೋಡಿದತ್ತೆಲ್ಲ ಮನುಷ್ಯಪ್ರಾಣಿಯ ವರ್ಚಸ್ಸೇ ಹೆಚ್ಚಾಗಿರುವದು. ಮನುಷ್ಯರಲ್ಲಿ ಹಿಂದೂ-ಕ್ರಿಸ್ತೀ-ಮುಸಲ್ಮಾನೀ ಮುಂತಾದ ಹಲವು ಸಮಾಜಗಳುಂಟಾಗಿರುವವು. ಈ ಬಗೆಯ ಸಾಮಾಜಿಕ ಸ್ಥಿತಿಯು ಅತಿ ಪ್ರಾಚೀನ ಕಾಲದಿಂದ ಇದ್ದದ್ದಲ್ಲ. ಮನುಷ್ಯಪ್ರಾಣಿಯು ಜಗತ್ತಿನಲ್ಲಿ ತಲೆದೋರಿ ಲಕ್ಷಾವಧಿ ವರ್ಷಗಳಾದಮೇಲೆ ಮನುಷ್ಯನು ಸಮಾಜಪ್ರಿಯನಾಗಿರುವನೆಂದು ವಿದ್ವಾಂಸರು ಗೊತ್ತುಹಚ್ಚಿರುತ್ತಾರೆ. ಈ ಸಂಗತಿಯು ವಿಶದವಾಗಿ ತಿಳಿಯಬೇಕಾದರೆ, ತುಸು ಮಟ್ಟಿಗೆ ಭೂಗೋಲದ ಇತಿಹಾಸವು ಗೊತ್ತಾಗುವದು ಅವಶ್ಯವದೆ. ಶಾಸ್ತ್ರಜ್ಞರು ಹೇಳುವದೇನಂದರೆ—

ಭೂಮಿಯು ಸೂರ್ಯಗೋಲದಿಂದ ಸಿಡಿದು ಬಂದಿರುವದು. ಆಗ ಅದು ತಪ್ತರಸರೂಪಗೋಲವಾಗಿತ್ತು. ಬರಬರುತ್ತ ಅದು ಆರಿ ತಣ್ಣಗಾದಮೇಲೆ ನೀರು ನೆಲೆಗೊಂಡಿತು. ಆಗ ಎಡೆಬಿಡದೆ ಆಗುತ್ತಿದ್ದ ಭೂಕಂಪ ಜ್ವಾಲಾಮುಖಿಗಳ ಮೂಲಕವಾಗಿ, ನೆಲವುಂಟಾಯಿತು. ಆಗಿನ ಹವೆಯಲ್ಲಿ ಕಾರ್ಬನ್ನು ಹೆಚ್ಚಾಗಿತ್ತು.

ಭೂಮಿಯು ತುಂಬ ವಿಸ್ತೀರ್ಣವಾದ ಅರಣ್ಯಗಳು ತುಂಬಿದ್ದವು. ಆ ಅರಣ್ಯಗಳೇ ಈಗ ಕಲ್ಲಿದ್ದಲಿಯ ರೂಪದಿಂದ ನೆಲದಲ್ಲಿ ಹೂಳಿರುವವು. ನೀರಲ್ಲಿ ಸುಲಭಶರೀರರಚನೆಯುಳ್ಳ ಅಸಂಖ್ಯಪ್ರಾಣಿಗಳು ಹುಟ್ಟಿದವು. ನೆಲದಲ್ಲಿ ದೊರೆಯುವ ಸುಣ್ಣದ ಕಲ್ಲುಗಳೇ ಆಗಿನ ಪ್ರಾಣಿಗಳ ಎಲುವಿನ ರೂಪಾಂತರವು. ಹವೆಯೊಳಗೆ ಕಾರ್ಬೋನ್ನು ಕಡಿಮೆಯಾದಂತೆ ದ್ವಿಚರ (ನೀರು ನೆಲಗಳಲ್ಲಿ ಸಮನಾಗಿ ಬದುಕುವ) ಪ್ರಾಣಿಗಳುಂಟಾದವು. ಆಗಿನ ಪ್ರಾಣಿಗಳು ಬಲು ಭಯಂಕರವೂ ಕ್ರೂರವೂ ಆಗಿದ್ದವು. ಎಲ್ಲಕ್ಕೂ ಕಡೆಯಲ್ಲಿ ಕಾಡುಸ್ಥಿತಿಯ ಮನುಷ್ಯನು ಮೈದೋರಿದನು. ಬಳಿಕ ಉತ್ಕ್ರಾಂತಿ ತತ್ವದಂತೆ ಸುಧಾರಣೆಯಾಗುತ್ತಾಗುತ್ತ ಮಾನವ ಪ್ರಾಣಿಯು ಬಲಿಷ್ಠನಾಗಿ ಈಗಿನ ಸ್ಥಿತಿಯನ್ನು ಹೊಂದಿರುವನು. ಯುರೋಪದ ಆಧುನಿಕ ಪಂಡಿತರು ಶೋಧಿಸಿರುವ ಈ ಮೇಲಿನ ಸಂಗತಿಯನ್ನೇ ಸಾವಿರಾರು ವರ್ಷಗಳ ಹಿಂದೆ ವೈದಿಕ ಋಷಿಗಳು ಗ್ರಂಥಗಳಲ್ಲಿ अद्भ्यः पृथिवी । पृथिव्या ओषधयः। ओषधेरन्नं । अन्नाद्भूतानि । ಎಂಬ ವಾಕ್ಯಗಳಿಂದ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಅವನ್ನು ನೋಡುವವರಾರು? ವಿಚಾರ ಮಾಡುವವರಾರು? ಪಾಶ್ಚಾತ್ಯ ಶೋಧಗಳಿಂದ ಮಾತ್ರ ಕೌತುಕಾನಂದಗಳನ್ನು ಹೊಂದುವ ಋಷಿಕುಮಾರರು ಈಗ ಹೇರಳವಾಗಿದ್ದಾರೆ.

ಸೃಷ್ಟಿಯಲ್ಲಿಯೂ ಬ್ರಹ್ಮಮಯವೆಂಬ ವಿಚಾರವು ಸತ್ಯವಿದ್ದರೆ, ಹಿಂದೂದೇವರ ಅವತಾರಗಳ ಕ್ರಮವು ಸಹ ಪಾಶ್ಚಾತ್ಯರ ಶೋಧಕ್ಕೆ ಹೊಂದುತ್ತದೆ. ವಿಷ್ಣುವಿನ ದಶಾವತಾರಗಳ ಕ್ರಮವು ಹೇಗೆಂದರೆ:—"ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ। ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ದಶಾಕೃತಿಃ" ಆರಂಭದಲ್ಲಿ ಜಗತ್ತೆಲ್ಲ ಜಲಮಯವಾಗಿ ಗೋಚರವಾಯಿತು. ಜಲದಲ್ಲಿ ಚೈತನ್ಯವು ಮತ್ಸ್ಯರೂಪವನ್ನು ಆಶ್ರಯಿಸಿತು. ಬಳಿಕ ನೀರಲ್ಲಿ ಬಹಳ ಕಾಲವೂ ನೆಲದಲ್ಲಿ ಸ್ವಲ್ಪಕಾಲವೂ ಇರುವ ಕೂರ್ಮರೂಪವಾಗಿ ಇರಹತ್ತಿತು. ಬಳಿಕ ನೀರಲ್ಲಿ ತುಸುಕಾಲವೂ ನೆಲದಮೇಲೆ ಬಹಳಕಾಲವೂ ವಾಸಿಸುವ ವರಾಹರೂಪವನ್ನು ಧರಿಸಿತು. ಬಳಿಕ ಅರೆವಾಸಿ ಮೃಗರೂಪವೂ ಅರೆವಾಸಿ ಮಾನವಸ್ಥಿತಿಯೂ ಇರುವ ನಾರಸಿಂಹರೂಪವನ್ನು ಧರಿಸಿತು. ಮನುಷ್ಯನು ಪ್ರಾಚೀನಕಾಲದಲ್ಲಿ ತೀರ ಕಾಡುಸ್ಥಿತಿಯಲ್ಲಿದ್ದನೆಂದು ಪಾಶ್ಚಾತ್ಯರು ಹೇಳುವ ಮಾತಿನ ತಾತ್ಪರ್ಯವು ಇದೇ ಇರಬಹುದಲ್ಲವೇ? ಬಳಿಕ ಉತ್ಕ್ರಾಂತಿಯಾಗುತ್ತ ನಡೆಯಲು ಮನುಷ್ಯನು ಕೊಡಲಿಯಂಥ ಸುಲಭನಾದ ಆಯುಧವನ್ನು ಧರಿಸಿ, ಇತರ

ಪ್ರಾಣಿಗಳ ಮೇಲೆ ವರ್ಚಸ್ಸನ್ನು ಪಡೆದನು. ಬಳಿಕ ಸಮಾಜವನ್ನು ಕಟ್ಟಿಕೊಂಡು ಇರಹತ್ತಿದನು. ಸಮಾಜದ ಬಾಲ್ಯಾವಸ್ಥೆಯಲ್ಲಿ ಬಹುಶಃ ತಗಲು-ತಾಟು ಗಳಿಲ್ಲದೆ, ಅತ್ಯಂತ ಉತ್ತಮ ನೀತಿಯಿಂದ ನಡೆದನು. ಸಮಾಜವು ಬೆಳೆದಂತೆ ಹಲವು ಬಗೆಯ ತೊಡಕುಳ್ಳ ವಿಚಾರಗಳನ್ನು ಬಗೆಹರಿಸಲಿಕ್ಕೆ ತರತರದ ಯುಕ್ತಿ ಗಳನ್ನು ಮಾಡುತ್ತ ಬಾಳಿದನು. ಬರಬರುತ್ತ ಸಾಮಾಜಿಕ-ಧಾರ್ಮಿಕಜ್ಞಾನವು ಹೆಚ್ಚಾಗಿ ಈಗಿನ ಪರಿಣತಸ್ಥಿತಿಯನ್ನು ಹೊಂದಿದನು. ಇನ್ನು ಮುಂದೆ ಜನ ಸಂಖ್ಯೆಯು ಹೆಚ್ಚಾಗಿ, ಉಪಜೀವನದ ಸಾಧನಗಳೂ, ನೆಲೆಗೊಳ್ಳಲಿಕ್ಕೆ ನೆಲವೂ ಸಾಲದ ಹಾಗಾದ ಬಳಿಕ, ಮನುಷ್ಯನು ಏನೇನು ಅನನ್ವಿತಕೃತ್ಯಗಳನ್ನು ಮಾ ಡುವನೆಂಬದನ್ನು ತರ್ಕಿಸಲಿಕ್ಕೆ ಯಾರು ಶಕ್ತರು? ಎಷ್ಟೋ ಜನಾಂಗಗಳು ತಮ್ಮ ಮುಂದಿನ ಪೀಳಿಗೆಗೋಸ್ಕರ ಜ್ಞಾತ ಭೂಪ್ರದೇಶವನ್ನು ಈಗಲೇ ಕಾಯ್ದಿಟ್ಟು ಕೊಂಡು (*Reserved*)ಬೇರೆ ಸಮಾಜದವರನ್ನು ಬರಗೊಡದೆ, ಜೀವನಕಲಹ ಕ್ಕೆ ಕಳೆ ಏರುವಂತೆ ಮಾಡಿರುವವು.

ಹೀಗೆ ಅತಿ ಪ್ರಾಚೀನಕಾಲದಿಂದ ಮನುಷ್ಯನು ಉತ್ಕ್ರಾಂತಿ ತತ್ವದಂತೆ ಸು ಧಾರಣೆಹೊಂದುತ್ತ ನಡೆದಿದ್ದರೂ ಈಗ ತೋರುವ ಪಾಶ್ಚಾತ್ಯ ಸುಧಾರಣೆಯು ನಾಲ್ಕೈದು ನೂರು ವರ್ಷಗಳ ಈಚೆಯದೆಂದು ಹೇಳಬಹುದು. ಅದಕ್ಕೂ ಪೂರ್ವ ದಲ್ಲಿ, ಅಂದರೆ ಮನುಷ್ಯಪ್ರಾಣಿಯು ಸೃಷ್ಟಿಯಲ್ಲಿ ಪ್ರವೇಶಮಾಡಿದ ಬಳಿಕ ಸುಧಾರ ಣಾಸೂರ್ಯನ ಬಾಲಕಿರಣಗಳು ಮನುಷ್ಯರೂಪ-ಪರ್ವತದ ಅತ್ಯುಚ್ಚ ಶಿಖರದ ಮೇಲೆ ಬೀಳುವವರೆಗೆ, ಅಮರ್ಯಾದ ಕಾಲವು ಕಳೆದುಹೋಗಿರುವದು. ಭೂಮಿ ಯಮೇಲೆ ಹಿಮಪ್ರಳಯವು ೨೬೦೦೦ ವರ್ಷಗಳಿಗೊಂದುಸಾರೆ ಆಗುವದೆಂದು ಜ್ಯೋತಿಷಶಾಸ್ತ್ರವಿಶಾರದರು ಲೆಕ್ಕಮಾಡಿ ಹೇಳುತ್ತಾರೆ. ಅಂಥ ಎಷ್ಟೋ ಹಿಮಪ್ರಳಯಗಳು ಆಗಿಹೋಗಿರುವವು. ಎಲ್ಲಕ್ಕೂ ಕೊನೆಯ ಹಿಮಪ್ರಳಯವಾಗಿ ಕನಿಷ್ಠ ೬೦೦೦ ವರ್ಷಗಳಾಗಿರುವವೆಂತಲೂ, ಆ ಹಿಮಪ್ರಳಯದ ಮೂಲಕವಾಗಿ ಯೇ ಹಿಂದೂ ಆರ್ಯರು ತಮ್ಮ ಉತ್ತರಧ್ರುವದ ಸೆರೆಯಲ್ಲಿದ್ದ ವಾಸಸ್ಥಾನವನ್ನು ಬಿಟ್ಟು ದಕ್ಷಿಣಕ್ಕೆ ತೆರಳಿ ಬಂದರೆಂತಲೂ, ಆ ಹಿಮಪ್ರಳಯದ ಪೂರ್ವದಲ್ಲಿಯೇ ವೈದಿಕ ಮಂತ್ರಗಳನ್ನು ಅಂದು, ದೇವತೆಗಳನ್ನು ಪ್ರಾರ್ಥಿಸುವಷ್ಟು ಜ್ಞಾನವು ಅವ ರಲ್ಲಿ ಉಂಟಾಗಿತ್ತೆಂತಲೂ, ಅದರಿಂದಲೇ ವೈದಿಕ ಋಷಿಗಳಿಗೆ ಮಂತ್ರಕರ್ತರೆನ್ನದೆ ಮಂತ್ರದ್ರಷ್ಟೃಗಳೆನ್ನುವರೆಂತಲೂ ವಿಂದ್ವಾಂಸರು ಶೋಧಮಾಡಿದ್ದಾರೆ. ಕೊನೆ ಯ ಹಿಮಪ್ರಳಯದ ಪೂರ್ವದಲ್ಲಿದ್ದ ಮನುಷ್ಯಸಮಾಜದಲ್ಲಿ ಹ್ಯಾಗೆ ಹ್ಯಾಗ

ಸುಧಾರಣೆಯಾಗುತ್ತ ಹೋಗಿರುವದೆಂಬ ಸಂಗತಿಯನ್ನು ಕಲ್ಪಿಸಲಿಕ್ಕೆ ಸಹ ಶಕ್ಯವಲ್ಲ. ಯುರೋಪದಲ್ಲಿ ರೋಮರಾಜ್ಯವೂ, ಹಿಂದುಸ್ಥಾನದಲ್ಲಿ ಬೌದ್ಧಧರ್ಮವೂ ನೆಲೆಗೊಂಡ ಕಾಲದಿಂದ ಮಾತ್ರ ಇತಿಹಾಸಕ್ಕೆ ತಕ್ಕಮಟ್ಟಿಗೆ ಮೂರ್ತಸ್ವರೂಪವುಂಟಾಗಿದೆ. ಅದಕ್ಕೂ ಪೂರ್ವದಲ್ಲಿದ್ದ ರಾಮರಾಜ್ಯದ, ಕೌರವ-ಪಾಂಡವರ ರಾಜ್ಯದ ಇತಿಹಾಸವೂ, ಬಾಬಿಲೋನಿಯಾ-ಮೀಡಿಯಾ-ಆಸೀರಿಯಾ ಪ್ರಾಂತಗಳ ಇತಿಹಾಸವೂ ತೀರ ಮಸಮಸಕಾಗಿ ಗೊತ್ತಾಗಿರುತ್ತವೆ. ಈ ಪ್ರಾಚೀನ ರಾಷ್ಟ್ರಗಳ ಪೂರ್ವಕಾಲದಲ್ಲಿದ್ದ ಮಾನವಸಮಾಜದ ಇತಿಹಾಸವಂತೂ ಕಾಲಜವನಿಕೆಯ ಒಡಲಲ್ಲಿ ಅಡಗಿ ಹೋಗಿರುವದು.

ಹೀಗಿದ್ದರೂ ಹತಾಶರಾಗುವಕಾರಣವಿಲ್ಲ. ರಾಮರಾಜ್ಯದ, ಅಥವಾ ಮೀಡಿಯಾ ಮುಂತಾದ ಪ್ರಾಚೀನರಾಜ್ಯಗಳ ಮಸಮಸಕಾದ ಇತಿಹಾಸದಿಂದಲೂ, ಭೂಗರ್ಭಶಾಸ್ತ್ರದ ಶೋಧಗಳಿಂದಲೂ, ಜ್ಯೋತಿಷಶಾಸ್ತ್ರದ ಸಹಾಯದಿಂದಲೂ, ಮಾನವಜಾತಿಯ ಆರಂಭದಿಂದ ಈ ವರೆಗೆ ಹಾಗೇ ಉಳಿದಿರುವ, ಬಹಳವಾದರೆ ತೀರಕಡಿಮೆ ಸುಧಾರಿಸಿರುವ ಭಿಲ್ಲ, ಸಂತಾಳ, ಮಾವೋರೀಜ (ನ್ಯೂಝೀಲಂಡದ ಮೂಲನಿವಾಸಿಗಳು) ಕೆಂಪುಇಂಡಿಯನ್ (ಅಮೇರಿಕದ ಮೂಲನಿವಾಸಿಗಳು) ಮುಂತಾದ ಗುಡ್ಡಗಾಡಜನರ ಸ್ಥಿತಿಯಿಂದಲೂ, ಕಾಲನು ಇಳಿಬಿಟ್ಟಿರುವ ತೆರೆಯ ಮರೆಗೆ ಇರುವ ಅತಿ ಪ್ರಾಚೀನಕಾಲದ ಸಮಾಜಸ್ಥಿತಿಯನ್ನು ತಕ್ಕಮಟ್ಟಿಗೆ ತಿಳಕೊಳ್ಳಲಿಕ್ಕೆ ಬರುವಂತಿದೆ. ಈ ದೊರೆತಿರುವ ಸಾಧನಗಳಿಗೆ ಉತ್ಕ್ರಾಂತಿ ತತ್ವಗಳನ್ನು ಹಚ್ಚಿ ನೋಡಿದರೆ, ಮನುಷ್ಯನು ಪ್ರಗತಿ ಹೊಂದಲಿಕ್ಕೆ ಕಾರಣಗಳಾವವಾದವೆಂಬದು ಸ್ಥೂಲಮಾನದಿಂದಾದರೂ ಗೊತ್ತಾಗುವದು.

ಮನುಷ್ಯನು ಸೃಷ್ಟಿಯಲ್ಲಿ ಪ್ರವೇಶ ಮಾಡಿದ ಕಾಲದಲ್ಲಿದ್ದ ಸ್ಥಿತಿಗೂ ಈಗಿನ ಸ್ಥಿತಿಗೂ ಮಹದಂತರವುಂಟೆಂಬದನ್ನು ಪುನಃ ಹೇಳುವಕಾರಣವಿಲ್ಲ. ಮನುಷ್ಯನು ಕಾಡುಸ್ಥಿತಿಯಲ್ಲಿದ್ದಾಗ ಅವನೊಡನೆ ಜಗತ್ತಿನಲ್ಲಿ ಸ್ವೈರ ಸಂಚಾರ ಮಾಡುತ್ತಿದ್ದ ಸಿಂಹ, ಹುಲಿಮುಂತಾದ ಮೃಗಗಳೊಡನೆ, ಹಾಗು ಈಗ ಹೆಸರಿಗೆ ಸಹ ಉಳಿಯದಿದ್ದ, ಅವಕ್ಕೂ ಹೆಚ್ಚು ಬಲಾಢ್ಯವಾದ ಕ್ರೂರಪ್ರಾಣಿಗಳೊಡನೆ ಘೋರ ಸಂಗ್ರಾಮವನ್ನು ಮಾಡಿದನು. ಆರಂಭದಲ್ಲಿ "ಆಹಾರ ನಿದ್ರಾ ಭಯ ಮೈಥುನಾನಿ ಸಾಮಾನ್ಯ ಮೇತತ್ಪಶುಭಿರ್ನರಾಣಾಂ" ಎಂಬಂತೆ ಮನುಷ್ಯನು ಇತರ ಪಶುಗಳಿಗೆ ಸಮಾನನಾಗಿಯೇ ಇದ್ದನು. ಗುಡ್ಡಗಳೊಳಗಿನ ನೈಸರ್ಗಿಕ ವಿವರಗಳೂ, ಗವಿಗಳೂ, ದೊಡ್ಡ ಗಿಡಗಳ ಪೊದರುಗಳೂ, ಅವನ ವಸತಿಸ್ಥಾನಗಳಾಗಿ

ದ್ದೇವು. ಅವನ ಶಾರೀರಿಕ ಸಾಮರ್ಥ್ಯವು ಇತರ ಪಶುಗಳಿಗಿಂತ ಬಹಳ ಕಡಿಮೆ ಯಿತ್ತು. ಇಂಥ ಕಷ್ಟಮಯ ಸ್ಥಿತಿಯಲ್ಲಿ ಎಷ್ಟೋ ಸಹಸ್ರ ವರ್ಷಗಳು ಸಂದಿ ಹೋದವು. ಕ್ರಮೇಣ ಬುದ್ಧಿಯು ಬೆಳವಣಿಗೆಯಾದಂತೆ, ಆಯುಧಗಳನ್ನು ಉಪ ಯೋಗಿಸುವದು ಅವನಿಗೆ ಗೊತ್ತಾಯಿತು. ಮೊದ ಮೊದಲು ಬಿಣಚುಗಲ್ಲಿನ, ಇಲ್ಲವೆ ಎಲುವಿನ ಆಯುಧಗಳನ್ನು ಮಾಡಿಕೊಂಡನು. ಚರ್ಮದ ಉಡುಪುಗಳ ನ್ನು ಧರಿಸಿದನು. ಆಯುಧಗಳ ಉಪಯೋಗದಿಂದ ಬಲಿಷ್ಠನಾಗಿ ಉಳಿದ ಪ್ರಾಣಿ ಗಳನ್ನು ಸಂಹರಿಸಿ, ಇಲ್ಲವೆ ಅಂಕಿತವಾಗಿ ಮಾಡಿಕೊಂಡು, ತಾನೂ ತನ್ನ ಪೀಳಿ ಗೆಯೂ ಸುಖದಿಂದ ಕಾಲಹರಣಮಾಡುವಂತೆ ವ್ಯವಸ್ಥೆ ಮಾಡಿಕೊಂಡನು. ಉ- ತ್ಕ್ರಾಂತಿ ತತ್ವವಾದರೂ ಇದೇ ಮಾತನ್ನೇ ಹೇಳುತ್ತದೆ, ಏನಂದರೆ “ ಯಾ- ವನು ಸ್ವತಃ ಬಲಿಷ್ಠನಿರುವನೋ, ಯಾವನು ಚುರುಕುಬುದ್ಧಿಯುಳ್ಳವನಿದ್ದು, ತೀಕ್ಷ್ಣವಾದ ಆಯುಧಗಳನ್ನು ಮಾಡಿಕೊಂಡು, ಅವನ್ನು ಉಪಯೋಗಿಸಿಕೊಳ್ಳು ವನೋ, ಅವನೆದುರಿಗೆ, ದುರ್ಬಲನೂ ಹರಕುಮುರುಕು ಕೈದುಗಳನ್ನು ಉಪಯೋ ಗಿಸುವವನೂ ಆದ ಮನುಷ್ಯನು ಕ್ಷಣಮಾತ್ರವಾದರೂ ನಿಂತುಕೊಳ್ಳಲಾರನು. ದುರ್ಬಲನು ಬಲಿಷ್ಠನ ದೆಸೆಯಿಂದ ತನ್ನ ಸಂಸಾರವನ್ನು ಕಟ್ಟಲಿಕ್ಕೆ ಬೇಕು. ಹಾಗು ಈ ಜಗತ್ತನ್ನು ಬಲಿಷ್ಠನಿಗೋಸ್ಕರ ತೆರವು ಮಾಡಲಿಕ್ಕೆ ಬೇಕು. ಮತ್ತು ಬುದ್ಧಿವಂತನೂ ಬಲವಂತನೂ ಆದವನ ಪಾಲಿಗೆ ಜಗತ್ತಿನ ಸ್ವಾಮಿತ್ವವು ಬರಲೇ ಬೇಕು ” ಇದರಿಂದ ನೋಡಲು, ಯೋಗ್ಯತೆಯಿದ್ದವನೇ ಜಗತ್ತಿನ ಜೀವನಾರ್ಥ ಕಲಹದಲ್ಲಿ ಕಾಲೂರಿನಿಲ್ಲುವನು. ಎಂಬ ಮಾತು ಸ್ಪಷ್ಟವಾಗುತ್ತದೆ.

ಹೀಗೆ ವ್ಯಕ್ತಿಮಾತ್ರನಾಗಿ ಶ್ರೇಷ್ಠತೆಯನ್ನು ಹೊಂದಿ ಮನುಷ್ಯನು ಸಾವಿರಾರು ವರ್ಷ ಕಾಲಹರಣ ಮಾಡಿದನು. ಆ ಮೇಲೆ ಒಂಟಿಗನಾಗಿರುವದು ಅಸಹ್ಯವಾ ದದರಿಂದಲೂ, ಸಮಾಜಮಾಡಿಕೊಂಡು ಗುಂಪುಗೂಡಿ ಇರುವದರಿಂದ ಹಲವು ಬಗೆಯ ಅನುಕೂಲತೆಗಳಿರುವವೆಂದು ಕಂಡುಬಂದದ್ದರಿಂದಲೂ ಆತನು ಸಮಾಜ ಮಾಡಿಕೊಂಡು ಇರಹತ್ತಿದನು. ಹೀಗೆ ಹಲವು ಸಮಾಜಗಳುಂಟಾದವು. ಆ ಸಮಾ ಜಗಳಲ್ಲಿ ಬಲಿಷ್ಠ ಸಮಾಜದ ಸ್ಥಾಪನೆಯೂ, ದುರ್ಬಲಸಮಾಜದ ಸಮೂಲ ನಾಶವೂ ಆಗಹತ್ತಿ, ಜೀವನಾರ್ಥ ಕಲಹವು ಬೆಳೆಯಿತು. “ಸಂಘೇ- ಶಕ್ತಿಃ ಕಲೌಯುಗೇ ” ಎಂಬಂತೆ ಸಮಾಜವು ದೊಡ್ಡದಿದ್ದಂತೆ ಶಕ್ತಿ ಹೆಚ್ಚೆಂಬ ಭಾ ವನೆಯಿಂದ ದೊಡ್ಡದೊಡ್ಡ ಮಾನವ ಸಮಾಜಗಳುಂಟಾದವು. ಈ ಸ್ಥಿತಿಯುಂಟಾಗ ಲಿಕ್ಕೂ ಹಲವುಸಾವಿರ ವರ್ಷಗಳು ಕಳೆದುಹೋಗಿರಬಹುದು. ಹೀಗೆ ಮನುಷ್ಯನು

ಒಂಟಿಗನಾಗಿ ಕಾಲಹರಣಮಾಡುತ್ತಿದ್ದ ಕಾಲದಿಂದ, ಆತನು ಸಮಾಜಪ್ರಿಯನಾಗುವ ಕಾಲದವರೆಗೆ, ಲಕ್ಷಾವಧಿವರ್ಷಗಳು ಕಳೆದು ಹೋಗಿರಬಹುದು. ಮನುಷ್ಯಸಮಾಜಗಳುಂಟಾದರೂ ಹೆಚ್ಚಿನ ಯೋಗ್ಯತೆಯ ಸಮಾಜದ ಸ್ಥಾಪನೆಯೂ, ಜೀವನಾರ್ಥಕಲಹವೂ ಕಡಿಮೆಯಾಗದೆ ಅಸಂಖ್ಯಪ್ರಾಣಿಗಳು ಅಸುವನ್ನು ಕಳಕೊಂಡವು. ಬಲಿಷ್ಠಸಮಾಜವು ಜಯಶಾಲಿಯಾಯಿತು. ಈ ವಿವರಣೆಯಿಂದ, ಕಾಕೇಸಸ್ ಪರ್ವತದ ಹತ್ತಿರ ಇದ್ದ ಆರ್ಯಸಮಾಜವು, ಯುರೋಪ–ಹಿಂದುಸ್ಥಾನಗಳಲ್ಲಿ ಯಾಕೆ ಸ್ವಾಮಿತ್ವವನ್ನು ಪಡೆಯಿತೆಂಬುದರ ಕಲ್ಪನೆಯು ಚೆನ್ನಾಗಿ ಆಗುವದು. ಇಷ್ಟೆಲ್ಲ ಆಗುವಾಗ ಆ ಸಮಾಜದ ನಿತ್ಯವ್ಯವಹಾರದಲ್ಲಿಯೂ, ಶರೀರರಚನೆಯಲ್ಲಿಯೂ, ಆಹಾರವಿಹಾರಗಳಲ್ಲಿಯೂ ಎಷ್ಟು ಸ್ಥಿತ್ಯಂತರವಾಗಿದ್ದೀತೆಂಬ ಸಂಗತಿಯನ್ನು ಆಲೋಚಿಸಹತ್ತಿದರೆ, ಕಲ್ಪನಾಶಕ್ತಿಯು ಸಹ ಕುಂಠಿತವಾಗುವದು.

ಮನುಷ್ಯರು ಗುಂಪುಗುಂಪಾಗಿ ಇರಹತ್ತಿದ ಬಳಿಕ ಕೆಲವು ಗುಂಪಿನವರು ಸಾವಕಾಶವಾಗಿ ಸುಧಾರಿಸಹತ್ತಿದರು. ಕೆಲವರು ಮೂಲಸ್ಥಿತಿಯಲ್ಲಿ ಹಾಗೇ ಉಳಿದರು. ಅವರೇ ವನಚರರು. ಸಾವಕಾಶವಾಗಿ ಆದ ಸುಧಾರಣೆಯೆಂದರೆ, ಈಗಿನ ಕಾಲದಲ್ಲಿ ಆದ ತೀರ ಕ್ಷುಲ್ಲಕ ಸುಧಾರಣೆಯು. ಬೇಟೆಯಾಡುತ್ತ, ಮಾಂಸಾಹಾರ ಮಾಡುತ್ತ ಇದ್ದ ಕಾಲವು ಹೋಗಿ, ದನಗಳನ್ನು ಕಟ್ಟಿಕೊಂಡು, ಹಾಲು ಕುಡಿಯುತ್ತ ಚರ್ಮದ ಹೊದಿಕೆಯನ್ನು ಮಾಡಿಕೊಳ್ಳುತ್ತ ಇದ್ದದ್ದು, ಎಲ್ಲಕ್ಕೂ ಆರಂಭದ ಸುಧಾರಣೆಯು. ಎಷ್ಟೋ ಕಾಲವು ಸಂದಮೇಲೆ ಭೂಕಂಪ, ಜ್ವಾಲಾಮುಖಿಗಳ ಮೂಲಕವಾಗಿಯಾಗಲಿ, ಕಾಡುಬೇಗೆಯನ್ನು ನೋಡಿಯಾಗಲಿ, ಅಗ್ನಿಯು ದೃಗ್ಗೋಚರನಾದನು. ಅಗ್ನಿಯ ಉಪಯೋಗವು ಅವರಿಗೆ ಚೆನ್ನಾಗಿ ಅನುಭವಕ್ಕೆ ಬರಹತ್ತಿತು. ಶೀತನಿವಾರಣೆ ಮಾಡಿಕೊಳ್ಳಲಿಕ್ಕೂ, ಆ ಕಾಲದಲ್ಲಿ ಗೊತ್ತಾಗಿದ್ದ ಬತ್ತ, ಗೋದಿ, ಎಳ್ಳು ಮುಂತಾದ ಕಾಳುಗಳನ್ನು ಬೇಯಿಸಿ ರುಚಿಕರವಾದ ಆಹಾರವನ್ನು ಸಿದ್ಧಪಡಿಸಿಕೊಳ್ಳಲಿಕ್ಕೂ ಅಗ್ನಿಯೇ ಮೇಲಾದ ಸಹಾಯಕನೆಂಬದನ್ನು ಅರಿತುಕೊಂಡರು. ಆದ್ದರಿಂದ ಅಗ್ನಿಯು ದೇವರೆಂದು ಭಾವಿಸಿದರು. ಋಗ್ವೇದದ ಎಲ್ಲಕ್ಕೂ ಆರಂಭದ ಸೂಕ್ತದಲ್ಲಿ "ಅಗ್ನಿಮೀಳೆ ಪುರೋಹಿತಂ" ಎಂದು ಅಗ್ನಿಯನ್ನು ಸ್ತುತಿಸಿದ ಕಾರಣವು ಇದೇ ಇರಬಹುದು. ಬಳಿಕ ಹತ್ತಿಯಿಂದ ನೂಲು ಆಗುವದೂ, ನೂಲಿನ ಹೆಣಿಕೆಯಿಂದ ವಸ್ತ್ರಗಳಾಗುವದೂ ಗೊತ್ತಾಗಿ, ಹತ್ತಿಯ ಉಪಯೋಗವನ್ನು ಪ್ರಪಂಚದಲ್ಲಿ ಚೆನ್ನಾಗಿ ಅರಿತು, ಅದರ ಸತ್ಕಾರವನ್ನು ಈವರೆಗೂ ಮಾಡುತ್ತಿರುವರು.

ಹೀಗೆ ಬೆಂಕಿ, ಹತ್ತಿಗಳ ಉಪಯೋಗವು ಗೊತ್ತಾದಷ್ಟು, ಈಗ ತೀರ ಕ್ಷುಲ್ಲಕ ಸುಧಾರಣೆಯೆಂದು ತೋರಿದರೂ, ಆ ಕಾಲದಲ್ಲಿ ಅದೇ ಎಲ್ಲಕ್ಕೂ ಮಹತ್ವದ ಸುಧಾರಣೆಯು. ಇಷ್ಟೇ ಸುಧಾರಣೆಯು ಅವರ ಜೀವನಕ್ಕೆ ಸಾಕಾಯಿತು. ಧಾತುಗಳ ಶೋಧವು ಎಂದೋ, ಯಾವಾಗಲೋ ಆಗಿದ್ದರೂ ಅವುಗಳಿಂದ ಆಯುಧಗಳಲ್ಲಿ ಮಾತ್ರ ತಿದ್ದು ಪಡಿಯಾಯಿತು. ಆದರೆ ಈ ಎಲ್ಲ ಸುಧಾರಣೆಯು, ಕಳೆದ ನಾಲ್ಕೈದು ನೂರು ವರ್ಷಗಳಲ್ಲಿ ಆದ ಸುಧಾರಣೆಯ ಪಾಸಂಗಕ್ಕೆ ಸಹ ಹತ್ತುವಂತಿಲ್ಲ. ಕೆಲವರು ಅಥರ್ವವೇದದಲ್ಲಿ ಈಗಿನ ಎಲ್ಲ ಸುಧಾರಣೆಗಳ ವರ್ಣನೆಯಿರುವದೆಂದು ಹೇಳುತ್ತಾರೆ. ಉಗಿಬಂಡಿ, ತಾರಾಯಂತ್ರ, ವಿಮಾನ, ಮುಂತಾದ ಎಲ್ಲ ಸುಧಾರಣೆಗಳು ಪ್ರಾಚೀನ ಕಾಲದಲ್ಲಿದ್ದ ಪಂತಲೂ, ಪ್ರಾಚೀನಗ್ರಂಥಗಳಲ್ಲಿ ವರ್ಣಿಸಿರುವ ವಾಯುವೇಗ, ಮನೋವೇಗ, ಜ್ಞಾನದೃಷ್ಟಿ ಮುಂತಾದವುಗಳು ಈಗಿನ ಸ್ಥೂಲಸುಧಾರಣೆಯ ಪ್ರಾಚೀನ ರೂಪಗಳೆಂತಲೂ ನಂಬುತ್ತಾರೆ. ಆದರೆ ವೇದಗಳಲ್ಲಿ ಅಂಥ ಯಾವ ಶಾಸ್ತ್ರೀಯ ಸುಧಾರಣೆಗಳೂ ಇಲ್ಲವೆಂದು ವಿದ್ವಾಂಸರು ಗೊತ್ತುಹಚ್ಚಿದ್ದಾರೆ. ಯೋಗ ವಿದ್ಯೆಯ ಮೂಲಕವಾಗಿ ಪ್ರಾಚೀನಜ್ಞಾನಿಗಳು ಈಗಿನ ಸ್ಥೂಲಯಂತ್ರಗಳ ಕಾರ್ಯಮಾಡುತ್ತಿರ ಬಹುದು. ಆ ವಿದ್ಯೆಯು ಈಗ ಲುಪ್ತವಾಗಿದೆ. ಆದರೂ ಯೋಗ ವಿದ್ಯೆಯ ಚಮತ್ಕಾರಗಳಿಗೂ ಈಗಿನ ಭೌತಿಕ ಶಾಸ್ತ್ರೀಯ ಚಮತ್ಕಾರಗಳಿಗೂ ಏನೂ ಸಂಬಂಧವಿಲ್ಲ. ವೈದಿಕ ಋಷಿಗಳು ಈಗಿನ ಯಂತ್ರಗಳಿಗೆ ಸಾಧನಗಳಾಗಿರುವ ಪದಾರ್ಥಗಳ ಅಪ್ಪಂದಿರಾದ ಮೇಘ, ವಾಯು, ವಿದ್ಯುತ್ತು, ಸೂರ್ಯ, ಅಗ್ನಿ, ಮುಂತಾದದೇವತೆಗಳನ್ನು ಭಜಿಸಿದರು. ಅವರ ವಂಶಜರಾದ ಈಗಿನ ಜನರು ಆ ದೇವತೆಗಳಿಂದ ಹುಟ್ಟುವ ಪದಾರ್ಥಗಳ ಸೇವೆಯನ್ನು ಮಾಡುವದು ಪರಂಪರೆಯ ಮೂಲಕ ನ್ಯಾಯ ಪ್ರಾಪ್ತವಾದ ಸಂಗತಿಯಿರುತ್ತದೆ!

ಪಾಶ್ಚಾತ್ಯ ಸುಧಾರಣೆಯೆಂದರೆ ಇಂಗ್ಲಂಡದ್ದಲ್ಲ, ಫ್ರಾನ್ಸದ್ದಲ್ಲ, ಬೇರೆ ಯುರೋಪಿಯನ್ ದೇಶಗಳದೂ ಅಲ್ಲ. ತುರ್ಕಸ್ಥಾನದಿಂದ ಪೋರ್ತುಗಾಲದ ವರೆಗೂ, ಇಟಾಲಿಯಿಂದ ಸ್ವೀಡನ್–ನಾರ್ವೇ ದೇಶಗಳ ವರೆಗೂ ಇರುವ ಇಡಿಯ ಯುರೋಪಖಂಡದೊಳಗಿಂದ, ಸಂಕಲಿತವಾಗಿ ಎಲ್ಲ ದೇಶಗಳಲ್ಲಿ ಹೆಚ್ಚು ಕಡಿಮೆ ಪ್ರಭಾವದಿಂದ ಉದ್ಭೂತವಾಗಿರುವ ಸುಧಾರಣೆಯು. ಇದಕ್ಕೇ ಪಾಶ್ಚಾತ್ಯ ಸುಧಾರಣೆಯೆಂಬ ಹೆಸರು. ಈ ಸುಧಾರಣೆಯ ಸಂಬಂಧದಿಂದ ೨ ಸಂಗತಿಗಳನ್ನು ಲಕ್ಷದಲ್ಲಿಡುವದು ಅವಶ್ಯವದೆ. ಯಾವವೆಂದರೆ:— (೧) ಈ ಸುಧಾರಣೆಯು ಬಹು ಸ್ವಲ್ಪ

ಪದ್ಧತಿಯಲ್ಲಿ ಉಂಟಾಗಿದೆ. (೨) ಜಗತ್ತಿನ ಆರಂಭದಿಂದ ಆಗುತ್ತ ಬಂದ ಎಲ್ಲ ಸುಧಾರಣೆಗಳಿಗಿಂತ ಈ ಸುಧಾರಣೆಯು ಶ್ರೇಷ್ಠವಾದದ್ದೂ, ಅದ್ವಿತೀಯವಾದದ್ದೂ ಇರುತ್ತದೆ. ನಿಕಟ ಸಾನ್ನಿಧ್ಯದಿಂದ ಈ ಸುಧಾರಣೆಯು ಸ್ವೈಯುಂಡಂತಾಗಿ, ಈಗ ಅದರ ಬಗ್ಗೆ ನಾವು ಆಶ್ಚರ್ಯಗೊಳ್ಳದಿದ್ದರೂ, ಅದರಿಂದ ಪಾಶ್ಚಾತ್ಯ ಸುಧಾರಣೆಯ ಯೋಗ್ಯತೆಯು ಕಡಿಮೆಯಾಗಲಾರದು.

ಈ ಸುಧಾರಣೆಯು ಪಾಶ್ಚಾತ್ಯದೇಶಗಳಲ್ಲಿ ಹ್ಯಾಗೆ ಉದಯ ಹೊಂದಿತೆಂಬದನ್ನು ತಿಳುಕೊಳ್ಳಬೇಕಾದರೆ, ಎಷ್ಟೋ ಶತಮಾನಗಳ ಹಿಂದಿನ ಇತಿಹಾಸವನ್ನು ಕುರಿತು ಪರ್ಯಾಲೋಚಿಸಬೇಕಾಗುವದು. ಗ್ರೀಸ-ರೋಮ ರಾಷ್ಟ್ರಗಳ ಇತಿಹಾಸದ ಹಿಂದಿನ ಕಾಲದ ಇತಿಹಾಸವು ಕ್ರಮವಾಗಿ ತಿಳಿಯದ್ದರಿಂದ, ಆ ರಾಷ್ಟ್ರಗಳ ಸ್ಥಾಪನೆಯು ತರುವಾಯ ಉಪಲಬ್ಧವಾಗಿರುವ ಇತಿಹಾಸದಿಂದ ನಾವು ಎಷ್ಟೋ ಸಂಗತಿಗಳನ್ನು ತಿಳಕೊಳ್ಳಬೇಕಾಗಿದೆ. ಅವನ್ನು ವಿಹಂಗಮ ದೃಷ್ಟಿಯಿಂದ ನೋಡಿ ವಿಚಾರಿಸುವದು ತಕ್ಕದ್ದಾಗಿದೆ.

ಗ್ರೀಸ-ರೋಮ ರಾಷ್ಟ್ರಗಳು ಯಾವ ತತ್ವಗಳ ಆಧಾರದಿಂದ ಸಾಗಿದವೆಂಬದನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ಆ ರಾಷ್ಟ್ರಗಳು ಉದಯವಾಗಲಿಕ್ಕೂ, ಏಳ್ಗೆಹೊಂದಲಿಕ್ಕೂ ಆ ರಾಜ್ಯಗಳನ್ನಾಳುತ್ತಿದ್ದ ಜನರ ಬಾಹುಬಲವೇ ಕಾರಣವಾಗಿತ್ತೆಂದು ತಿಳಿಯುವದು. ಆ ಕಾಲದ ಸಮಾಜದ ಘಟಕಾವಯವಗಳು ವ್ಯಕ್ತಿಗಳಿರದೆ, ಕುಟುಂಬಗಳೇ ಆಗಿದ್ದವು. ರಾಜ್ಯಕರ್ತರ ಅಧಿಕಾರವು ಕುಟುಂಬಗಳ ಮೇಲೆ ನಡೆಯುತ್ತಿದ್ದಂತೆ ಕುಟುಂಬದ ಮುಖ್ಯಸ್ಥನ ಬಾಹುಬಲದ ಸತ್ತೆಯು, ಕುಟುಂಬದೊಳಗಿನ ಎಲ್ಲ ವ್ಯಕ್ತಿಗಳ ಮೇಲೆ ನಡೆಯುತ್ತಿತ್ತು. ರಾಜಸತ್ತೆಯನ್ನು ಒಂದು ವಿಶಿಷ್ಟ ಸಮಾಜವು ಧರಿಸುತ್ತಿತ್ತು. ಆ ಸಮಾಜವು ಬಾಹುಬಲದಿಂದ ಬೇರೆ ಸಮಾಜಗಳನ್ನು ಗೆಲ್ಲುವದು, ಅವುಗಳನ್ನು ದಾಸ್ಯದಲ್ಲಿಡುವದು, ಅವು ದೊರೆಕಿಸಿ ಕೊಡ ಹಾಕಿಟ್ಟ ಸಂಪತ್ತಿನ ಉಪಭೋಗವನ್ನು ಯಥೇಷ್ಟವಾಗಿ ಮಾಡುವದು, ಇವೇ ಗೆದ್ದ ಸಮಾಜದ ಆ ಕಾಲದ ಕರ್ತವ್ಯಗಳಾಗಿದ್ದವು. ಅಧಿಕಾರಿವರ್ಗವು ಯುದ್ಧವನ್ನಲ್ಲದೆ ಬೇರೊಂದು ಹೋರೆಯನ್ನು ಮಾಡುತ್ತಿರಲಿಲ್ಲ. ಬೇರೆ ಹೋರೆಯನ್ನು ಮಾಡುವದು ಕೀಳುಜನರ ಕಾರ್ಯವೆಂದು ಅಧಿಕಾರಿಗಳು ಬಗೆಯುತ್ತಿದ್ದರು. ಸತ್ತಾಧಾರಿಗಳು ವ್ಯಾಪಾರವನ್ನಾಗಲಿ, ಕೈಗಾರಿಕೆಯ ಕೆಲಸಗಳನ್ನಾಗಲಿ ಮಾಡುವದು ತೀರ ಕೀಳತನವೆಂದು ಕಲ್ಪನೆಯಿತ್ತು. ಪ್ಲೇಟೋನು ಇಂಜನಿಯರನ ಕೆಲಸವು ಮಾನಗೇಡಿತನದ್ದೆಂದು ಹೇಳಿದ್ದಾನೆ. ಅರಿಸ್ಟಾಟಲನು

ಗಾಯನಕಲೆಯನ್ನು ಕೈಕೊಳ್ಳುವದು ದೊಡ್ಡಸ್ತಿಕೆಗೆ ಕುಂದನ್ನುಂಟು ಮಾಡುವದೆಂದು "ಪಾಲಿಟಿಕ್ಸ್" ಎಂಬ ಹೆಸರಿನ ಗ್ರಂಥದಲ್ಲಿ ಹೇಳಿರುವನಂತೆ.

ಸತ್ತಾಧಾರಿಗಳ ಅನುಕರಣವನ್ನೇ ಕುಟುಂಬದ ಮುಖ್ಯಸ್ಥನು ಮಾಡುತ್ತಿದ್ದನು. ಮುಖ್ಯಸ್ಥನೇ ಕುಟುಂಬದ ರಾಜನು. ಕುಟುಂಬದ ಎಲ್ಲ ಜನರೂ ಆತನಿಗೆ ಅಂಕಿತರು, ಕುಟುಂಬದ ಆಳಿಗಳ್ಕೆ ಹೇರಳವಾಗಿ ಗುಲಾಮರಿರುತ್ತಿದ್ದರು. ಅವರೇ ಕುಟುಂಬದೊಳಗಿನ ಎಲ್ಲ ಕಷ್ಟದ ಹೊರೆಗಳನ್ನು ಮಾಡುತ್ತಿದ್ದರು. ಕುಟುಂಬದ ಇತರ ವ್ಯಕ್ತಿಗಳು ಗುಲಾಮರಾಗಿರದಿದ್ದರೂ ಗುಲಾಮರಿಗೂ ಅವರಿಗೂ ವಿಶೇಷ ಹೆಚ್ಚು ಕಡಿಮೆಯಿದ್ದಿಲ್ಲ. ನೈಸರ್ಗಿಕ ಮಾಯಾಪಾಶದ ಹೊರತು ಇತರ ವ್ಯಕ್ತಿಗಳು ಗುಲಾಮರಂತೆಯೇ ಇದ್ದರು. ಸ್ತ್ರೀಯರಿಗಂತೂ ಏನೂ ಸ್ವಾತಂತ್ರ್ಯವಿದ್ದಿಲ್ಲ. ಕುಟುಂಬದ ಮುಖ್ಯಸ್ಥನು ಮನಸ್ಸಿಗೆ ಬಂದರೆ ಮಕ್ಕಳನ್ನು ಸಹ ಕೊಲ್ಲಿಸುತ್ತಿದ್ದನು.

ಹೀಗೆ ಆ ಕಾಲದಲ್ಲಿ ಸತ್ತಾಧಾರಿಗಳ, ಹಾಗು ಕುಟುಂಬದೊಡೆಯನ ಅನಿಯಂತ್ರಿತ ಸತ್ತೆಯು, ಬಾಹುಬಲದ ಮೂಲಕವಾಗಿ ಪ್ರಬಲವಾಗಿ ನಡೆಯುತ್ತಿದ್ದರೂ, ಇತರ ಜನರು ಮನದಲ್ಲಿ ದುಃಖಿಗೊಳ್ಳುತ್ತಿದ್ದರೂ, ಆ ರಾಷ್ಟ್ರಗಳ ಪ್ರತಿಯೊಂದು ವ್ಯಕ್ತಿಯು ಸ್ವರಾಜ್ಯದ ಬಗ್ಗೆ ಪೂರ್ಣನಿಷ್ಠೆಯುಳ್ಳವನಾಗಿದ್ದನು. ಸಮಾಜಹಿತಕ್ಕಾಗಿ ಪೂರ್ಣವಾಗಿ ಹೆಣಗುವದರಲ್ಲಿಯೇ ತೊಡಗುತ್ತಿದ್ದನಾದ್ದರಿಂದ ವ್ಯಕ್ತಿದುಃಖದ ಅರಿವು ಸಹ ಆವನಿಗೆ ಇರುತ್ತಿದ್ದಿಲ್ಲ. ವ್ಯಕ್ತಿಹಿತವು ಅಪ್ರಧಾನವು, ಸಮಾಜಹಿತವು ಪ್ರಧಾನವೂ ಆಗಿದ್ದವು. ಸ್ಪಾರ್ಟನ ಜನರು ಬಾಹುಬಲವಿಲ್ಲದ, ಅಂತೇ ಸಮಾಜಹಿತಕ್ಕೆ ಅಯೋಗ್ಯವಾದ, ತಮ್ಮ ಹೊಟ್ಟೆಯ ಕೂಸುಗಳನ್ನು ಗುಡ್ಡಗಾಡುಗಳಲ್ಲಿ ಬಿಸುಟಿಬಿಡುತ್ತಿದ್ದರು. 'ಸಿಸಿರೋ' ಎಂಬ ಪ್ರಖ್ಯಾತ ಮುತ್ಸದ್ದಿಯು ಸಮಾಜಹಿತಮಾಡದ ವ್ಯಕ್ತಿಯು ಇಲ್ಲದಿರುವದೇ ಲೇಸೆಂದು ಹೇಳಿರುವನು.

ಆದರೆ ಕೆಲವು ಕಾಲದ ಮೇಲೆ ಈ ಸ್ಥಿತಿಯು ಬದಲಾಯಿತು. ರಾಜಸತ್ತೆಯ ಕೆಲವು ಭಾಗವು ಬೇರೆ ಬೇರೆ ಜನರಲ್ಲಿ ಹಂಚಲ್ಪಟ್ಟಿತು. ವ್ಯಕ್ತಿಹಿತಕ್ಕೆ ಪ್ರಾಧಾನ್ಯವು ದೊರೆಯುಹತ್ತಿತು. ಆದರಿಂದ ಸಮಾಜದ ಬಾಹುಬಲದಿಂದ ಸ್ಥಾಪಿಸಲ್ಪಟ್ಟ ರಾಜ್ಯಗಳು, ಸಾಮಾಜಿಕ ತತ್ವಗಳ ಉಲ್ಲಂಘನೆಯಾದಕೂಡಲೆ, ನೆಲಸಮನಾಗುವ ಮಾರ್ಗವನ್ನು ಹಿಡಿದವು. ಅವನ್ನು ಆನಿಕೆಕೊಟ್ಟು ನಿಲ್ಲಿಸಲಿಕ್ಕೆ ಬಾದ್ದತಜರೂ, ಸಿಸಿರೋ ಮುಂತಾದ ಎಷ್ಟೋ ಬುದ್ಧಿವೈಭವಶಾಲಿಗಳೂ ಬಹುಪ್ರಯತ್ನ

ಮಾಡಿದರು. ಅದರಿಂದ ವಿನಾಶಕಾಲವು ಬೇಗಬಾರದೆ, ಸಾವಕಾಶವಾಗಿ ಬಂತೇ ಹೊರತು ನಾಶವು ತಪ್ಪಲಿಲ್ಲ. ರೋಮರಾಜ್ಯವೃಕ್ಷವಂತೂ ಒಣಗುವ ಹಾದಿಯನ್ನೇ ಹಿಡಿಯಿತು. ಅದಕ್ಕೆ ಯಾರು ಎಷ್ಟು ನೀರು ಹಣಿಸಿದರೂ ಕಡೆತನಕ ಚಿಗುರೊಡೆಯಲಿಲ್ಲ.

ರೋಮಸಾಮ್ರಾಜ್ಯವು ನಷ್ಟವಾಗುವ ಕಾಲದಲ್ಲಿ ಪಾಶ್ಚಾತ್ಯಸಮಾಜವು ತೀರ ಹೀನಸ್ಥಿತಿಯನ್ನೆಯ್ದಿತ್ತು. ಅದನ್ನು ಪೂರ್ವದ ಸುಸ್ಥಿತಿಗೆ ತರಲಿಕ್ಕೆ ಬಂದು ಮಹತ್ತ್ವವಾದ ಶಕ್ತಿಯು ಉತ್ಪನ್ನವಾಯಿತು. ಅದಾವದೆಂದರೆ ಕ್ರಿಸ್ತೀಧರ್ಮವು. ಈ ಶಕ್ತಿಯು ಎದುರಿಗೆ ವ್ಯಕ್ತಿಹಿತವು ಪುನಃ ನಿರ್ನಾಮವಾಗುತ್ತ ಹೋಯಿತು. ಸೂರ್ಯಪ್ರಕಾಶದಿಂದ ಇಬ್ಬನಿಯು ಕ್ರಮಶಃ ಹರಿದು ಹೋಗುವಂತೆ, ವ್ಯಕ್ತಿಹಿತವು ಲೋಪವಾಗುತ್ತ ನಡೆದು ಸಮಾಜಕ್ಕೆ ಹಿತಮಾಡುವ ಬುದ್ಧಿಯು ಪ್ರಖರವಾಗಿ ಪ್ರಕಾಶಿಸಲಿಕ್ಕೆ ಹತ್ತಿತು. ಕ್ರಿಸ್ತೀಧರ್ಮದ ಜತಿಗಳೂ, ಸಾಧುಗಳೂ, ಸಂತರೂ, ಜೋಗಿಣಿಯರೂ, ರಾಜಬಲವನ್ನೂ, ಮೂಢಜನರ ಕಾಟವನ್ನೂ ಲೆಕ್ಕಿಸದೆ, ಧರ್ಮಪ್ರಸಾರಮಾಡಿ ಕ್ರಿ. ಶ. ೧೨ನೇ ಶತಮಾನದವರೆಗೆ ಕಷ್ಟಪಟ್ಟು, ಧರ್ಮವನ್ನು ಶಿಖರಕ್ಕೆ ಒಯ್ದು ಮುಟ್ಟಿಸಿದರು. ಮುಂದೆ ಭೌತಿಕಶಾಸ್ತ್ರಜ್ಞರು ಕ್ರಿಸ್ತೀಧರ್ಮಪುಸ್ತಕವಾದ ಬೈಬಲದಮೇಲೆ ಆಘಾತಮಾಡಿ, ಧರ್ಮಲಂಡತನವನ್ನು ಹಬ್ಬಿಸಲಿಕ್ಕೆ ಯತ್ನಮಾಡಿದರೂ, ಆ ಧರ್ಮದ ಸ್ವಹಿತನಿರಪೇಕ್ಷತೆ, ಪರಹಿತತತ್ಪರತೆಗಳೆಂಬ ಉದಾತ್ತ ತತ್ವಗಳ ಮೂಲಕ ಎಳ್ಳಷ್ಟಾದರೂ ಹಾನಿಯೊದಗದೆ, ಸಮಾಜವು ಸ್ಥೈರ್ಯವನ್ನು ಪಡೆದಿರುವದು. ಈ ವರೆಗೆ ಪಾಶ್ಚಾತ್ಯಸಮಾಜದ ಬಗ್ಗೆ ವರ್ಣಿಸಿದ್ದು ವಿಷಯಾಂತರದಂತೆ ಕಂಡರೂ, ತುಲನಾತ್ಮಕ ದೃಷ್ಟಿಯಿಂದ ವಿಚಾರ ಮಾಡುವದಕ್ಕೆ ಅದು ಚನ್ನಾಗಿ ಉಪಯೋಗಿಸುವದೆಂದು ತಿಳಿದು ಅತಿ ಸಂಕ್ಷೇಪವಾಗಿ ಹೇಳಿರುವೆವು.

ಇನ್ನು ಹಿಂದೂ ಆರ್ಯರ ಸಾಮಾಜಿಕ ಸ್ಥಿತಿಯಬಗ್ಗೆ ನೋಡುವಾ. ಆರ್ಯರು ಈ ದೇಶವನ್ನು ಅತಿ ಪ್ರಾಚೀನಕಾಲದಲ್ಲಿ ಪ್ರವೇಶಿಸಿದ್ದೂ, ಇಲ್ಲಿರುವ ಮೂಲನಿವಾಸಿಗಳಮೇಲೆ ತಮ್ಮ ವರ್ಚಸ್ಸನ್ನು ಕೂಡ್ರಿಸಿದ್ದೂ ಸರ್ವವಿಶ್ರುತವಾದ ಸಂಗತಿಗಳಿರುತ್ತವೆ. ಆರ್ಯರ ಪ್ರಾಚೀನ ದೇವತೆಗಳು ಇಂದ್ರ-ವರುಣ-ಅಗ್ನಿ ಮುಂತಾದವುಗಳಿದ್ದವು. ಸಮಾಜದ ಬಾಲ್ಯಾವಸ್ಥೆಯಲ್ಲಿ ಈಗ ಸಹಜವಾಗಿ ತೋರುವ ಸೃಷ್ಟಿಚಮತ್ಕಾರಗಳು ಆಗ ಆಶ್ಚರ್ಯಕರವಾಗಿ ತೋರಿದ್ದು ಸಹಜವದೆ. ಇದೇ ಬಗೆಯ ದೇವತೆಗಳು ಇಜಿಪ್ತ, ಗ್ರೀಸ, ರೋಮ, ಅಸೀರಿಯಾ ಮುಂತಾದ ಪ್ರಾ

ಚೀನ ದೇಶಗಳ ಜನಾಂಗಗಳಲ್ಲಿ ರೂಢವಾಗಿದ್ದವು. ಹಿಂದೂಆರ್ಯರು, ತಮ್ಮ ದೇವತೆಗಳು ಮೂಲನಿವಾಸಿಗಳ ಕ್ರೂರದೇವತೆಗಳಿಗಿಂತ ಉತ್ತಮವಾದವೂ, ಕಲ್ಯಾಣಕಾರಕಗಳೂ ಇರುವವೆಂತಲೂ, ತಾವು ಮೂಲನಿವಾಸಿಗಳಿಗಿಂತ ಶ್ರೇಷ್ಠರೆಂತಲೂ ಭಾವನೆಯುಳ್ಳವರಾಗಿದ್ದರು. ಈ ಭಾವನೆಯೇ ಯಾವದೊಂದು ಸಮಾಜದ ಊರ್ಜಿತಾವಸ್ಥೆಗೆ ಕಾರಣವಾಗಿರುವದು. ಹಿಂದೂ ಆರ್ಯರು ಅತ್ಯುತ್ತಮ ಉತ್ಸಾಹಶಾಲಿಗಳೂ, ತಮ್ಮ ಶುದ್ಧರಕ್ತದ ಬಗ್ಗೆ ಅಭಿಮಾನವುಳ್ಳವರೂ, ಘನತೆಯುಳ್ಳ ಗಂಭೀರಭಾಷೆಯನಾಡುವವರೂ, ತಮ್ಮ ದೇವತೆಗಳನ್ನು ಒಳ್ಳೇ ಶ್ರದ್ಧೆಯಿಂದ ಭಜಿಸುವವರೂ ಆಗಿದ್ದರು, ಹಾವರ್ಡಸಾಹೇಬರು ಅವರ ಬಗ್ಗೆ "They are a high spirited race, prour of their purity of blood, their noble language and their religeon" ಎಂದು ಹೇಳಿರುವ ಮಾತು ಪ್ರಾಚೀನ ಆರ್ಯರಿಗೆ ಸಂಪೂರ್ಣವಾಗಿ ಹೊಂದುತ್ತದೆ. ಆರ್ಯರು ತಮ್ಮ ಶುದ್ಧರಕ್ತವನ್ನೂ, ಸತ್ವವನ್ನೂ ಕಾಯ್ದುಕೊಳ್ಳುವದಕ್ಕಾಗಿ ಮೂಲನಿವಾಸಿಗಳನ್ನು ದೂರವಾಗಿಟ್ಟರು. ಮಂದಬುದ್ಧಿಯುಮೂಲಕವಾಗಿ ಅವರಿಗೆ ತಮ್ಮ ಧರ್ಮತತ್ವಗಳ ಜ್ಞಾನವಾಗಲಾರದೆಂದು ಬಗೆದುಅವರಿಂದಸೇವೆಯನ್ನು ಮಾತ್ರ ತಕೊಳ್ಳುತ್ತ ಅವರನ್ನು ಸಮಾಜದಲ್ಲಿ ಇಟ್ಟುಕೊಂಡರು. ಅವರ ಬೇಟೆಯನಾಡಿ ನಿರ್ಮೂಲ ಮಾಡಲಿಲ್ಲ. ಹಾಗೆ ಮಾಡಿದ್ದರೆ ಬಹುಕಾಲದಮೇಲೆ ರೂಢವಾಗಿದ್ದ ಚಾತುರ್ವರ್ಣ್ಯ-ವ್ಯವಸ್ಥೆಯೊಳಗಿನ ಶೂದ್ರವರ್ಣವೆಂಬ ಹೆಸರೇ ಇಲ್ಲದಂತಾಗಿ ಮೂರೇವರ್ಣಗಳು ಧರ್ಮಗ್ರಂಥಗಳಲ್ಲಿ ಉಲ್ಲೇಖವಾಗುತ್ತಿದ್ದವು. ಆ ಕಾಲದ ಆರ್ಯರ ಟೋಳಿಗಳಲ್ಲಿ ಅರಸನಿದ್ದಿಲ್ಲ. ಕುಟುಂಬದ ಮುಖ್ಯಸ್ಥನೇ ಸರ್ವಸತ್ತಾಧಾರಿಯಾಗಿದ್ದನು. ಕುಟುಂಬಗಳು ಬೆಳೆದಂತೆ ಸಮಾಜವುಂಟಾಗಹತ್ತಿತು. ಹೀಗೆ ಹಲವು ಸಮಾಜಗಳುಂಟಾಗಿ ಆಗಾಗ್ಗೆ ಕಲಹವುಂಟಾಗುತ್ತಿದ್ದರೂ, ವಿಶಾಲವಾದ ಬೆಳೆಯುಳ್ಳ ಪಡಭೂಮಿಯು ಯಥೇಚ್ಛವಾಗಿದ್ದದರಿಂದ ಬಂದು ಸಮಾಜವು ತುಸು ಸ್ಥಳಾಂತರ ಮಾಡಿದ ಕೂಡಲೆ ಜೀವನಾರ್ಥಕಲಹವು (fight for existance) ಬೇಗನೆ ಶಾಂತವಾಗುತ್ತಿತ್ತು. ಬರಬರುತ್ತ ಹಲವು ಸಮಾಜಗಳ ಶಾಸನಕರ್ತನೊಬ್ಬನಿರಬೇಕೆಂದು ನಿಶ್ಚಯಿಸಿ ಅರಸೊತ್ತಿಗೆಯು ಮೊಳೆದೋರಿತು. ಸಮಾಜವು ಅನೀತಿಯಿಂದ ಪರಾಙ್ಮುಖವಾಗುವಂತೆ ಮಾಡುವದಕ್ಕೋಸ್ಕರ ಸ್ವಸುಖವನ್ನು ಸಂಪೂರ್ಣವಾಗಿ ತಿರಸ್ಕರಿಸುವಂಥ, ಐಹಿಕ ದಾರಿದ್ರ್ಯವನ್ನು ಸಂತೋಷದಿಂದ ಅನುಭೋಗಿಸುವಂಥ, ಪಾರಮಾರ್ಥಿಕ-ದೈವೀ ಸಂಪತ್ತಿಯಿಂದ ದೈದೀಪ್ಯಮಾನವಾಗಿ ತೋರುವಂಥ ವರ್ಗವೊಂದು ಮೈದೋರಿ

ಸಮಾಜಕ್ಕೆ ಜ್ಞಾನದಾನಮಾಡಲಿಕ್ಕೆ ಸಿದ್ಧನಾಯಿತು. ಬೇರೆ ಜನರು ವ್ಯಾಪಾರೋದ್ಯೋಗಗಳಿಂದ ಸಮಾಜವು ಸಂಪನ್ನಸ್ಥಿತಿಯಲ್ಲಿರುವಂತೆ ಯತ್ನಿಸಹತ್ತಿದರು. ಹೀಗಾಗಿ ಹಿಂದೂ ಆರ್ಯಸಮಾಜವು ಸ್ಥಿರತ್ವ ಹೊಂದಿತು. ಇದೇ ಚತುರ್ವರ್ಣಗಳ ಮೂಲಾರಂಭವು.

ಹೀಗಿದ್ದರೂ ಅರಸುತನವನ್ನು ಆರ್ಯರ ಸಮಾಜವೇ ಉಂಟುಮಾಡಿತು. ಅರಸನಿಂದ ಸಮಾಜವುಂಟಾಗಲಿಲ್ಲ. ಸಮಾಜದಲ್ಲಿ ಕರ್ತೃತ್ವಶಾಲಿಗಳದೊಂದು ವರ್ಗವು ಯಾವಾಗಲೂ ಇದ್ದೇ ಇತ್ತು. ಆ ವರ್ಗದ ಅನುಮತಿಯಂತೆ ಅರಸೊತ್ತಿಗೆಯು ನಿರ್ಮಾಣವಾಯಿತು. ಅದರ ವಿವರವನ್ನು ಮುಂದೆ ಮಾಡಲಾಗುವದು.

§—(0)—§

೩. ಆರ್ಯಸಭೆಗಳೂ ಅರಸೊತ್ತಿಗೆಯೂ.

ಆರ್ಯರ ಧರ್ಮಶಾಸ್ತ್ರವಾದ ವೇದವು, ಬಾಯಬಲ್, ಕುರಾಣಗಳಿಗಿಂತ ಅತ್ಯಂತ ಪ್ರಾಚೀನ ಕಾಲದ್ದೆಂದು ಭೂಮಿಯೊಳಗಿನ ಎಲ್ಲ ಜಾತಿಯ ಪಂಡಿತರ ಅಭಿಪ್ರಾಯವಿರುತ್ತದೆ. ಮನುಷ್ಯ ಸಮಾಜದ ಅತಿಪ್ರಾಚೀನ ಕಾಲದ ಇತಿಹಾಸವು ತಿಳಿಯಲಿಕ್ಕೆ ವೇದಗ್ರಂಥವು ಒಳ್ಳೇ ಸಹಾಯಕಾರಿಯಾಗಿರುವದೆಂದು ತಿಳಿದು, ಜರ್ಮನಿ ಮುಂತಾದ ಪಾಶ್ಚಿಮಾತ್ಯರಾಷ್ಟ್ರಗಳ ವಿದ್ವಾಂಸರು, ಭಕ್ತಿಪೂರ್ವಕವಾಗಿ ವೇದಾಧ್ಯಯನವನ್ನು ಮಾಡುತ್ತಾರೆ. ಹಿಂದೂಸಮಾಜಕ್ಕಂತೂ ವೇದವು ಜೀವಪ್ರಾಣದಂತಿರುವದು. ಹಿಂದೂಆರ್ಯರು ಸಮಾಜಸ್ಥಿತಿಯನ್ನು ಹೊಂದುವದಕ್ಕಿಂತ ಮೊದಲಿನ ಕಾಲದಿಂದಲೇ ವೇದವನ್ನು ಅನುಸರಿಸಿ ದೇವತೆಗಳನ್ನು ಭಜಿಸುತ್ತಿದ್ದರು. ಹಿಂದೂಆರ್ಯರ ಧರ್ಮಸಂಸ್ಕೃತಿಯಲ್ಲಿ ಕ್ರಾಂತಿಯಾಗುತ್ತ ನಡೆದು ಹೊಸ ಹೊಸ ವಿಚಾರಗಳು ತಲೆದೋರಿದರೂ ವೇದವೆಂಬ ಖನಿಯೊಳಗಿನ ವಾಕ್ಯರೂಪರತ್ನಗಳನ್ನೇ ಆ ಹೊಸವಿಚಾರಗಳ ಮುಕುಟದಲ್ಲಿ ಕೂಡ್ರಿಸುತ್ತಿದ್ದರು. ಕರ್ಮವಾದಿಗಳಿಗೂ, ಉಪಾಸನಾಮಾರ್ಗವನ್ನು ಅವಲಂಬಿಸುವವರಿಗೂ, ಜ್ಞಾನಮಾರ್ಗವನ್ನು ಹುಡುಕುವವರಿಗೂ, ಮುಮುಕ್ಷುಗಳಿಗೂ ವೇದವಾಕ್ಯಗಳೇ ಪ್ರಮಾಣ್ಯವಾಗಿರುವವು. ಆದ್ದರಿಂದ ಒಂದೇ ವೇದವಾಕ್ಯದ ಅರ್ಥವು ಬೇರೆ ಬೇರೆ ಮಾಡಲ್ಪಡುತ್ತಿತ್ತು. ಅದರಿಂದ ವೇದಗಳೇ ಪ್ರಮಾಣವೆಂದು ನಂಬುವವರಲ್ಲಿ ಸಹ ಹಲವು ಮತಗಳೂ, ಮತಾಂತರಗಳೂ ಉಂಟಾದವು. ಆರ್ಯರಲ್ಲಿ ಹೀಗೆ ಭೇದವುಂಟಾಗಿದ್ದರೂ ವೇದಪ್ರಮಾಣವನ್ನು ಯಾರೂ ಅಲ್ಲಗಳೆಯು

ಲಿಲ್ಲ. ವೇದಧರ್ಮಕ್ಕೆ ಪೂರ್ಣವಿರುದ್ಧವಾದ ಬೌದ್ಧಧರ್ಮವು, ಕಪಿಲಮುನಿಯ ಸಾಂಖ್ಯಶಾಸ್ತ್ರದ ಆಧಾರದಿಂದ ಉತ್ಪನ್ನವಾಗಿದ್ದರೂ ವೈದಿಕಧರ್ಮದ ಎಷ್ಟೋ ತತ್ವಗಳು ಅದರಲ್ಲಿ ಸ್ವೀಕರಿಸಲ್ಪಟ್ಟಿವೆ. ಹೀಗೆ ಪೂರ್ವದ ಹಿಂದೂಆರ್ಯಪಂಡಿತರು ತಮ್ಮ ಮತವನ್ನು ವೇದಗಳಿಂದಲೇ ಹೊರಡಿಸಲಿಕ್ಕೆ ಅಭಿಮಾನಪಡುತ್ತಿದ್ದರು. ವೇದಗಳು ಸುಲಭವಾಗಿ ತಿಳಿಯಲಿಕ್ಕೆ ಸಾಯನಾಚಾರ್ಯರು ಭಾಷ್ಯಬರೆದದ್ದು ಸರ್ವಶ್ರುತವಿರುತ್ತದೆ. ಯಾಸ್ಕಮಹಾಮುನಿಯು, ಅರ್ಥಜ್ಞಾನವಿಲ್ಲದೆ ಬರೀ ವೇದ ಕಲಿಯುವದು ಕೇವಲ ಭಾರವಾಹಕ ಕಾರ್ಯವೆಂದು ಹೇಳಿದ್ದಾನೆ. ಒಟ್ಟಿನಿಂದ ನೋಡಲು, ವೇದಗಳನ್ನು ಬಾಯಿಪಾಠ ಅನ್ನುವದೂ, ಧರ್ಮಪರವಾಗಿ ವೇದಗಳ ಅರ್ಥಮಾಡುವದೂ ಆರ್ಯಪಂಡಿತರ ಕೆಲಸಗಳಾಗಿದ್ದವು.

ಪಾಶ್ಚಾತ್ಯ ಸುಧಾರಣೆಯು ಈ ದೇಶದಲ್ಲಿ ಹಣಿಕಿ ಹಾಕಿದ್ದರಿಂದ, ವೇದಾಧ್ಯಯನ ಮಾಡುವ ರೀತಿಯಲ್ಲಿಯೂ ಹೆಚ್ಚು ಕಡಿಮೆಯಾಯಿತು. ವೇದವು ಅತಿ ಪ್ರಾಚೀನ ಗ್ರಂಥವೆಂಬ ಕಾರಣದಿಂದ ಪಾಶ್ಚಾತ್ಯರು ವೇದಾಧ್ಯಯನ ಮಾಡುತ್ತಿರುವರೆಂಬ ಸಂಗತಿಯು ಮೇಲೆ ಹೇಳಿದೆ. ವೇದದ ಭಾಷೆಯು ತಿಳಿಯಲಿಕ್ಕೆ ಕೋಶವು ರಚಿಸಲ್ಪಟ್ಟಿತು. ಭಾಷೆಯ ದೃಷ್ಟಿಯಿಂದ ವೇದವು ಎಷ್ಟು ಪ್ರಾಚೀನಕಾಲದ್ದೆಂಬ ಬಗ್ಗೆ ಪರಭಾಷೆಗಳಲ್ಲಿ ನಿಬಂಧಗಳು ಬರೆಯಲ್ಪಟ್ಟವು. ವೇದಕಾಲದಲ್ಲಿ ಆರ್ಯಸಂಸ್ಕೃತಿಯು ಎಷ್ಟು ಇತ್ತು? ಹ್ಯಾಗೆ ಇತ್ತು? ಸಮಾಜದ ರಚನೆಯು ಹ್ಯಾಗೆ ಇತ್ತು? ಮುಂತಾದ ಸಂಗತಿಗಳ ಬಗ್ಗೆ ಪಾಶ್ಚಾತ್ಯ ಭಾಷೆಗಳಲ್ಲಿ ಗ್ರಂಥಗಳು ರಚಿಸಲ್ಪಟ್ಟವು. ಅವು ಈ ದೇಶದಲ್ಲಿ ಪ್ರಸಾರವಾದವು. ಅವುಗಳನ್ನು ಪಾಶ್ಚಾತ್ಯ ವಿದ್ಯಾಕೋವಿದರಾದ ಈ ದೇಶದ ಜನರು ಓದಿ ವೇದಗ್ರಂಥವನ್ನು ವಿಶೇಷ ಚಿಕಿತ್ಸಕಬುದ್ಧಿಯಿಂದ ಓದಹತ್ತಿದರು. ಮತವನ್ನಾಗಲಿ, ಧರ್ಮವನ್ನಾಗಲಿ ಸ್ಥಾಪಿಸುವ ಉದ್ದೇಶವಿಲ್ಲದೆ ಪ್ರಾಚೀನ ಐತಿಹ್ಯವನ್ನು ಅರಿತುಕೊಳ್ಳುವದೇ ಆಧುನಿಕ-ಹಿಂದೂ ಪಂಡಿತರ ವೇದಾಧ್ಯಯನದ ಮುಖ್ಯೋದ್ದೇಶವಾಯಿತು. ಈ ಉದ್ದೇಶವು ಪ್ರಾಚೀನ ಪಂಡಿತರ ಅಧ್ಯಯನದ ಉದ್ದೇಶಕ್ಕಿಂತ ಭಿನ್ನವಾದದ್ದೆಂದು ಸ್ಪಷ್ಟವಾಗಿ ತೋರುತ್ತದೆ. ಆಧುನಿಕ ಪಂಡಿತರು ವೇದದಲ್ಲಿ ಆರ್ಯರ ಸಭೆಗಳು ಅರಸುತನವು ಇವುಗಳ ಬಗ್ಗೆ ಶೋಧಿಸಿ ತೆಗೆದ ಸಂಗತಿಗಳನ್ನು ಈ ಭಾಗದಲ್ಲಿ ಹೇಳುವೆವು. ಪ್ರಸ್ತುತದ ಲೇಖಕನಿಗೆ ವೇದಗಳ ಅರ್ಥವು ತಿಳಿಯುವಷ್ಟು ಭಾಷಾಜ್ಞಾನವಿಲ್ಲ. ಆದರೆ ಇತ್ತಿತ್ತಲಾಗಿ ವೇದಾರ್ಥಯತ್ನವು ಹಲವು ಪಂಡಿತರಿಂದ ಮಾಡಲ್ಪಟ್ಟು, ದೇಶಭಾಷೆಯಲ್ಲಿ ಹಲವು ಗ್ರಂಥಗಳುಂಟಾಗಿವೆ. ಹಲವು ಬಗೆಯ ಲೇಖಗಳು ಪ್ರಕಟಿಸಲ

ಟ್ಟಿವೆ. ಅವೇ ಇನ್ನು ಮುಂದೆ ಹೇಳುವ ಸಂಗತಿಗಳಿಗೆ ಆಧಾರವಾಗಿರುವವು.

ಜಗತ್ತಿನಲ್ಲಿ (೧)ವೈದಿಕಧರ್ಮ, (೨)ಪಾರಶೀಧರ್ಮ (೩)ಬುದ್ಧಧರ್ಮ (೪) ಕ್ರಿಸ್ತೀಧರ್ಮ (೫)ಮುಸಲ್ಮಾನೀಧರ್ಮ ಹೀಗೆ ೫ ಧರ್ಮಗಳು ಮುಖ್ಯವಾಗಿರುತ್ತವೆ. ವೈದಿಕ-ಪಾರಶೀಧರ್ಮಗಳು ಪ್ರಾಚೀನತೆಯಿಂದ ತುಸು ಹೆಚ್ಚು-ಕಡಿಮೆ ಸಮಾನವಾಗಿರುವವು. ಬುದ್ಧಧರ್ಮವುಂಟಾಗಿ ೨೫೦೦ವರ್ಷಗಳಾದವು. ಕ್ರಿಸ್ತೀಧರ್ಮದ ಉದಯವಾಗಿ ೧೯೦೦ವರ್ಷಗಳಾಗಿರುವವು. ಮುಸಲ್ಮಾನೀ ಧರ್ಮವು ೧೩೦೦ವರ್ಷಗಳಹಿಂದೆ ಉತ್ಪನ್ನವಾಯಿತು. ಹಿಂದೂ ಜನರಂತೂ ವೈದಿಕಧರ್ಮವು ಸನಾತನ(ಅನಾದಿ)ವಾಗಿರುವದೆಂದು ನಂಬುವರು. ಪಾಶ್ಚಿಮಾತ್ಯ ಪಂಡಿತರೂ ಹಿಂದೂ ಪಂಡಿತರೂ ಚಿಕಿತ್ಸಕ ಬುದ್ಧಿಯಿಂದ ಪರಿಶೋಧಿಸಿ ವೈದಿಕಧರ್ಮವು ಹಿಮಪ್ರಳಯದ ಪೂರ್ವದಲ್ಲಿ ಸಹ ಇತ್ತೆಂದು ಬಲವತ್ತರವಾದ ಆಧಾರಗಳಿಂದ ಸಿದ್ಧಮಾಡಿದ್ದಾರೆ. ಇವೆಲ್ಲವುಗಳಿಂದ ವೇದಗಳ ಪ್ರಾಚೀನತೆಯು ಸಿದ್ಧವಾಗುತ್ತದೆ. ಇಂಥ ಪ್ರಾಚೀನ ಗ್ರಂಥದಲ್ಲಿ ರಾಜ್ಯಪದ್ಧತಿಯ ಸಂಬಂಧದಿಂದ ಹೇಳಿದ ಸಂಗತಿಗಳು ನಂಬಿಗೆಗೆ ತಕ್ಕವುಗಳಾಗಿರುವವಲ್ಲವೇ?

“ರಾಜಾ ಸತ್ಯಃ ಸಮಿತೀರಿಯಾನಃ ॥ ಋಗ್ವೇದ ೯।೯೨।೬ “ಸಭೆಯಲ್ಲಿ ಹೋಗುವರಾಜನೇ ನಿಜವಾದ ರಾಜನು,, ಹೀಗೆ ಋಗ್ವೇದದಲ್ಲಿ ಹೇಳಿದೆ. ಇದರಮೇಲಿಂದ ನೋಡಲು, ರಾಜನಿಗೂ ಸಭೆಗೂ ಏನಾದರೂ ಸಂಬಂಧವಿರಬೇಕೆಂಬ ಮಾತು ಧ್ವನಿತವಾಗುತ್ತದೆ. ಆ ಸಂಬಂಧದ ಬಗ್ಗೆ ವಿಚಾರ ಮಾಡುವದಕ್ಕಿಂತ ಮೊದಲು, ಸಭೆಗಳ ಯೋಗ್ಯತೆಯ ಸಂಬಂಧದಿಂದ ಇರುವ ವರ್ಣನೆಯನ್ನು ನೋಡುವಾ:—

ನಮಃಸಭಾಭ್ಯಃ ಸಭಾಪತಿಭ್ಯಃಚ ನಮಃ॥ಯಜುರ್ವೇದ ೧೬।೨೪. “ಸಭೆಗಳಿಗೆ (ಅಂದರೆ ಸಭೆಯಲ್ಲಿರುವ ಕರ್ತೃತ್ವಶಾಲಿಗಳಿಗೆ),ಸಭೆಗಳ ಅಧ್ಯಕ್ಷರಿಗೆ ನಮಸ್ಕಾರವು,, ಹೀಗೆ ಹೇಳಿರುವದರಿಂದ ಸಭಾಸದರೂ ಸಭಾಧ್ಯಕ್ಷರೂ ನಮಸ್ಕಾರ ಮಾಡಿಸಿಕೊಳ್ಳುವಷ್ಟು ಪೂಜ್ಯರೂ ಯೋಗ್ಯರೂ ಇದ್ದರೆಂಬ ಮಾತು ಸ್ಪಷ್ಟವಾಗುತ್ತದೆ. ಲೋಕಹಿತವನ್ನು ಗಣನೆಗೆ ತಾರದ ಕಾಟಕರಿಂದ ತುಂಬಿದ ಸಭೆಗಳಿಗೆ ನಮಸ್ಕಾರ ಮಾಡುವವರಾರು? ಆದ್ದರಿಂದ ಆ ಕಾಲದ ಸಭೆಗಳಲ್ಲಿರುವ ಜನರು ಸಮಾಜ ಹಿತಮಾಡುವಷ್ಟು ತ್ರಾಣವುಳ್ಳವರೂ, ಕರ್ತೃತ್ವಶಾಲಿಗಳೂ ಇದ್ದರೆಂದು ಸಹಜ ತಿಳಿಯುವದು. ಸಮಾಜಾಗ್ರಣಿಗಳೇ ಸಭೆಯಲ್ಲಿರುತ್ತಿದ್ದರು. ಅಂತೇ, “ಧರ್ಮಾಯ ಸಭಾಚರಂ ಯಜುರ್ವೇದ ೩೦।೬ “ಧರ್ಮಕ್ಕಾಗಿ ಸಭಾಸದರನ್ನು

ಸ್ವೀಕರಿಸುತ್ತೇನೆ" ಎಂದು ಹೇಳಿದೆ. ಸಭಾಸದರು ಧರ್ಮರಕ್ಷಣೆ ಮಾಡುವವರೂ ಧರ್ಮಪ್ರಸಾರಮಾಡುವವರೂ ಇರಬೇಕಾಗುತ್ತದೆ. ಅಧರ್ಮವುಂಟಾದ ಕಾಲದಲ್ಲಿ ಸಭಾಸದರು ತಮ್ಮ ಧಾರ್ಮಿಕವರ್ಚಸ್ಸಿನಿಂದ ಅಧರ್ಮವನ್ನು ದೂರಪಡಿಸುವರು. ಧರ್ಮವೆಂದರೆ, "ಬೌದ್ಧಧರ್ಮ,, "ಮುಸಲ್ಮಾನೀಧರ್ಮ,, ಹೀಗೆ ವಿವಕ್ಷಿತ ಸಮಾಜದ ಮಟ್ಟಿಗೆ ಮಾಡಿದ ಸಂಕುಚಿತಾರ್ಥದ್ದಲ್ಲ. ಇಡೀ ಜಗತ್ತಿಗೆ ಉಪಯೋಗಕ್ಕೆ ಬೀಳುವ ವ್ಯಾಪಕಾರ್ಥವು ಅದರಲ್ಲಿರುತ್ತದೆ.

ಯತಃಅಭ್ಯುದಯ–ನಿಶ್ರೇಯಸ–ಸಿದ್ಧಿಃಸಃಧರ್ಮಃ॥(ವೈಶೇಷಿಕ–ದರ್ಶನ.) "ಯಾವ ಧರ್ಮದಿಂದ ಈ ಲೋಕದಲ್ಲಿ ಊರ್ಜಿತಾವಸ್ಥೆಯೂ, ಪಾರಮಾರ್ಥಿಕ ಮೋಕ್ಷಪ್ರಾಪ್ತಿಯೂ ಆಗುವದೋ ಅದಕ್ಕೆ ಧರ್ಮವೆನ್ನಬೇಕು." ಹೀಗೆ ಕಣಾದನೆಂಬ ಮಹಾಮುನಿಯು ಹೇಳಿದ್ದಾನೆ. ಐಹಿಕ ಉನ್ನತಿಯಲ್ಲಿ ಹಲವು ಸಂಗತಿಗಳ ಸಮಾವೇಶವಾಗುತ್ತದೆ. ವಿತ್ತ–ಜೀವಿತಗಳಿಗೆ ತೊಂದರೆಯಾಗಬಾರದು, ಸ್ತ್ರೀಯರ ಪವಿತ್ರತೆಗೆ ಭಂಗಬರಬಾರದು, ಯಾವನೊಬ್ಬನ ಶ್ರಮದ ಪ್ರತಿಫಲವು ಅವನಿಗೇ ದೊರೆಯಬೇಕು, ಅನ್ಯಾಕ್ರಾಂತವಾಗಬಾರದು. ಇವೆಲ್ಲ ಸಂಗತಿಗಳು ಸಮಾಜದ ಐಹಿಕಸುಸ್ಥಿತಿಗೆ ಅವಶ್ಯವಾಗಿರುತ್ತವೆ. ಸಾಮಾಜಿಕ–ನೈತಿಕ–ಅಧರ್ಮವನ್ನು ಹೋಗಲಾಡಿಸುತ್ತ, ಏಳ್ಗೆಯುಂಟಾಗುವಂತೆ ಮಾಡುವದು ಶ್ರೇಷ್ಠವೂ ಸರ್ವವ್ಯಾಪಿಯೂ ಆದ ಧರ್ಮವು. ಇದಕ್ಕಾಗಿಯೇ ಸಭೆಗಳು ಇರುತ್ತಿದ್ದವೆಂದು ಮೇಲಿನ ಮಂತ್ರದ ತಾತ್ಪರ್ಯವಿರುತ್ತದೆ.

ಮೇಲಿನ ವಿವರಣೆಯಿಂದ, ಸಭೆಯು ಅಂದರೆ ಸಭಾಸದರ ಕರ್ತವ್ಯದ, ಹಾಗು ಅಧಿಕಾರದ ಕಲ್ಪನೆಯು ಅಸ್ಪಷ್ಟವಾಗಿ ಕೆಲಮಟ್ಟಿಗಾದರೂ ಆಗುವದು. ಇನ್ನು ಸಭೆಗಳ ಯೋಗ್ಯತೆಯು ಎಷ್ಟಿತ್ತೆಂಬದು ಸಹ ವೇದ ವಾಕ್ಯಗಳಲ್ಲಿ ಅಲ್ಲಲ್ಲಿ ಗೋಚರವಾಗುತ್ತದೆ.

"ಯತ್ ಗ್ರಾಮೇ ಯತ್ ಅರಣ್ಯೇ ಯತ್ ಸಭಾಯಾಂ ಯತ್ ಇಂದ್ರಿಯೇ ಯತ್ ಶೂದ್ರೇ ಯತ್ ಆರ್ಯೇ ಏನಃ ಚಕೃಮಃ ವಯಂ ಯತ್ ಏಕಸ್ಯ ಅಧಿ ಧರ್ಮಣಿ ತಸ್ಯ ಅವಯಜನಮಸಿ"॥ಯಜುರ್ವೇದ॥೨೦।೧೭॥ "ಗ್ರಾಮವು, ಅರಣ್ಯವು, ಸಭೆಯು, ಇಂದ್ರಿಯಗಳು, ಶೂದ್ರರು, ಆರ್ಯರು(ಬ್ರಾಹ್ಮಣ–ಕ್ಷತ್ರಿಯ–ವೈಶ್ಯರು), ಇವರೆಲ್ಲರ ಸಂಬಂಧದಲ್ಲಿ, ನಾವು ಮಾಡಿದ ಪಾಪದ ನಿಷ್ಕೃತಿಯು ಇದು ಇರುತ್ತದೆ.,,

ಈ ಮಂತ್ರದಲ್ಲಿ ಸಭೆಯು ಸಂಬಂಧದಿಂದ ಏನಾದರೂ ಪ್ರಮಾದ ಉಂಟಾಗಿದ್ದರೆ, ಅಂದರೆ ಸಭೆಯು ನಿಯಮಗಳ ವಿರುದ್ಧವಾಗಿ ವರ್ತಿಸಿದ್ದರೆ ಅದೊಂದು

ದೊಡ್ಡ ಅಪರಾಧವಾಗುತ್ತಿತ್ತೆಂತಲೂ, ಆ ಅಪರಾಧದ ನಿಷ್ಕೃತಿಯಾಗಲೇಬೇಕೆಂತಲೂ ಹೇಳಿದಂತೆ ತೋರುತ್ತದೆ. ವೇದಕಾಲದಲ್ಲಿ ಗ್ರಾಮವ್ಯವಸ್ಥೆಯ ನಿಯಮಗಳೂ, ಅರಣ್ಯ ಸಂಬಂಧದ ನಿಯಮಗಳೂ, ಇಂದ್ರಿಯವಿಷಯಕವಾದ ನಿಯಮಗಳೂ, ಆರ್ಯ-ಶೂದ್ರರ ಸಂಬಂಧದ ನಿಯಮಗಳೂ ಇದ್ದವು. ಆ ನಿಯಮಗಳನ್ನು ಸಭೆಯವರು ಗೊತ್ತುಮಾಡುತ್ತಿದ್ದರು. ಅವುಗಳಂತೆ ನಡೆಯುವದು ಪುಣ್ಯಕರವೆಂತಲೂ, ಅವುಗಳನ್ನು ಉಲ್ಲಂಘಿಸುವದು ಪಾಪವೆಂತಲೂ, ಇಡೀ ಸಮಾಜದವರು ತಿಳಿಯುತ್ತಿದ್ದರು. ಇವುಗಳಂತೆಯೇ ಸಭೆಯ ಸಂಬಂಧದ ಎಷ್ಟೋ ನಿಯಮಗಳುಂಟಾಗಿದ್ದವು. ಸಭೆಯ ವ್ಯವಸ್ಥೆ, ಪದ್ಧತಿ, ಇವುಗಳನ್ನು ಮೀರಿ ನಡೆಯುವದು ಪಾಪವೆಂದು ತಿಳಿಯಲ್ಪಡುತ್ತಿತ್ತು. ಅಯೋಗ್ಯ ಸಭೆಗಳ ನಿಯಮಗಳನ್ನು ಪಾಲಿಸಿದರೂ ಅಷ್ಟೇ, ಮೀರಿದರೂ ಅಷ್ಟೇ. ಅದರಿಂದ ಪುಣ್ಯಪಾಪಗಳನ್ನು ಗಣಿಸುವದು ಅಗತ್ಯವಲ್ಲ. ಆದರೆ ಸಭೆಯ ನಿಯಮಗಳ ಪಾಲನೋಲ್ಲಂಘನಗಳಿಂದ ಪುಣ್ಯಪಾಪಗಳುಂಟಾಗುತ್ತಿದ್ದರೆ, ಆ ಸಭೆಯು ಎಷ್ಟು ಮಹಿಮೆಯುಳ್ಳದ್ದೂ ಯೋಗ್ಯತೆಯುಳ್ಳದ್ದೂ ಶಕ್ತಿಶಾಲಿಯೂ ಇರಬಹುದೆಂಬುದು ಸಹಜ ತಿಳಿಯುವಂತಿದೆ. ಇಂಥ ಸಭೆಯಲ್ಲಿ ಹಲವು ವಿಧದ ಮಾತುಗಳ ಬಗ್ಗೆ ಚರ್ಚೆಯೂ ನಿರ್ಣಯವೂ ಆಗುತ್ತಿದ್ದವು. ಆಗ ಬಯ್ಗುಳ, ನಿಂದೆ, ಮುಂತಾದ ಅವಾಚ್ಯವಾಕ್ಯಗಳನ್ನು ಆಡದೆ ಶಿಷ್ಟಾಚಾರ ಸಮ್ಮತವಾದ ಮನೋಹರವಾದ ಯೋಗ್ಯ ಭಾಷೆಯನ್ನೇ ಉಪಯೋಗಿಸುತ್ತಿದ್ದರು. ವೈದಿಕ ರಾಷ್ಟ್ರಗೀತದಲ್ಲಿ---

ಯೇ ಗ್ರಾಮಾಃ ಯತ್ ಅರಣ್ಯಂ ಯಾಃ ಸಭಾಃ ಅಧಿಭೂಮ್ಯಾಂ ಯೇ
ಸಂಗ್ರಾಮಾಃ ಸಮಿತಯಃ ತೇಷು ಚಾರು ವದಾಮಿ ತೇ॥ ಅಥರ್ವ೦ ೧೨।೧।

“ಊರು, ಅರಣ್ಯ, ಸಭೆ, ಯುದ್ಧ, ಸಮಿತಿ ಮುಂತಾದವುಗಳಲ್ಲಿ (ಹೇ ಮಾತೃಭೂಮಿಯೇ) ನಾನು ನಿನ್ನ ಬಗ್ಗೆ ಒಳಿತಿರುವದನ್ನೇ ಆಡುವೆನು, ಎಂದು ಹೇಳಿದೆ. ಮನುಷ್ಯನು ಊರಲ್ಲಿರಲಿ, ಅರಣ್ಯದಲ್ಲಿರಲಿ, ಸಭೆಯಲ್ಲಿರಲಿ, ಮನೆಯಲ್ಲಿರಲಿ, ಹಗೆಗಳೊಡನೆ ಹೋರಾಡುತ್ತಿರಲಿ, ಅವನು ಸ್ವದೇಶದ ಸಂಬಂಧದಿಂದ ಹಿತಕರವಾದದ್ದನ್ನು ಮಾತಾಡುತ್ತಿರಬೇಕೆಂದು ಮೇಲಿನ ಮಂತ್ರದ ಭಾವವು. ಈ ಸ್ಥಿತಿಯುಂಟಾಗಲಿಕ್ಕೆ ಹಿಂದೂ ಆರ್ಯರ ಸಮಾಜದಲ್ಲಿ ಮಾತಾಡುವ ಮಾತುಗಳು ಸಹ ಚೆಲೋ ಇರಬೇಕೆಂಬ ಬಗ್ಗೆ ನಿರ್ಬಂಧವಿತ್ತೆಂದು ಗೊತ್ತಾಗುತ್ತದೆ. ಹೀಗೆ ಸೂಕ್ತಿ ಸಂತುಷ್ಟವಾದ ಸಭೆಗೆ ಎಲ್ಲ ಜನರು ಭಕ್ತಿಪೂರ್ವಕವಾಗಿ ವಂದಿಸಿ, ಅದರ ಆಜ್ಞೆಗಳನ್ನು ಶಿರಸಾವಹಿಸುತ್ತಿದ್ದರಲ್ಲಿ ಆಶ್ಚರ್ಯವೇನು! ಇಂಥ ಸಭೆಗಳಲ್ಲಿ ಎಲ್ಲ ಜನರ ಪ್ರವೇ

ಕವು ಆಗುತ್ತಿತ್ತು. ಈಗ ವಿಶಿಷ್ಟ ಜಾತಿಯ ಹಲವು ಸಭೆಗಳಾಗಿರುವವು. ಆದರೆ ಅವೆಲ್ಲ ಸಾರ್ವಜನಿಕ ಸಭೆಗಳಲ್ಲ. ವೇದಕಾಲದ ಆರ್ಯರ ಸಭೆಯು ಸರ್ವರಿಗೆ ಮುಕ್ತದ್ವಾರವಾಗಿತ್ತು.

ಸಮಾನೋ ಮಂತ್ರಃ ಸಮಿತಿ ಸಮಾನಿ
ಸಮಾನಂ ಮನಃ ಸಹಚಿತ್ತಮೇಷಾಮ್ ॥
ಅಥರ್ವಂ ೬।೬೪ ಋಗ್ವೇದ ೧೦।೧೯೧।೩ ॥

"ವಿಚಾರವು ಸಮಾನವು. ಮನಸ್ಸು ಸಮಾನವು. ಸಭೆಯು ಸರ್ವರಿಗೂ ಸಮಾನವು. ಎಲ್ಲರ ಚಿತ್ತವು ಸಮಾನವು" ಹೀಗೆ ಗುಣಿಗಳಾದ ಸರ್ವಜನರಿಗೂ ಮುಕ್ತದ್ವಾರವಾಗಿ ಆ ಕಾಲದ ಸಭೆಗಳಿರುತ್ತಿದ್ದವು. ಈ ಸಭೆಗಳ ಅತಿ ಸಂಕ್ಷಿಪ್ತ ಸ್ವರೂಪವೇ "ಪಂಚಾಯತನ ಪದ್ಧತಿ" ಅಥವಾ ಪಂಚಾಯತಿ(ಪಂಚೈತಿ) ಎಂಬದಾಗಿತ್ತು. ಪಂಚಾಯತನದಲ್ಲಿ (೧) ಬ್ರಾಹ್ಮಣ, (೨) ಕ್ಷತ್ರಿಯ, (೩) ವೈಶ್ಯ, (೪) ಶೂದ್ರ, (೫) ನಿಷಾದ, ಎಂಬ ೫ ಜನರ ಸಮಾವೇಶವಾಗುತ್ತಿತ್ತು. ಈ ಪಂಚಾಯತಿಯ ವಿಸ್ತೃತ ಸ್ವರೂಪವೇ ಪ್ರಾಚೀನ ಸಭೆಗಳೆಂದು ತಿಳಿದರೆ, ಅದರಲ್ಲಿ ಸರ್ವಜಾತಿಯವರ ಸಮಾವೇಶವಾಗುತ್ತಿತ್ತೆಂದು ಸಹಜಗೊತ್ತಾಗುವದು. ಇಂಥ ಸಭೆಗಳಲ್ಲಿ ಸೇರುವವರಿಗೂ ಸಭಾಧ್ಯಕ್ಷರಿಗೂ ರಾಷ್ಟ್ರದೊಳಗಿನ ಎಲ್ಲ ಜನರು ಮಾನ ಕೊಡುತ್ತಿದ್ದರು. ಮತ್ತು ಇಂಥ ಸಭೆಗೆ ಯೋಗ್ಯರಾದ ಮಕ್ಕಳಾಗಬೇಕೆಂತಲೂ, ಆ ಮಕ್ಕಳು ಸಭಾಧ್ಯಕ್ಷರಾಗಬೇಕೆಂತಲೂ ಆರ್ಯರು ಪರಮೇಶ್ವರನನ್ನು ಪ್ರಾರ್ಥಿಸುತ್ತಿದ್ದರು.

ಸೋಮೋಧೇನುಂ ಸೋಮೋ ಅರ್ವಂತಂ ಆಶು ಸೋಮೋ ವೀರಂ ಕರ್ಮಣ್ಯಂ ದದಾತಿ। ಸಾದನ್ಯಂ ವಿದ್ಥ್ಯಂ ಸಭೇಯಂ ಪಿತೃಶ್ರವಣಂ ಯೋ ದದಾಶದಸ್ಮೈ॥
ಯಜು ೩೪।೨೧

"ಪರಮೇಶ್ವರನು (ತನ್ನ ಈ) ಭಕ್ತನಿಗೆ ಆಕಳನ್ನೂ ಚುರುಕಾದ ಕುದುರೆಗಳನ್ನೂ ಕೊಡುತ್ತಾನೆ. ಅದರಂತೆ ಶೂರನೂ, ವೀರನೂ, ಉದ್ಯೋಗಿಯೂ, ಗೃಹಕೃತ್ಯದಲ್ಲಿ ದಕ್ಷನೂ, ಸಭೆಯಲ್ಲಿ ಹೆಸರುವಾಸಿಯಾಗುವವನೂ, ವಿದ್ವಾಂಸರಿಗೆ ಸಮ್ಮತನಾದಂಥವನೂ, ತಂದೆಯ ಹೆಸರನ್ನು ಪ್ರಸಿದ್ಧಗೊಳಿಸುವವನೂ ಆದ ಮಗನನ್ನು ಕೊಡುತ್ತಾನೆ. ಸುಪುತ್ರನೆನಿಸಿಕೊಳ್ಳಬೇಕಾದರೆ ಶೌರ್ಯ, ಧೈರ್ಯ, ಕಾರ್ಯ ಕೌಶಲ್ಯ, ಉದ್ಯೋಗ-ನಿಪುಣತೆ, ಮನೆಗೆಲಸಗಳಲ್ಲಿ ದಕ್ಷತೆ, ವಿದ್ವತ್ತೆ, ಸಭೆಯ ಕೆಲಸವನ್ನು ಚೆನ್ನಾಗಿ ನಡಿಸುವ ಚಾತುರ್ಯ, ಮನೆತನದ ಕೀರ್ತಿಯನ್ನು

ಬೆಳಿಸುವದು, ಮುಂತಾದ ಸದ್ಗುಣಗಳು ಆತನಲ್ಲಿ ಇರಬೇಕಾಗುತ್ತಿತ್ತೆಂಬದು ಮೇಲಿನ ಮಂತ್ರದಲ್ಲಿ ಸ್ಪಷ್ಟವಾಗಿ ಹೇಳಿದೆ. ದೇವರು ಸಭೆಗೆ ಯೋಗ್ಯನಾದ ಮಗನನ್ನಿಷ್ಟೇ ಅಲ್ಲ, ಸಭಾಧ್ಯಕ್ಷನಾಗಲಿಕ್ಕೆ ತಕ್ಕವನಾದ ಮಗನನ್ನು ಕೊಡಲಿ, ಎಂದು ಬೇಡಿಕೊಂಡ ಸಂಗತಿಯು ವಿಶೇಷ ಲಕ್ಷದಲ್ಲಿಡತಕ್ಕ ಸಂಗತಿಯು. ಮಗನು ಸಭಾಧ್ಯಕ್ಷನಾಗುವದೆಂದರೆ ತಂದೆಯ ಇಚ್ಛೆಯ ಪರಮಾವಧಿ-ಪೂರ್ತತೆಯೂ, ಪರ ಮಾನಂದಾಸ್ಪದ ಸಂಗತಿಯೂ ಆಗಿತ್ತು. ಅಧ್ಯಕ್ಷನಾಗುವದು ಸರ್ವಜನರ ಅಂತಿ ಮಧ್ಯೇಯವಾಗಿದ್ದದರಿಂದ ಆ ಸಭೆಯ ವರ್ಚಸ್ಸೂ ಅದರ ಮುಖ್ಯಸ್ಥನ ಯೋಗ್ಯ ತೆಯೂ ಅಸದೃಶವಾಗಿತ್ತೆಂಬದರಲ್ಲಿ ಸಂದೇಹವಿಲ್ಲ. ಅಂತೇ ಸಭಾಸದನಾಗುವ ಮಗನು ಹುಟ್ಟಲೆಂದು ದೇವರಿಗೆ ಪ್ರಾರ್ಥಿಸುತ್ತಿದ್ದರು. ಸಭೆಯ ಸಾಮರ್ಥ್ಯವೆಷ್ಟಿ ತ್ತೆಂಬದು ಮುಂದಿನ ಮಂತ್ರದಿಂದ ಸ್ಪಷ್ಟವಾಗಿ ತೋರುತ್ತದೆ. ಆ ಮಂತ್ರವ ಯಾವದೆಂದರೆ—

ಧ್ರುವೋ ಅಚ್ಯುತಃ ಪ್ರಮೃಣೀಹಿ ಶತ್ರೂನ್
ಶತ್ರೂಯತೋ ಅಧರಾನ್ ಪಾದಯಸ್ವ ॥
ಸರ್ವಾ ದಿಶಃ ಸಂಮನಸಃ ಸಧ್ರೀಚೀಃ
ಧ್ರುವಾಯತೇ ಸಮಿತಿಃ ಕಲ್ಪತಾಮಿಹ ॥

ಅಥರ್ವ೦ ೬।೮೮

"ಎಲೈ ರಾಜನೇ, ನೀನು ಸ್ಥಿರವಾಗಿರು, ಪದಚ್ಯುತನಾಗಬೇಡ, ಶತ್ರು ಸಂಹಾರಮಾಡು, ಶತ್ರುಗಳಂತೆ ನಡೆಯುವವರನ್ನು ಕೆಳಗೆ ಮೆಟ್ಟಬಿಡು, ದಿಕ್ಕುಗಳೊಳಗಿನ ಜನರು ಒಮ್ಮನದಿಂದ ನಡೆಯುತ್ತ ಕೆಲಸಗಳನ್ನು ಜರಗಿ ಸುವವರಾಗಲಿ, ಮತ್ತು ಈ ಸಭೆಯು ನಿನ್ನ ಸ್ಥೈರ್ಯಕ್ಕೋಸ್ಕರ ಕೆಲಸಮಾಡು ಥಾದ್ದಾಗಲಿ"

ಅರಸನಿಗೆ ತನ್ನ ಪದವಿಯು ಸ್ಥಿರವಾಗಿರಬೇಕೆಂತಲೂ ಅದಕ್ಕೋಸ್ಕರ ಯನ್ನು ಸ್ಥಾಪಿಸಿ, ಅದರ ಸಹಾಯವನ್ನು ಪಡೆಯತಕ್ಕದ್ದೆಂತಲೂ ಸಮಾಜ ವರ್ಚಸ್ಸುಳ್ಳ ಜನರ ಸಭೆಯಿಂದ ರಾಜಪದವಿಯು ಸ್ಥಿರವಾಗಿ ಉಳಿಯುವದೆಂತ ಮೇಲಿನ ಮಂತ್ರದ ತಾತ್ಪರ್ಯವು. ಅತಿಪ್ರಾಚೀನಕಾಲದಲ್ಲಿ ಆರ್ಯರ ಟೊ ಳಿದ್ದವೇ ಹೊರತು ರಾಜನಿದ್ದಿಲ್ಲ. ರಾಜನು ಟೋಳಿಗಳಿಂದಲೇ ಆರಿಸಲ್ಪ ಡ್ಡನು. ಜನರಿಂದ ಆರಿಸಲ್ಪಡುವವನೇ ಅರಸನಾಗುತ್ತಿದ್ದನು. ಇದೇ ಸ್ಥಿ ರೋಮ-ಗ್ರೀಸ ರಾಷ್ಟ್ರಗಳಲ್ಲಿ ಇತ್ತು. ಜನರಿಂದ ಆರಿಸಲ್ಪಟ್ಟ ಕಾನ್ಸಲ್

ದರಿಬ್ಬರು ರಾಜ್ಯವಾಳುತ್ತಿದ್ದರು. ಮುಂದೆ ರೋಮದ ಬಾದಶಹರು ರಾಜ್ಯಾಧಿಕಾರಿಗಳಾದರು. ಅದರಂತೆ ಹಿಂದೂ ಆರ್ಯರಲ್ಲಿಯೂ ಅರಸೊತ್ತಿಗೆಯು ಸಭೆಗಳಿಂದಲೇ ಉತ್ಪನ್ನವಾಗಿರುತ್ತದೆ. ಆ ಕಾಲದಲ್ಲಿ ಅರಸನು ಸಭೆಯ ಅನುಮತಿಯಂತೆ ರಾಜ್ಯವಾಳುತ್ತಿದ್ದದ್ದು ಸಹಜವದೆ. ಆದದರಿಂದ ಅರಸನಿಗೆ ಆಲೋಚನೆಹೇಳುವ, ಸಭೆಗೆ ಯೋಗ್ಯನಾದ ಮಗನು ಹುಟ್ಟಲೆಂದು ಜನರು ದೇವರನ್ನು ಪ್ರಾರ್ಥಿಸಿದ್ದು ಯುಕ್ತವಾದದ್ದಿರುತ್ತದೆ.

ಇಂಥ ಸಭೆಗಳಿಗೆ ಅರಸನಾದರೂ ಚನ್ನಾಗಿ ಮಾನಕೊಡುತ್ತಿದ್ದನೆಂಬ ಸಂಗತಿಯು ಸ್ಪಷ್ಟವದೆ. ತಾನು ಮಾಡಿದ, ಹಾಗು ಮಾಡುವ ಕೆಲಸಗಳನ್ನು ಸಭೆಯವರಿಗೆ ನಿವೇದಿಸಿ, ಸಭಾಸದರು ಒಪ್ಪಿಸಿದ ಕೆಲಸಗಳನ್ನು ಮಾಡುವದು ತನ್ನ ಕರ್ತವ್ಯವೆಂದು ಅರಸನು ತಿಳಿಯುತ್ತಿದ್ದನೆಂಬದು, ಕೆಳಗೆ ಹೇಳಿದ ಮಂತ್ರದಿಂದ ಗೊತ್ತಾಗುತ್ತದೆ.

ಅಭಿಭೂ ರಹಮಾಗಮಂ ವಿಶ್ವಕರ್ಮೇಣ ಧಾಮ್ನಾ।
ಆ ವಃ ಚಿತ್ತಂ ಆ ವ್ರೋ
ವೃತಂ ಆವೋsಹಂ ಸಮಿತಿಂ ದದೇ ॥ ೪೧ ಋಗ್ವೇದ ೧೦।೧೬೬

"(ಎಲೈ ಸಭಾಸದರೇ)ಸರ್ವಪ್ರಯತ್ನದಿಂದ ಜಯಶಾಲಿಯಾಗಿಯೂ ತೇಜಸ್ವಿಯಾಗಿಯೂ ನಾನು ಬಂದಿದ್ದೇನೆ. ನಿಮ್ಮ ವಿಚಾರವನ್ನೂ ನಿಮ್ಮ ಕಾರ್ಯವನ್ನೂ ನಿಮ್ಮ ಸಭೆಯನ್ನೂ ಈಗ ನಾನು ಸ್ವೀಕರಿಸುತ್ತೇನೆ." ಅರಸನೂ ಸಭೆಯವರೂ ಒಂದೇ ಮನಸಿನಿಂದ ನಡೆಯುತ್ತಿದ್ದರು. ಅರಸನು ಸಭೆಯವರು ಒಪ್ಪಿಸಿದ ಕೆಲಸವನ್ನು ಮಾಡುತ್ತಿದ್ದನು. ಸಭೆಯವರು ತಿಳಿಮನಸಿನಿಂದ ಅರಸನಿಗೆ ಆಲೋಚನೆಹೇಳಿ, ಎಲ್ಲ ಬಗೆಯಿಂದ ಸಹಾಯಮಾಡುತ್ತಿದ್ದರು. ಹೀಗೆ ಶುದ್ಧ ಮನಸಿನಿಂದ ಪರಸ್ಪರರು ಆನಂದದಿಂದ ನಡಕೊಳ್ಳುತ್ತಿದ್ದ ಸಂಗತಿಯು ಕಲ್ಪನೆಗೆ ಸಹ ಬಹುರಮ್ಯವಾಗಿ ತೋರುವದು. ಅರಸನಿಗೆ ಸಹಾಯ ಮಾಡಲಿಕ್ಕೆ ೩ ಸಭೆಗಳಿರುತ್ತಿದ್ದವೆಂದು ಮುಂದಿನ ಮಂತ್ರದಿಂದ ಗೊತ್ತಾಗುತ್ತದೆ.

ತ್ರೀಣಿ ರಾಜಾನಾ ವಿದಥೇ ಪುರೂಣಿ
ಪರಿ ವಿಶ್ವಾನಿ ಭೂಷಥಃ ಸದಾಂಸಿ॥೬॥ ಋಗ್ವೇದ ೩।೩೮

"ಅರಸರು ಮೂರು ವಿಸ್ತೃತವಾದ ಸಭೆಗಳನ್ನು ಮಾಡುತ್ತಾರೆ. ಮತ್ತು ಆ ಮೂರನ್ನೂ (ತಾವು ಹೋಗಿ) ಅಲಂಕರಿಸುತ್ತಾರೆ."

ಲೋಕವ್ಯವಹಾರದ ಕೆಲಸಗಳು ಚನ್ನಾಗಿ ಆಗ ಬೇಕಾದರೆ ಹೀಗೆ ಸಭೆಗ

ಳಿರುವದು ಅವಶ್ಯವದೆ. ಸಾಂಪ್ರತಕಾಲದಲ್ಲಿ ಇಂಗ್ಲಂಡದಲ್ಲಿ ಸಹ ೧ ಮಂತ್ರಿಮಂಡಲದಸಭೆ(ಕ್ಯಾಬಿನೆಟ್) ೨ಲಾರ್ಡರಸಭೆ, ೩ಕಾಮನ್ಸರಸಭೆ. ಹೀಗೆ ಮೂರು ಸಭೆಗಳಿದ್ದದ್ದರಿಂದಲೇ ಇಂಗ್ಲಿಷ ಸಾಮ್ರಾಜ್ಯದ ಕಾರಭಾರವು ನಿರ್ದೋಷವಾಗಿ ನಡೆದಿರುತ್ತದೆ. ವೈದಿಕ ಕಾಲದಲ್ಲಿ ಈಗಿನ ಕಾಲದ ರಚನೆಯುಳ್ಳ ಸಭೆಗಳಿರದಿದ್ದರೂ ಬೇರೆ ವಿಧವಾಗಿಯಾದರೂ ೩ ಸಭೆಗಳಿದ್ದವೆಂದು ಮೇಲಿನ ಮಂತ್ರದಿಂದ ಸ್ಪಷ್ಟವಾಗುತ್ತದೆ. ಅರಸನಿಗೆ ಸಭೆಗಳ ನೆರವಿದ್ದರೆ ಅನರ್ಥವು ಕಡಮೆಯಾಗುವದೆಂಬ ಮಾತನ್ನೇ ಕೆಳಗೆ ಹೇಳಿದೆ—

ರಾಜಾನಾವನಭಿದ್ರುಹಾ ಧ್ರುವೇ ಸದಸಿ ಉತ್ತಮೇ
ಸಹಸ್ರಸ್ಥೂಣ ಆಸಾಥೇ ॥೫॥ ಋಗ್ವೇದ ೨।೪೧

"ಯಾವ ರಾಜರು ಹಲವು ಕಂಬಗಳಿಂದ ಯುಕ್ತವಾದ ಉತ್ತಮ ಹಾಗು ಗಟ್ಟಿಮುಟ್ಟಾದ ಸಭೆಯಲ್ಲಿ ಕೂಡ್ರುವರೋ ಅವರು ಪರಸ್ಪರರಲ್ಲಿ ಅಭಿದ್ರೋಹ ಮಾಡುವದಿಲ್ಲ"

ಸಭೆಯ ಸಹಾಯವುಳ್ಳ ರಾಜರು ಪರಸ್ಪರರಲ್ಲಿ ದ್ರೋಹಮಾಡುವದಿಲ್ಲ. ಅದರಿಂದ ಯುದ್ಧಗಳಾಗುವದು ತೀರಕಡಿಮೆಯಾಗುತ್ತದೆ. ಯುದ್ಧದಲ್ಲಿ ದಂಡಾಳುಗಳು ಮಡಿಯುವರು. ಅವರು ಪರಂಪರೆಯಿಂದ ಸಭೆಯವರ ಆಪ್ತೇಷ್ಟರೇ ಇರುವರು. ತಮ್ಮ ಆಪ್ತೇಷ್ಟರ ಮರಣವನ್ನು ತರುವಂಥ ಗೊಂದಲ, ಬಡಿದಾಟ,ಯುದ್ಧಗಳನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕೆಂದು ಸಭೆಯವರು ಅರಸರ ಚಿತ್ತಕ್ಕೆ ವೇದ್ಯವಾಗುವಂತೆ ತಿಳಿಸುವರು. ಇದರಿಂದ ಅರಸರು ರಕ್ತಪಾತಮಾಡದೆ, ಸಾಮೋಪಚಾರದಿಂದ ಜಗಳಗಳನ್ನು ಬಗೆಹರಿಸಿಕೊಳ್ಳುವರು. ಸಭೆಗಳಿರುವದರಿಂದ ಆಗುವ ಶ್ರೇಷ್ಠತಮವಾದ ಪ್ರಯೋಜನವು ಇದೆ. ಅಂತೇ ಪ್ರಾಚೀನರಾಜರು ಸಭೆಗಳಿಗೆ ಮಾನಕೊಡುತ್ತಿದ್ದಂತೆ ವೇದಮಂತ್ರಗಳಲ್ಲಿ ಹೇಳಿದೆ.

ಮೇಲಿನ ವಿವರಣದಿಂದ ನೋಡಲು, ಅರಸನು ಸದಾಜಾಗ್ರಣಿಗಳಾದ ಸಭೆಯವರ ಸಮ್ಮತಿಯಿಂದ ರಾಜ್ಯವಾಳುತ್ತಿದ್ದನೆಂಬ ಮಾತು ಸ್ಪಷ್ಟವಾಗುತ್ತದೆ. ಸಭೆಯವರು ಅರಸನ ಶೀಲ-ಸ್ವಭಾವಗಳನ್ನು ಪರೀಕ್ಷಿಸಿ ನಿಯಮನ ಮಾಡುತ್ತಿದ್ದರೆಂದು ತಿಳಿಯುತ್ತದೆ.

ನ ವರ್ಷಂ ಮೈತ್ರಾವರುಣಂ ಬ್ರಹ್ಮಜ್ಯಮಭಿವರ್ಷತಿ
ನಾಸ್ಮೈ ಸಮಿತಿಃಕಲ್ಪತೇ ನ ಮಿತ್ರಂ
ನಯತೇ ವಶಮ್ ॥೧೫॥ ಅಥರ್ವಂ ೫।೧೯

"ವ್ಯಭಿಚಾರಿಯಾದ ಅರಸನ ರಾಜ್ಯದಲ್ಲಿ ಮಳೆಯಾಗುವದಿಲ್ಲ. ಅವನನ್ನು ಯೋಗ್ಯನೆಂದು ಸಭೆಯು ನಿರ್ಣಯಿಸುವದಿಲ್ಲ. ಅವನಿಗೆ ಮಿತ್ರರು ವಶವಾಗುವದಿಲ್ಲ."

ರಾಜನ, ಹಾಗು ಸಭೆಯ ಸಂಬಂಧವು ಯಾವಪ್ರಕಾರವಿತ್ತೆಂಬದು ಮುಂದಿನ ಮಂತ್ರಗಳಿಂದ ತಿಳಿಯುವದು.

ಸಭ್ಯಸಭಾಂ ಮೇ ಪಾಹಿ ಯೇ ಚ ಸಭ್ಯಾಃ ಸಭಾಸದಃ

"ಎಲೈ ಸಭ್ಯರಾದ ಸಭಾಸದರೇ ನನ್ನ ಸಭೆಯರಕ್ಷಣವನ್ನು ಮಾಡಿರಿ" ಇದರಂತೆ,—

ಸಭಾ ಚ ಮಾ ಸಮಿತಿಶ್ಚಾವತಾಂ
ಪ್ರಜಾಪತೇರ್ದುಹಿತರೌ ಸಂವಿದಾನೇ
ಯೇನಾ ಸಂಗಚ್ಛಾ ಉಪ ಮಾ ಸ ಶಿಕ್ಷಾತ್
ಚಾರು ವದಾನಿ ಪಿತರಃ ಸಂಗತೇಷು ॥೧॥ ಅಥರ್ವ ೭.೧೨

"ಸಭೆಯೂ ಸಮಿತಿಯೂ ನನ್ನನ್ನು ರಕ್ಷಿಸಲಿ, ಈ ಎರಡೂ ಸಭೆಗಳು ಅರಸನಿಂದ ದೂರವಿರುವಂಥವೂ (ಅರಸನಿಗೆ) ಜ್ಞಾನದಾನ ಮಾಡುವಂಥವೂ ಇರುವವು. ಯಾವ ಸಭಾಸದನು ನನಗೆ ಭೆಟ್ಟಿಯಾಗುವನೋ ಅವನು ನನಗೆ ಶಿಕ್ಷಣವನ್ನು ಕೊಡಲಿ, ನನ್ನ ಪಿತೃಸ್ಥಾನದಲ್ಲಿರುವ ಸಭಾಸದರೇ, ನಾನು ಸಭೆಯಲ್ಲಿ ಯಾವಾಗಲೂ ಚನ್ನಾಗಿ ಮಾತಾಡುವೆನು." ಅರಸನು ತನ್ನನ್ನು ರಕ್ಷಿಸಲಿಕ್ಕೆ ಸಭೆಯವರನ್ನು ಪ್ರಾರ್ಥಿಸಿದ್ದರಮೇಲಿಂದ, ಅರಸನು ಸಭೆಯ ಅಧಿಕಾರಕ್ಕೆ ಒಳಗಾಗಿದ್ದನೆಂಬದು ಸ್ಪಷ್ಟವಾಗುತ್ತದೆ. ಹಾಗಿರದಿದ್ದರೆ ರಕ್ಷಣೆಯ ಬಗ್ಗೆ ಅವನು ಎಂದೂ ಹೀಗೆ ಪ್ರಾರ್ಥಿಸುತ್ತಿದ್ದಿಲ್ಲ. ಅರಸನು ಸಭೆಯಲ್ಲಿ ಇರುತ್ತಿದ್ದರೂ, ತನ್ನ ಆಗಮನದಿಂದ ಅದನ್ನು ಭೂಷಿಸುತ್ತಿದ್ದರೂ ಅರಸನೂ ಸಭೆಯೂ ಬೇರೆ ಬೇರೆಯಾಗಿಯೇ ಇರುತ್ತಿದ್ದವು. ಇದರಿಂದ ಸಭೆಯ ಅಧಿಕಾರವು ಸ್ವತಂತ್ರವಾಗಿತ್ತೆಂದು ತೋರುತ್ತದೆ. ಸಭಾಸದರು ಅರಸನಿಗೆ ಶಿಕ್ಷಣವನ್ನು ಕೊಡುತ್ತಿದ್ದದರಿಂದ ಅವರು ಅರಸನಿಗೆ ಗುರುವಿನಂತೆಯೂ ಅರಸನು ಅವರಿಗೆ ಶಿಷ್ಯನಂತೆಯೂ ಇದ್ದರೆಂದು ವ್ಯಕ್ತವಾಗುತ್ತದೆ. ಅರಸನು ಆ ಸಭಾಸದರಿಗೆ ಪಿತೃಸ್ಥಾನವನ್ನು ಕೊಟ್ಟದ್ದಾನೆ. ಇದರಿಂದ ಸಭೆಯವರು ರಾಜನಿಗೆ ಅತ್ಯಂತ ಪೂಜ್ಯರಿದ್ದರೆಂದು ತಿಳಿಯುತ್ತದೆ.

"ಆಚಾರ್ಯದೇವೋಭವ, ಪಿತೃದೇವೋಭವ," ಹೀಗೆ ವೈದಿಕಧರ್ಮದ ಶಾಸನವಿರುತ್ತದೆ. ಇವೆರಡೂ ಸಂಬಂಧಗಳೂ ಅರಸನ, ಹಾಗು ಅವನ ಓಲಗದವರ ನಡುವೆ ಇತ್ತು. ಹೀಗಿರುವದೇ ಆ ಕಾಲಕ್ಕೆ ಶ್ರೇಯಸ್ಕರವು. ಯಾಕಂದರೆ,

ಸಮೂಜದ ಸಭೆಗಳಿಂದಲೇ ರಾಜನು ನಿರ್ವಾಣವಾಗುತ್ತಿದ್ದನು. ಆದ್ದರಿಂದ ರಾಜನು ರಾಷ್ಟ್ರನಿಷ್ಠನಾಗಿರುತ್ತಿದ್ದನು. ರಾಷ್ಟ್ರವಿಲ್ಲದಿದ್ದರೆ ರಾಜನೆಲ್ಲಿ! ಇದರಂತೆ ಸಮೂಜದವರು ಸಹ ಕೌತುಕದಿಂದ ತಂದೆಯು ಮಗನ ಅಧೀನವಾಗುವಂತೆ—ರಾಜನಿಷ್ಠರಾಗಿರುತ್ತಿದ್ದರು.

ಸಭಾಸಮ್ಮತನಾದ ರಾಜನಿಗೆ ಎಲ್ಲವೂ ವಶವಾಗಿರುತ್ತಿದ್ದವೆಂಬ ಮಾತು ಕೆಳಗಿನ ಮಂತ್ರಗಳಲ್ಲಿ ಹೇಳಿದೆ:—

ಸ ವಿಶೋ ಅನುವ್ಯಚಲತ್ ॥೧

ತಂ ಸಭಾಚ ಸಮಿತಿಶ್ಚ ಸೇನಾ ಚ ಸುರಾಚಾನುವ್ಯಚಲನ್ ॥೨॥

ಸಭಾಯಾಶ್ಚ ವೈ ಸ ಸಮಿತೇಶ್ಚ ಸೇನಾಯಾಶ್ಚ ಸುರಾಯಾಶ್ಚ

ಪ್ರಿಯಂಧಾಮ ಭವತಿ ಯ ಏವಂ ವೇದ॥ ‹ ಅಥರ್ವವೇದ ೧೫೯.

“ಯಾವ ರಾಜನು ಪ್ರಜೆಗಳನ್ನು ಅನುಸರಿಸುವನೋ, ಅವನನ್ನು ಸಭೆಯೂ ಸೈನ್ಯವೂ ಸುರೆಯೂ (ಐಶ್ವರ್ಯವೂ-ಮದ್ಯವಲ್ಲ.) ಅನುಸರಿಸುತ್ತವೆ. ಅವನನ್ನು ಸಭೆ, ಸಮಿತಿ, ಸೈನ್ಯ, ಐಶ್ವರ್ಯ, ಇವೆಲ್ಲ ಪ್ರೀತಿಸುತ್ತವೆ. ಹೀಗೆ ತಿಳಿಯುವವನೇ (ರಾಜನೀತಿ ನಿಪುಣನು.)

ಪ್ರಜಾನಿಷ್ಠರಾಜನಿಗೆ ಮೇಲಿನವೆಲ್ಲ ಅನುಕೂಲವಾಗಿದ್ದವು. ಪ್ರಜೆಗಳಿಗೆ ವಿರೋಧಿಯಾದವನಿಗೆ ಇವೆಲ್ಲವುಗಳ ಸಹಾಯವು ತಪ್ಪಿಹೋಗುತ್ತಿತ್ತು. ಇದರ ಮೇಲಿಂದ ಸೇನೆ, ಬೊಕ್ಕಸ, ಇವುಗಳಮೇಲೆ ಅರಸನ ಅಧಿಕಾರವಿರದೆ ಸಮಾಜದ ಸಭೆಯು ಅಧಿಕಾರವಿತ್ತೆಂದು ಸ್ಪಷ್ಟವಾಗಿ ತಿಳಿಯುತ್ತದೆ. ರಾಜನಲ್ಲಿ ಯಾವಗುಣಗಳಿರಬೇಕೆಂಬ ಬಗ್ಗೆ ಹೇಳಿರುವದೇನಂದರೆ:—

ಸರ್ವೇ ನಂದಂತಿ ಯಶಸಾಗತೇನ ಸಭಾಸಾಹೇನ ಸಖ್ಯಾ ಸಖಾಯಃ

ಕಿಲ್ಬಿಷಸ್ಪೃತ್ ಪಿತುಷಣಿಃ ಹ್ಯೇಷಾಮರಂದಿತೋ ಭವತಿ ವಾಜಿನಾಯ॥

ಋಗ್ವೇದ ೧೦। ೭೧। ೧೦.

“ಸಭೆಯನ್ನು ಸಹನಮಾಡುವಂಥ, ಯಶಸ್ವಿಯಾಗಿ ಬಂದಂಥ ರಾಜ(ಮಿತ್ರ) ನನ್ನು ನೋಡಿ ಎಲ್ಲ ಸಭಾಸದರು ನಲ್ಮೆಹೊಂದುತ್ತಾರೆ. ಯಾಕಂದರೆ ರಾಜನು ಅನ್ಯಾಯವನ್ನು ದೂರಮಾಡುವವನೂ ಅನ್ನದ ಬೆಳವಣಿಗೆ ಮಾಡುವವನೂ ಬಲವೃದ್ಧಿಮಾಡುವವನೂ ಪ್ರಜೆಗಳ ಹಿತಮಾಡಲಿಕ್ಕೆ ಯೋಗ್ಯನಾದವನೂ ಇರುತ್ತಾನೆ. ಈ ಮಂತ್ರದಲ್ಲಿ ಅರಸನ ಗುಣಗಳನ್ನು ಹೇಳಿದ್ದು ಹ್ಯಾಗಂದರೆ (೧)ಅರಸನು ಸಭಾಸಳಿಕ್ಕೆ ಮಿತ್ರನಂತೆ ಇರಬೇಕು. (೨) ಅವನು ಸಭಿಕರಿಗೆ ಮಾನಕೊಡುವವನಿರ

ಬೇಕು. (೩) ತನ್ನ ಕೆಲಸದಲ್ಲಿ ಯಶಸ್ಸು ಪಡೆಯುವ ಯೋಗ್ಯತೆಯುಳ್ಳವನಿರಬೇಕು. (೪) ನ್ಯಾಯದಿಂದ ಲೋಕವ್ಯವಹಾರವನ್ನು ಸಾಗಿಸುವಂಥವನಿರಬೇಕು. (೫) ಎಲ್ಲ ಜನರಿಗೆ ಅನ್ನದ ಪೂರೈಕೆಯಾಗುವಂತೆ ಏರ್ಪಾಡುಮಾಡುವಂಥವನಿರಬೇಕು. (೬) ಸಮಾಜದ ಬಲ, ವೀರ್ಯ, ಶೌರ್ಯ, ಯೋಗ್ಯತೆಗಳನ್ನು ಬೆಳೆಸುವಂಥವನಿರಬೇಕು. ಏವಂಗುಣ ವಿಶಿಷ್ಟನಾದವನೇ ರಾಜ ಪದಕ್ಕೆ ಯೋಗ್ಯನಾಗಿ ಆರಿಸಲ್ಪಡುತ್ತಿದ್ದನು. ಇಲ್ಲದಿದ್ದರೆ ಇಲ್ಲ.

ಆ ತ್ವಾ ಹಾರ್ಷಮನ್ತರೇಧಿ ಧ್ರುವಸ್ತಿಷ್ಠಾವಿಚಾಚಲಿಃ॥

ವಿಶಸ್ತ್ವಾ ಸರ್ವಾ ವಾಂಛಂತು ಮಾತ್ವದ್ ರಾಷ್ಟ್ರಮಧಿಭ್ರಶತ್ ॥

"ಎಲೈ ರಾಜನೇ ನಾವು ನಿನ್ನನ್ನು ತಂದಿರುವೆವು. ಬಾ, ಸ್ಥಿರವಾಗಿರು, ಚಂಚಲನಾಗಬೇಡ, ಎಲ್ಲ ಪ್ರಜೆಗಳು ನಿನ್ನನ್ನು ಒಲ್ಲೈಸಲಿ, ನಿನಗೆ ರಾಜ್ಯವು ತಪ್ಪದಿರಲಿ" ಈ ಮಂತ್ರವು ರಾಜ್ಯಾಭಿಷೇಕದ ಕಾಲದಲ್ಲಿ ಅನ್ನಕಕ್ಕಿದ್ದದೆ. ಇದರಲ್ಲಿ "ಅರಸನೇ ನಿನ್ನನ್ನು ನಾವು ತಂದಿದ್ದೇವೆ" ಎಂದು ಹೇಳಿದ್ದರಿಂದ ಸಮಾಜದವರೇ ಅರಸನನ್ನು ನೇಮಿಸುತ್ತಿದ್ದರೆಂಬದು ಸ್ಪಷ್ಟವಾಗುತ್ತದೆ. ಪ್ರಜೆಗಳು ನಿನ್ನನ್ನು ಒಲ್ಲೈಸದಿದ್ದರೆ ನಿನ್ನ ಪದವಿಯು ಉಳಿಯಲಿಕ್ಕಿಲ್ಲೆಂದು ನಿಚ್ಚಳವಾಗಿ ಹೇಳಲ್ಪಟ್ಟದೆ.

ಈ ಮೇಲಿನ ವಿವರಣೆಯಿಂದ ಪ್ರಾಚೀನ ಆರ್ಯರ ಸಮಾಜದಲ್ಲಿ ಕೆಳಗೆ ಹೇಳಿದ ಸಂಗತಿಗಳು ಇದ್ದವೆಂದು ತಾತ್ಪರ್ಯ ರೂಪವಾಗಿ ಹೇಳಲಿಕ್ಕೆ ಅಡ್ಡಿಯಿಲ್ಲ. ಅವು ಯಾವವೆಂದರೆ.—

(೧) ಆ ಕಾಲದಲ್ಲಿ ಸಮಾಜಾಗ್ರಣಿಗಳ ಸಭೆಗಳಿರುತ್ತಿದ್ದವು.

(೨) ಆ ಸಭೆಗಳಲ್ಲಿ ಕೂಡ್ರುವವರೂ ಸಭಾಪತಿಗಳೂ ಪೂಜ್ಯರೆಂದು ಜನರಿಂದ ಅನ್ನಿಸಿಕೊಳ್ಳುತ್ತಿದ್ದರು.

(೩) ಅರಸನು ಸಭೆಯವರನ್ನು ಪಿತೃಸ್ಥಾನವೆಂದು ತಿಳಿಯುತ್ತಿದ್ದನು.

(೪) ಅರಸನಿಗೆ ರಾಜ್ಯವ್ಯವಹಾರದ ಜ್ಞಾನವು ಸಭೆಯವರಿಂದಲೇ ದೊರೆಯುತ್ತಿತ್ತು.

(೫) ಸಭಾಸದರು ಐಹಿಕ-ಉನ್ನತಿಯನ್ನು ಮಾಡುವಷ್ಟು ಯೋಗ್ಯತೆಯುಳವರಿರುತ್ತಿದ್ದರು.

(೬) ಸಭೆಯ ಸಂಬಂಧದ ನಿಯಮಗಳು ಮಾಡಲ್ಪಟ್ಟದ್ದವು. ಅವನ್ನು ಮೀರುವವರು ಅಪರಾಧಿಗಳೆನಿಸುತ್ತಿದ್ದರು.

(೭) ಸ್ವಸ್ಥಾನದ ಬಗ್ಗೆ ವೈದಿಕ ಕಾಲದ ಜನರು ಅಭಿಮಾನಿಗಳಾಗಿದ್ದರು.

(೮) ಸಭೆಯಲ್ಲಿ ಸರ್ವ ಯೋಗ್ಯತೆಯುಳ್ಳ ಜನರ ಪ್ರವೇಶವಾಗುತ್ತಿತ್ತು.

(೯) ಪಂಚಾಯುತಿ ಪದ್ಧತಿಯು ಎಲ್ಲ ಕಡೆಯಲ್ಲಿ ನೆಲೆಗೊಂಡಿತ್ತು.

(೧೦) ತಾಯಿತಂದೆಗಳು, ತಮ್ಮ ಮಗನು ಸಭಾಯೋಗ್ಯನಾಗಬೇಕೆಂತಲೂ ಸಭಾಸದನಾಗಬೇಕೆಂತಲೂ ಮನಃಪೂರ್ವಕವಾಗಿ ಬಯಸುತ್ತಿದ್ದರು.

(೧೧) ರಾಜನು ಪದಚ್ಯುತನಾಗದೆ ಸ್ಥಿರವಾಗಿ ಇರಬೇಕಾದರೆ ಸಮಾಜಕ್ಕೆ ಸಮ್ಮತನಾದವನಿರಬೇಕಾಗುತ್ತಿತ್ತು.

(೧೨) ರಾಜ್ಯವ್ಯವಸ್ಥೆಯ ಬಗ್ಗೆ ೨ ಇಲ್ಲವೆ ೩ ಸಭೆಗಳಿರುತ್ತಿದ್ದವು.

(೧೩) ಅರಸನು ಅಂಥ ಸಭೆಗಳಿಗೆ ಯಾವಾಗಲೂ ಹೋಗುತ್ತಿದ್ದನು.

(೧೪) ಸಭೆಗಳ ಅನುಮತಿಯಂತೆ ರಾಜಕಾರಭಾರವು ಸಾಗುತ್ತಿತ್ತು.

(೧೫) ದಂಡು, ಬೊಕ್ಕಸಗಳ ಮೇಲೆ ಸಭೆಯವರ ಅಧಿಕಾರವಿತ್ತು.

(೧೬) ಅರಸನ ನೈತಿಕ-ಆಚರಣೆಯನ್ನು ಸಹ ಪ್ರಜೆಗಳು ಪರೀಕ್ಷಿಸುತ್ತಿದ್ದರು.

(೧೭) ಸಭಾಯುಕ್ತ ರಾಜನಿದ್ದರೆ ರಾಜ್ಯದಲ್ಲಿ ಶಾಂತಿಯು ನೆಲೆಗೊಳ್ಳುವದೆಂದು ತಿಳಿದಿದ್ದರು.

ಅತ್ಯಂತ ಪ್ರಾಚೀನ ಕಾಮವಾದ ವೇದದಲ್ಲಿ ಈಗಿನ ಕಾಲದ ಸುಧಾರಿಸಿದ ರಾಜನೀತಿಯ ಸಂಪೂರ್ಣ ಸ್ವರೂಪವು ಕಂಗೊಳಿಸುವದನ್ನು ನೋಡಿದರೆ, ಜಗತ್ತಿನಲ್ಲಿ ಈ ವರೆಗೆ ಹಬ್ಬಿರುವ ಎಲ್ಲ ರಾಜ್ಯವ್ಯವಸ್ಥಾಶಾಸ್ತ್ರವು ಆರ್ಯಾವರ್ತದೊಳಗಿಂದಲೇ ಹೊರಬಿದ್ದಿರಬಹುದೆಂದು ಅನುಮಾನವಾಗುತ್ತದೆ. ಆರ್ಯಾವರ್ತವು ಎಷ್ಟೋ ವಿಷಯಗಳಲ್ಲಿ ಜಗತ್ತಿಗೆ ಗುರುವೆನಿಸಿಕೊಳ್ಳುತ್ತಿರುವಂತೆ ರಾಜನೀತಿಯ ಸಂಬಂಧದಲ್ಲಿಯೂ ಗುರುವಾಗಿರುತ್ತದೆಂದು ತರ್ಕಿಸಲಿಕ್ಕೆ ಆಸ್ಪದವಿರುತ್ತದೆ. ಇದೇ ಅರ್ಥವನ್ನು ಕುರಿತು ಸ್ಮೃತಿಕಾರರು—

ಏತದ್ದೇಶ ಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂಸ್ವಂಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥

"ಪೃಥ್ವಿಯೊಳಗಿನ ಸರ್ವಜನರು, ಆರ್ಯಾವರ್ತದಲ್ಲಿ ಹುಟ್ಟಿದ ದ್ವಿಜರಕಡೆಯಿಂದ ತಮ್ಮ ತಮ್ಮ ಕರ್ತವ್ಯಗಳನ್ನು ಕಲಿತುಕೊಳ್ಳತಕ್ಕದ್ದು" ಎಂದು ಹೇಳಿದ್ದಾರೆ. ಭೂಮಿಯಮೇಲಿನ ಇತರ ದೇಶಗಳ ಜಿಜ್ಞಾಸುಗಳು ಜ್ಞಾನಸಂಪಾದನೆಗಾಗಿ ಈ ದೇಶಕ್ಕೆ ಬರುತ್ತಿದ್ದರು. ಮತ್ತು ಅವರಿಗೆ ಈ ದೇಶದಲ್ಲಿ ಏನೂ ಅಡ್ಡಿಯಿಲ್ಲದೆ ಜ್ಞಾನದಾನ ಮಾಡಲ್ಪಡುತ್ತಿತ್ತು. ಗ್ರೀಸದ ಇತಿಹಾಸದಲ್ಲಿ ಪ್ರಸಿದ್ಧಿಹೊಂದಿದ ಲಾಯಕರ್ಗಸನೆಂಬವನು ಕಾಯದೆಗಳ ಅಭ್ಯಾಸ ಮಾಡಲಿಕ್ಕೆ ಈ ದೇಶಕ್ಕೆ ಬಂದಿದ್ದನೆಂದು ಶೋಧಕರು ಗೊತ್ತು ಹಚ್ಚಿದ್ದಾರೆ.

ಅತಿ ಪ್ರಾಚೀನಕಾಲದಲ್ಲಿ ರಾಜನಿದ್ದಿಲ್ಲವೆಂದು ಈಮೊದಲೇ ಹೇಳಿದೆ. ಆಗಿನ ಸಮಾಜದ ಅಲ್ಪತೆಯೂ ವನಚರಸ್ಥಿತಿಯೂ ಅದಕ್ಕೆ ಕಾರಣವಾಗಿದ್ದವು. ಸಮಾಜವು ಬೆಳೆದಂತೆ ಕುಟುಂಬಗಳ ಒಡೆಯನು (ವಿಸ್ಪತಿ) ಅವುಲು ನಡಿಸುತ್ತಿದ್ದನು. ಹಲವು ವಿಸ್ಪತಿಗಳ ಸಭೆಯುಂಟಾಯಿತು. ಆದರೆ ಅರಾಜಕತೆಯು ಎಂದೂ ಇದ್ದಿಲ್ಲ. ಈ ಬಗ್ಗೆ ಕೆಳಗಿನ ಮಂತ್ರದಲ್ಲಿ ಹೀಗೆ ಹೇಳಿದೆ.

ವಿರಾಡ್ವಾ ಇದಮಗ್ರ ಆಸೀತ್ ತಸ್ಯಾ ಜಾತಾಯಾ ಸರ್ವಮಬಿಭೇತ್
ಇಯಮೇವೇದಂ ಭವಿಷ್ಯತೀತಿ ||೧|| ಅಥರ್ವಂ ೮|೧೦

ಭದ್ರಮಿಚ್ಛಂತ ಋಷಯಃ ಸ್ವರ್ವಿದಃ ತಪೋದೀಕ್ಷಾಮುಪಸೇದುರಗ್ರೇ
ತತೋರಾಷ್ಟ್ರಂ ಬಲಮೋಜಶ್ಚ ಜಾತಮ್ ತದಸ್ಮೈ ದೇವಾ ಉಪಸಂ ನಮಂತು
ಅಥರ್ವಂ ೧೯|೪೧

"ಪ್ರಾರಂಭದಲ್ಲಿ ದೇಶವು (King-less) ರಾಜನಿಲ್ಲದೆ ಇತ್ತು. ಅದನ್ನು ನೋಡಿ ಎಲ್ಲರು ಅಂಜಿದರು. ಎಲ್ಲ ಕಡೆಯಲ್ಲಿಯೂ ಹೀಗೇ ಆಗುವದೋ ಏನೋ ಎಂದು ಶಂಕೆಯುಳ್ಳವರಾದರು.,,

ಆದರಿಂದ ಜ್ಞಾನಿಗಳಾದ ಋಷಿಗಳು (ಸರ್ವಜನರ) ಕಲ್ಯಾಣವಾಗಬೇಕೆಂದು ಬಯಸಿ ಪ್ರಥಮತಃ ದೀಕ್ಷಾಬದ್ಧರಾಗಿ ತಪಸ್ಸು ಮಾಡಿದರು. ಅದರಿಂದಲೇ ಬಲವೂ ರಾಷ್ಟ್ರವೂ ಓಜಸ್ಸೂ ಉತ್ಪನ್ನವಾದವು. ಆದ್ದರಿಂದ (ದೈವೀಸಂಪತ್ತಿನಿಂದ ಯುಕ್ತರಾದ) ಸರ್ವ ವಿದ್ವಾಂಸರು ಅವಕ್ಕೆ ವಂದನೆಯನ್ನು ಮಾಡಬೇಕು. ,,

ಇದರ ಮೇಲಿಂದ ನೋಡಲು, ಕೇವಲ ಋಷಿಗಳಪ್ರಯತ್ನದಿಂದಲೇ ರಾಷ್ಟ್ರವು ಉದಯವಾಯಿತು. ಅದರಿಂದ, ರಾಜನಿಲ್ಲದ್ದರಿಂದಾಗುವ ಕಷ್ಟವೂ ಪ್ರಗತಿಯುಂಟಾಗಲಿಕ್ಕೆ ಆಗುವ ತೊಂದರೆಗಳೂ ದೂರವಾಗುತ್ತ, ಜನರಿಗೆ ಒಳಿತಾಗಲಿಕ್ಕೆ ಮಾರ್ಗವಾಯಿತು. ಈ ಕೆಲಸಕ್ಕಾಗಿ ಋಷಿಗಳು ಮಿತಿಮೀರಿ ಶಾರೀರಿಕ-ಮಾನಸಿಕ ಶ್ರಮವನ್ನು ಮಾಡಿದರು. ಅವರ ಈ ರಾಷ್ಟ್ರ ನಿರ್ಮಾಣಕಾರ್ಯವು, ಅಂದರೆ ಹಿಂದೂ ಆರ್ಯ ಸಂಸ್ಕೃತಿಯದೊಂದು ಭಾಗವು ಇಡಿ ಜಗತ್ತಿನ ತುಂಬ ಹಬ್ಬಿತು. ಇದರಿಂದ ಸುಧಾರಿಸಿದ ಎಲ್ಲ ಜನಾಂಗಗಳು ಆರ್ಯ ಋಷಿಗಳ ಋಣಿಗಳಾಗಿದ್ದಾರೆಂಬದರಲ್ಲಿ ಸಂಶಯವಿಲ್ಲ. ಅರಸನಿಲ್ಲದ ಕಷ್ಟದಾಯಕ ಸ್ಥಿತಿಯೊಳಗಿಂದ, ಸಮಾಜವನ್ನು ಪಾರಮಾಡಿಕೊಂಡು, ಸಮಾಜಾಗ್ರಣಿಗಳ ಸಭಾಕಾಲದ ಸ್ಥಿತಿಯನ್ನುಂಟು ಮಾಡಿ, ಬಳಿಕ ರಾಜನಿರ್ಮಾಣಕಾರ್ಯವನ್ನು ಕೊನೆಗಾಣಿಸಿ, ಸಭಾಸದರ ಸಹಾಯದಿಂದ ರಾಜನು ರಾಜ್ಯಭಾರವನ್ನು ಮಾಡುವ ಸ್ಥಿತಿಯವರೆಗೆ ಸಮಾಜವನ್ನು

ಎಳೆದು ತರಲಿಕ್ಕೆ ಎಷ್ಟು ಕಾಲವು ಹತ್ತಿದ್ದೀತು! ಎಷ್ಟು ಶ್ರಮವುಂಟಾಗಿದ್ದೀತು! ಎಷ್ಟು ಜಾಣತನವು ವೆಚ್ಚವಾಗಿದ್ದೀತು! ಎಂಬದನ್ನು ಮನಸ್ಸಿಗೆ ತಂದರೆ, ಎಂಥವನಾದರೂ ಬೆರಗಾಗದೆ ಇರನು. ಆರ್ಯರ ಸಂಬಂಧದಿಂದ ಇನ್ನೂ ಎಷ್ಟೋ ಚಮತ್ಕಾರಿಕ ವಿಷಯಗಳು ವೇದದಿಂದ ದೊರೆಯುವಂತೆ ಅವೆ. ಆಧುನಿಕ ಪಂಡಿತರು ಪ್ರಯತ್ನಮಾಡಿ ಅವುಗಳನ್ನು ಹೊರಗೆಡವಿ ಕ್ರಮಗೊಳಿಸಿದರೆ ಐತಿಹಾಸಿಕ ದೃಷ್ಟಿಯಿಂದ ಒಳ್ಳೇ ಮನೋರಂಜಕವಾದ ಉಪಯುಕ್ತ ಜ್ಞಾನ ಮಾಡಿಕೊಟ ಶ್ರೇಯಸ್ಸಿಗೆ ಪಾತ್ರರಾಗುವರು. ವಿರಾಜಕತಾ (ಅರಸನಿಲ್ಲದ) ಸ್ಥಿತಿಯಿಂದ ಸರಾಜಕತಾ (ಅರಸನುಂಟಾದ) ಸ್ಥಿತಿಯುಂಟಾದದ್ದು ಕೆಳಗಿನ ಮಂತ್ರಗಳಿಂದ ಸ್ಪಷ್ಟವಾಗುತ್ತದೆ.

ಸೋದಕ್ರಾಮತ್ ಸಾ ಸಭಾಯಾಂ ನ್ಯಕ್ರಾಮತ್ ॥೮
ಯಂತಿ ಅಸ್ಯ ಸಭಾಂ ಸಭ್ಯೋ ಭವತಿ,
ಯ ಏವಂ ವೇದ॥೯॥
ಸೋದಕ್ರಾಮತ್ ಸಾ ಸಮಿತೌ ನ್ಯಕ್ರಾಮತ್ ॥೧೦॥
ಯಂತಿ ಅಸ್ಯ ಸಮಿತಿಂ ಸಾಮಿತ್ಯೋ ಭವತಿ,
ಯ ಏವಂ ವೇದ॥೧೧॥
ಸೋದಕ್ರಾಮತ್ ಸಾ ಮಂತ್ರಣೇ ನ್ಯಕ್ರಾಮತ್ ॥೧೨॥
ಯಂತ್ಯಸ್ಯಾಮಂತ್ರೇಣಂ ಆ ಮಂತ್ರಣೀಯೋ ಭವತಿ
ಯ ಏವಂ ವೇದ ॥೧೩॥ ಅಥರ್ವಂ ೮। ೧೦

“ ಅದು (ವಿರಾಜಕತೆಯೊಳಗಿನ ಸಮಾಜ ಶಕ್ತಿಯು) ಉತ್ಕ್ರಮಣ ಹೊಂದಿತು. ಆಗ ಅದು “ಸಭೆ”ಯಲ್ಲಿ ಪರಿಣತವಾಯಿತು. ಇದನ್ನು ತಿಳಿದವನು ಸಭೆಗೆಯೋಗ್ಯನಾಗುತ್ತಾನೆ. ಅವನ ಸಭೆಗೆ ಜನರು ಹೋಗುತ್ತಾರೆ.

ಆ ಶಕ್ತಿಯು ಉತ್ಕ್ರಮಣಹೊಂದಿತು. “ಸಮಿತಿ”ಯಲ್ಲಿ ಅದು ಪರಿಣತವಾಯಿತು. ಇದನ್ನರಿತವನು ಸಮಿತಿಗೆ ಯೋಗ್ಯನಾಗುತ್ತಾನೆ. ಅವನ ಸಮಿತಿಗೆ ಜನರು ಹೋಗುತ್ತಾರೆ.

ಆ ಶಕ್ತಿಯು ಮತ್ತೆ ಉತ್ಕ್ರಾಂತಿಹೊಂದಿತು. ಆಮಂತ್ರಣ(ಮಂತ್ರಿಮಂಡಲ)ದಲ್ಲಿ ಅದು ಪರಿಣತವಾಯಿತು. ಇದನ್ನು ತಿಳಿದವನು ಆ ಮಂತ್ರಣ (ಗುಪ್ತಾಲೋಚನಾಕಾರ್ಯ)ಕ್ಕೆ ಯೋಗ್ಯನಾಗುತ್ತಾನೆ. ಅವನ ಆಮಂತ್ರಣಕ್ಕೆ ಜನರು ಹೋಗುತ್ತಾರೆ.

ಈ ವರ್ಣನವು ಅಥರ್ವವೇದದಲ್ಲಿ ಇರುವದು. ವಿರಾಜಕತೆಯ ಸ್ಥಿತಿಯಲ್ಲಿ ಅರಸನು, ಅರಸನ ಸಭೆಯು ಇವು ಏನೂ ಇದ್ದಿಲ್ಲ. ಬರೇ ಜನರು ಮಾತ್ರ ಬಿಡಿ ಬಿಡಿಯಾಗಿ ಇದ್ದರು. ಮತ್ತು ನಿಯಾಮಕರಾರೂ ಇಲ್ಲದ್ದರಿಂದ ಎಲ್ಲರೂ ಸ್ವ-ತಂತ್ರವಾಗಿ ಇದ್ದರು. ಇಂಥ ಸ್ಥಿತಿಯು ಚಲೋದಲ್ಲ. ಇದರಿಂದ ಕಲ್ಯಾಣವೂ ಆಗಲಾರದು, ಎಂದು ತಿಳಿದು ಋಷಿಗಳು ಸಾಮಾಜಿಕ ಭಾವನೆಯನ್ನು ಹುಟ್ಟಿಸಿದರು. ಅಂದರೆ ವ್ಯಕ್ತಿಗಳಲ್ಲಿ ವಿಸಂಗತವಾಗಿದ್ದ ಶಕ್ತಿಯನ್ನು ಒಟ್ಟು ಗೂಡಿಸಿದರು. ಹೀಗೆ ಒಟ್ಟುಗೂಡಿದ ವ್ಯಕ್ತಿಗಳ ಶಕ್ತಿಯೇ ಸಮಾಜವು. ಅದೇ ಸಭೆಯಾಯಿತು. ಮಿ. ಗ್ರಿಫಿಥ್‌ಸಾಹೇಬರು ಅಥರ್ವವೇದದ ಭಾಷಾಂತರ ಮಾಡುವಾಗ ಮೇಲೆ ಹೇಳಿದ ಸಭೆಗೆ The assembly of the people of the village or hamlet ಗ್ರಾಮ ಸಭೆ ಎಂದು ಅರ್ಥಮಾಡಿರುವರು. ಇದಕ್ಕೇ ಗ್ರಾಮ ಪಂಚಾಯತಿ ಎಂಬ ಹೆಸರು. ಸಮಾಜದ ಸಂಕಲನದ ಕಾರ್ಯವು ಹಾಗೇ ಮುಂದಕ್ಕೆ ಸಾಗಿ, ಅದು "ಸಮಿತಿ" ಯಲ್ಲಿ ರೂಪಾಂತರವಾಯಿತು. ಸಮಿತಿಗೆ ಗ್ರಿಫಿಥ್‌ಸಾಹೇಬರು The meeting of the people of the district ಪ್ರಾಂತ ಸಭೆಯೆಂದು ಭಾಷಾಂತರಿಸಿರುವರು. ಎಲ್ಲ ಗ್ರಾಮಸಭೆಯ ಶಕ್ತಿಯು ಪ್ರಾಂತಸಭೆಯಲ್ಲಿ ಏಕೀಕರಣವನ್ನು ಹೊಂದಿತು. ಪ್ರಾಂತ ಸಭೆಗಳ ಸ್ಥಾಪನೆಯಾದರೂ ಸಂಧೀಕರಣದ ಕಾರ್ಯವು ಅಲ್ಲಿಗೇ ತಡೆದು ನಿಲ್ಲಲಿಲ್ಲ. ಅದು ಹಾಗೇ ಮುಂದಕ್ಕೆ ಸಾಗಿತು. ಅದು ಕೇಂದ್ರೀಭೂತವಾಗಿ "ಆಮಂತ್ರಣ ಮಂಡಲ" ರೂಪವನ್ನು ಧರಿಸಿತು, ಇದರಲ್ಲಿಯೇ ಯಾವತ್ತು ಗ್ರಾಮಸಭೆಗಳ, ಹಾಗು ಪ್ರಾಂತ ಸಭೆಗಳ ಐಕ್ಯವಾಯಿತು. ಆಮಂತ್ರಣ ಮಂಡಲವೆಂದರೆ ಎಲ್ಲರೂ ಒತ್ತಟ್ಟಿಗೆ ಒಟ್ಟು ಗೂಡಿ ವಿಚಾರಮಾಡುವ ಸಭೆಯು. ಇದೇ ಎಲ್ಲಕ್ಕೂ ಹೆಚ್ಚಿನ ಸಭೆಯು. ಇದು ರಾಜನನ್ನು ಆರಿಸುವಂಥ, ಆತನಿಗೆ ಅಧಿಕಾರ ನಿಯಮಿಸಿಕೊಡುವಂಥ, ಮಹತ್ವದ ಕೆಲಸಗಳನ್ನು ಮಾಡುತ್ತಿತ್ತೆಂದು ವಿದ್ವಾಂಸರಾದ ಪಾಶ್ಚಿಮಾತ್ಯರು ಸಹ ಒಪ್ಪಿಕೊಂಡಿದ್ದಾರೆ. ಮಿ. ಗ್ರಿಫಿಥ್‌ಸಾಹೇಬರು ಋಗ್ವೇದ ಸಂಬಂಧವಾದ ಪುಸ್ತಕ ೭೬೦ನೇ ಪುಟದಲ್ಲಿ This Samiti appears to have been a general assembly of the people on some important occasion such as the election of a King ಸಮಿತಿಯು ಅರಸನನ್ನು ಆರಿಸುವ ಕೆಲಸವನ್ನು ಸಹ ಮಾಡುತ್ತಿತ್ತೆಂದು ಹೇಳಿದ್ದಾರೆ.

ರಾಜಶಬ್ದದ ಮೂಲಾರ್ಥವು ರಂಜನಮಾಡುವವನೆಂದು ಇರುತ್ತದೆ. ಅರ

ಸನು ಜನರಿಂದ ಆರಿಸಲ್ಪಟ್ಟ ಮೇಲೆ ಅವನನ್ನು ಅತ್ಯಂತವಾಗಿ ಸನ್ಮಾನಿಸುತ್ತಿದ್ದರು. ಈಬಗ್ಗೆ ವೇದಾಂತವಾಕ್ಯಗಳುಂಟು.

ರಾಜಾರಾಷ್ಟ್ರಾಣಾಂವೇಶಃ॥ಋಗ್ವೇದ ೫|೩|೨೭

ರಾಜಾ ಹಿ ಕಂ ಭುವನಾನಾಮಭಿಶ್ರೀಃ॥ತೈ ಸಂಹಿತೆ, ೧|೫|೧೧

"ರಾಜನು ರಾಷ್ಟ್ರದ ಸೌಂದರ್ಯವಾಗಿದ್ದಾನೆ" "ರಾಷ್ಟ್ರಕ್ಕೆ ರಾಜನಿದ್ದರೇ ಶೋಭೆಯು" ಇವುಗಳಿಂದ ರಾಜನಬಗ್ಗೆ ಜನರು ಎಷ್ಟು ಪ್ರೇಮವುಳ್ಳವರಿದ್ದರೆಂಬದು ಗೊತ್ತಾಗುತ್ತದೆ. ರಾಜನು ಪ್ರಕೃತಿರಂಜನೆಮಾಡುವವನೂ ಲೋಕಾರಾಧನಶೀಲನೂ ಜನಪದೈಕಹಿತತತ್ಪರನೂ ಇದ್ದಂತೆ, ಜನರು ಆತನ ಬಗ್ಗೆ ಅತ್ಯಂತ ಭಕ್ತಿಯುಳ್ಳವರಾಗುತ್ತಿದ್ದರು. ಉತ್ತಮೋತ್ತಮರಾಜರುಂಟಾಗುವಂತೆಯೇ ಸಮಾಜವ್ಯವಸ್ಥೆಯು ಆಗಿನ ಕಾಲದಲ್ಲಿತ್ತು. ಸುದೈವದಿಂದ ಪರಮ ಸದ್ಗುಣಶಾಲಿಗಳಾದ ಎಷ್ಟೋರಾಜರು ಆಳಿಹೋಗಿರಬಹುದು. ಅವರಮೇಲೆ ಪ್ರಜೆಗಳ ವಿಶ್ವಾಸವು ಅದ್ವಿತೀಯವಾಗಿರಬಹುದು. ಆದರಿಂದ ಅರಸನು ದೇವಾಂಶನೆಂದು ತಿಳಿದು "ನಾಽವಿಷ್ಣುಃ ಪೃಥ್ವೀಪತಿಃ" ಎಂದು ಸ್ಮೃತಿಕಾರರು ಹೇಳಿರಬಹುದು. ರಾಷ್ಟ್ರದ ಸಮಗ್ರಸತ್ತೆಯು ರಾಜನಲ್ಲಿ ಕೇಂದ್ರೀಭೂತವಾಗಿರುವದರಿಂದ ಆತನು ಸರ್ವಮಾನ್ಯನೂ ಸರ್ವಸಮರ್ಥನೂ ಆಗಿರಬಹುದು. ರಾಜನಲ್ಲಿ ಅಪ್ರತಿಮ ವಿಶ್ವಾಸವಿದ್ದದರಿಂದಲೂ ಜನರಲ್ಲಿ ಸುಖವೂ ಶಾಂತಿಯೂ ನೆಲೆಗೊಂಡದ್ದರಿಂದಲೂ ರಾಜಕಾರಸ್ಥಾನದ ತೊಡಕುಳ್ಳ ಪ್ರಶ್ನಗಳು ಹುಟ್ಟದೆ ಇದ್ದದರಿಂದಲೂ ಜನರಿಗೆ ರಾಜಕರಣವಿಚಾರವು ಅನವಶ್ಯಕವೆಂದು ತೋರಿರಬಹುದು. ಪಾರಮಾರ್ಥಿಕವಿಚಾರವು ಬೆಳೆದು ಐಹಿಕ ವಿಚಾರವು ಹಿಮ್ಮೆಟ್ಟಿರಬಹುದು. ಇವೆಲ್ಲಕಾರಣಗಳಿಂದ ಅರಸನಿಗೆ ಸಹಾಯಮಾಡುವ ಸಭೆಗಳ ಆವಶ್ಯಕತೆ ಇಲ್ಲದಂತಾಗಲು, ಭರತಖಂಡದಲ್ಲಿ ಏಕಛತ್ರಾಧಿಪತಿತ್ವವು, ಅಥವಾ ನಿರಂಕುಶ ಪ್ರಭುತ್ವವು ರೂಢವಾಗಿರಬಹುದು. ರಾಮಾಯಣದ ಕಾಲದಲ್ಲಿಯೇ ಏಕಛತ್ರಾಧಿಪತಿತ್ವವು ಪ್ರಾರಂಭವಾಗಿತ್ತೆಂದು ತೋರುತ್ತದೆ. ಮುಂದೆ ಅದು ಪೂರ್ಣ ವೃದ್ಧಿಹೊಂದಿತು. ಆದರೆ ಅಷ್ಟರಲ್ಲಿ ಸಮಾಜದ ಏಕೀಕರಣಮಾಡಲಿಕ್ಕೆ ಮತ್ತೆ ಬೇರೊಂದು ಶಕ್ತಿಯುಂಟಾಯಿತು. ಅದಾವದೆಂದರೆ ಧರ್ಮವು. ಧರ್ಮದಬಗ್ಗೆ ಹೇಳುವಮೊದಲು ಆರ್ಯರು ಸ್ವಜನಾಭಿಪ್ರಾಯಕ್ಕೆ ಎಷ್ಟು ಮಾನಕೊಡುತ್ತಿದ್ದರೆಂಬದನ್ನು ಮೊದಲು ಹೇಳುವೆವು.

(೪) ಆರ್ಯರ ಲೋಕಾರಾಧನವು.

ಆರ್ಯರು ಸಭೆಗಳನ್ನು ಮಾಡಿಕೊಂಡು ಅವುಗಳ ಮುಖಾಂತರವಾಗಿಯೇ

ತಮ್ಮ ಎಲ್ಲ ಧಾರ್ಮಿಕ ಸಾಮಾಜಿಕ ರಾಜಕೀಯ ಕಾರ್ಯಗಳನ್ನು ಜರಗಿಸುತ್ತಿದ್ದರೆಂದು, ಹಿಂದಿನ ಪ್ರಕರಣದಲ್ಲಿ ವಿವರಿಸಿದ್ದೇವೆ. ಇದರ ಮೇಲಿಂದಲೇ ಆರ್ಯರು ಪರಸ್ಪರರಲ್ಲಿ ಅತ್ಯಂತ ಪ್ರೇಮವುಳ್ಳವರೂ ಸತ್ಯವಾದ ಮತವನ್ನು ಅಂಗೀಕರಿಸಲಿಕ್ಕೆ ಆತುರವುಳ್ಳವರೂ ಇದ್ದರೆಂದು ಫಲಿತವಾಗುತ್ತದೆ. ಬಹುಕಾಲದಿಂದ, ಅಂದರೆ ಪುರಾಣಕಾಲದ ಕೊನೆಯಭಾಗದಿಂದ ಪೃಥ್ವೀರಾಜಚಹ್ವಾಣನ ಕಾಲದವರೆಗೆ ಹಿಂದುಸ್ತಾನದಲ್ಲಿ ರಾಜಸತ್ತಾತ್ಮಕ ರಾಜ್ಯಪದ್ಧತಿಯೇ ನೆಲೆಗೊಂಡದ್ದರಿಂದ ಹಿಂದುಸ್ತಾನದ ಜನರಿಗೆ ಲೋಕಾರಾಧನವು(ಲೋಕಮತದ ಬಗ್ಗೆ ಪೂಜ್ಯಬುದ್ಧಿಯು) ಗೊತ್ತೇ ಇಲ್ಲೆಂದು ಬಹುಜನರು ತಿಳಿಯುತ್ತಾರೆ. ಪಾಶ್ಚಿಮಾತ್ಯ ಗ್ರಂಥಕಾರರು ಸಹ ಇದೇ ಬಗೆಯ ಅಭಿಪ್ರಾಯಗಳನ್ನು ಆಗಾಗ್ಗೆ ಕೊಡುತ್ತಿದ್ದಾರೆ. ಈ ಬಗೆಯ ಅಭಿಪ್ರಾಯಗಳು ಸಾಮಾನ್ಯ ಜನರಲ್ಲಿ ಸಹ ರೂಢವಾಗಿರುತ್ತವೆ. ಇದರಿಂದ ಪಾಶ್ಚಿಮಾತ್ಯ ದೇಶಗಳ ರಾಜ್ಯಪದ್ಧತಿಯು ಅಪೂರ್ವವಾದದ್ದೆಂದು ತಿಳಿಯಲ್ಪಟ್ಟಿರುತ್ತದೆ. ಈಗಿನ ಜನರು ಆರ್ಯರ ಲೋಕಾರಾಧನದಬಗ್ಗೆ ಅತ್ಯಂತ ಅಜ್ಞಾನಿಗಳಾಗಿದ್ದಾರೆ. ಹಿಂದುಸ್ತಾನದ ಪ್ರಾಚೀನಗ್ರಂಥಗಳ ಪರಿಶೀಲನವಿಲ್ಲದ್ದರಿಂದಲೇ ಈ ಬಗೆಯ ತಪ್ಪುತಿಳುವಳಿಕೆಯು ಉಂಟಾಗಿದೆ.ಅದನ್ನು ಹೋಗಲಾಡಿಸುವದಕ್ಕೋಸ್ಕರ ಪ್ರಾಚೀನ ವಾಙ್ಮಯವನ್ನು ಅಭ್ಯಾಸಿಸುವದು ಅಗತ್ಯವಾಗಿದೆ.

ಭಾಷೆಯಲ್ಲಾಗಲಿ, ಜನರ ಆಚಾರ-ವಿಚಾರಗಳಲ್ಲಿಯಾಗಲಿ, ನಡೆನುಡಿಗಳಲ್ಲಿಯಾಗಲಿ, ಒಂದೊಂದುಕಾಲದಲ್ಲಿ ಒಂದೊಂದು ವಿಧದ ವಿಲಕ್ಷಣಪದ್ಧತಿಯಿರುತ್ತದೆ. ಮರಾಠರು ಒಬ್ಬರಿಗೊಬ್ಬರು ಭೆಟ್ಟಿಯಾದಾಗ ಅನ್ನುತ್ತಿದ್ದ ಶಬ್ದದ ಬದಲು, 'ರಾಮ ರಾಮ' ಅನ್ನುವದನ್ನು ಶ್ರೀಸಮರ್ಥ-ರಾಮದಾಸ ಸ್ವಾಮಿಗಳು ಪ್ರಚಾರದಲ್ಲಿ ತಂದರು. ಮೊದಲಿದ್ದ ಶಬ್ದವು ಮರಾಠರಲ್ಲಿ ಲುಪ್ತವಾಯಿತು. ಅದರಂತೆ ಮುಸಲ್ಮಾನರು ಪರಸ್ಪರರ ಅಭಿವಂದನೆ ಮಾಡುವಾಗ 'ಸಲಾಂ' (ಶಾಂತಿ) ಎಂಬರ್ಥದ ಶಬ್ದವನ್ನು ಉಪಯೋಗಿಸುತ್ತಾರೆ. ಒಳ್ಳೇಸುದಿನದಲ್ಲಿ ಸಹ ಇಂಗ್ಲಿಷ ಜನರು ಪರಸ್ಪರರಲ್ಲಿ Good Morning ಎಂದು ಅನ್ನುವರು. ಇಂಗ್ಲಿಷ ಪತ್ರವ್ಯವಹಾರದಲ್ಲಿ ವರಿಷ್ಠ ಅಮಲದಾರರು ಸಹ ಕನಿಷ್ಠ ಅಮಲದಾರರಿಗೆ Your most obedient servant ಎಂದು ಬರೆಯುವರೂಢಿಯುಂಟು. ದೇಶಭಾಷೆಯ ಪತ್ರವ್ಯವಹಾರದಲ್ಲಿ ರಾಜರಿಂದ ಮರ್ಯಾದೆ ಹೊಂದದಿದ್ದ, ರಾಜನಷ್ಟು ಸಂಪತ್ತಿಲ್ಲದ ಸಭ್ಯಮನುಷ್ಯನಿಗೆ "ರಾಜಮಾನ್ಯ, ರಾಜಶ್ರೀ" ಎಂದು ಒಕ್ಕಣಿಕೆಯನ್ನು ಬರೆಯುವದುಂಟು, ಪರೀಕ್ಷೆಯನ್ನು ಪಾಸಾಗಿದ್ದ

ಉಮೇದವಾರನು ಯಾವದೊಂದು ಖಾತೆಯ ಮುಖ್ಯಾಧಿಕಾರಿಗೆ ಅರ್ಜಿಯನ್ನು ಬರೆಯುವದರಲ್ಲಿ ಇಂಗ್ಲೀಷ ಶಿಷ್ಟಾಚಾರವು ಚನ್ನಾಗಿ ಕಂಡುಬರುತ್ತದೆ. ಆ ಉ-ಮೇದವಾರನು ಸರಕಾರೀ ಕೆಲಸಮಾಡಬೇಕೆಂದು ಬೇಡಿಕೊಂಡಾಗ ಅಂಥಯಾವ ಸ್ಥಳವೂ ತೆರವಿಲ್ಲದಿದ್ದರೆ "ನಿಮಗೆ ಕೊಡತಕ್ಕ ಸ್ಥಳವು ಒಂದು ಸಹ ತೆರವಿಲ್ಲೆಂದು ತಿಳಿಸಲು ನನಗೆ ಬಲು ದುಃಖವೆನಿಸುತ್ತದೆ!" I am very sorry ಎಂದು ಉತ್ತರ ಕೊಡುವದುಂಟು. ಇವೆಲ್ಲ ಆ ಆ ಕಾಲದಲ್ಲಿ ಆ ಆ ಭಾಷೆಯನ್ನಾಡುವ ಜನರ ವಿಶಿಷ್ಟತರದ ಶಿಷ್ಟಾಚಾರಗಳೆಂದು ವಾಚಕರಿಗೆ ಗೊತ್ತಿರುವದು. ಈ ಶಿಷ್ಟಾಚಾರಗಳು ಕಾಲಕಾಲಕ್ಕೆ ಬದಲಾಗುತ್ತಿರುವವು. ಅತಿಪ್ರಾಚೀನ ಕಾಲದಲ್ಲಿಯ ಆರ್ಯ ಶಿಷ್ಟಾಚಾರಗಳನ್ನು ಸಮಗ್ರವಾಗಿ ಅರಿತುಕೊಳ್ಳಲಿಕ್ಕೆ ಮಾರ್ಗವಿಲ್ಲ. ಆದರೆ ಅವರು ತಮ್ಮ ವೈಭವ, ಧಾರ್ಮಿಕವೃತ್ತಿ, ಸಾಮಾಜಿಕಸ್ಥಿತಿ, ಸ್ವಜನಾಭಿಮಾನ, ಬಂಧುಪ್ರೀತಿ, ರಾಷ್ಟ್ರಭಕ್ತಿ ಮುಂತಾದ ಬೇರೆ ಬೇರೆ ವಿಷಯಗಳನ್ನು ದೇವತಾಪ್ರಾರ್ಥನಾರೂಪವಾಗಿ ವರ್ಣಿಸಿರುವಂತೆ ವೇದಗಳಿಂದ ಕಂಡುಬರುತ್ತದೆ. ವ್ಯಕ್ತಿಯಲ್ಲಾಗಲಿ, ಸಮಾಜದಲ್ಲಾಗಲಿ, ಸೃಷ್ಟಿಯಲ್ಲಾಗಲಿ, ಒದಗುವ ಯಾವತ್ತುಕಾರ್ಯಗಳು ತಮ್ಮ ಅತರ್ಕ್ಯ ಸಾಮರ್ಥ್ಯವುಳ್ಳ ದೇವತೆಗಳ ಕಾರ್ಯಗಳೆಂದು ಆರ್ಯರು ಬಗೆಯುತ್ತಿದ್ದರು. ಏಳ್ಗೆಹೊಂದುವ ಮಾರ್ಗವನ್ನು ಹಿಡಿದ ಆರ್ಯರ ಸಮಾಜದ ಶಿಷ್ಟಾಚಾರವು ಅತ್ಯಂತ ನಿರ್ಮಲವಾದದ್ದೂ ಕೋಮಲವಾದದ್ದೂ ತಮ್ಮ ದೇವತೆಗಳ ಸಾಮರ್ಥ್ಯದ ಬಗ್ಗೆ ಪೂರ್ಣವಿಶ್ವಾಸವುಳ್ಳದ್ದೂ ಪರಮಭಕ್ತಿಯುಳ್ಳದ್ದೂ ಇತ್ತು. ಅಂತೇ ಪ್ರಾರ್ಥನಾಮಯವಾಗಿರುವ ವೇದವಾಕ್ಯಗಳಲ್ಲಿ ಆರ್ಯರಲೋಕಾರಾಧನ ತತ್ಪರತೆಯು ಸ್ಪಷ್ಟವಾಗಿತೋರುತ್ತದೆ. ಪಾಶ್ಚಿಮಾತ್ಯ ಸಮಾಜವು ಇನ್ನೂ ತೊಟ್ಟಿಲವನ್ನು ಸಹ ಕಾಣದೆ ಇದ್ದ ಕಾಲಕ್ಕಿಂತ ಬಹು ಪ್ರಾಚೀನಕಾಲದಲ್ಲಿ ಭಾರತೀಯ ಆರ್ಯರು ಲೋಕಾರಾಧನದ ತತ್ವಗಳನ್ನು ಅರಿತು, ಅವುಗಳಲ್ಲಿ ತುಂಬಾಪ್ರವೀಣರಾಗಿದ್ದರು. ಅವರ ವಂಶಜರಾದ ಈಗಿನ ಜನರಲ್ಲಿ ಪರಮತ ಸಹಿಷ್ಣುತೆಯು, ಉಳಿದ ಜನಾಂಗಗಳಿಗಿಂತ ಬಹಳ ಹೆಚ್ಚಿರುವ ಕಾರಣವಾದರೂ ಪೂರ್ವ ಸಂಸ್ಕೃತಿಯ ಫಲವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಪ್ರಾರಂಭದಲ್ಲಿ ಋಗ್ವೇದದೊಳಗೆ ಲೋಕಾರಾಧನದ ಬಗ್ಗೆ ಏನು ಹೇಳಿರುವದೆಂಬದನ್ನು ನೋಡೋಣ; ಋಗ್ವೇದಕಾಲದಲ್ಲಿ ಆರ್ಯರು ಸ್ವಾರ್ಥಸಾಧಕರೂ ವ್ಯಕ್ತಿಹಿತವನ್ನು ಮಾತ್ರ ಮಾಡಿಕೊಳ್ಳುವವರೂ ಇದ್ದಿಲ್ಲವೆಂದು ಗೊತ್ತಾಗುವದು. ಲೋಕಸಂಗ್ರಹ ಮಾಡುವದೇ ಅವರ ಶೀಲವಾಗಿತ್ತು; ಹಾಗು ಅವರ ಮನಃಪ್ರ

ವೃತ್ತಿಯು ಸಮಾಜದ ಕಲ್ಯಾಣ, ಜ್ಞಾನದ ಬೆಳವಣಿಗೆ, ಇಡೀಸಮಾಜದ ಐಶ್ವರ್ಯಾಭಿವೃದ್ಧಿ, ಸತ್ತ್ವೆಯನ್ನು ಬೆಳೆಸೋಣ, ಮುಂತಾದ ಮಹತ್ವದ ಸಂಗತಿಗಳ ಕಡೆಗೆ ಹೊರಳಿತ್ತು. ತನು-ಮನೋಧನಗಳನ್ನು ವೆಚ್ಚಮಾಡಿ ಲೋಕಾರಾಧನದ ಬೀಜಾರೋಪಣಗೊಳಿಸಬೇಕು. ಅದನ್ನು ಎಚ್ಚರದಿಂದ ಬೆಳಿಸಬೇಕು, ಎಂಬ೨ ಕಾರ್ಯಗಳನ್ನು ಮಾಡಲಿಕ್ಕೆ ಅವರು ಹಗಲಿರುಳು ಹೆಣಗುತ್ತಿದ್ದರು. ಸ್ವಸಂರಕ್ಷಣಾರ್ಥವಾಗಿ ರುದ್ರದೇವತೆಯನ್ನು ಹೀಗೆಪ್ರಾರ್ಥಿಸಿದ್ದಾರೆ:—

ಮಾ ನೋ ಮಹಾಂತಮುತ ಮಾನೋ ಅರ್ಭಕಂ ಮಾನ ಉಕ್ಷಂತಮುತ
ಮಾನ ಉಕ್ಷಿತಮ್।
ಮಾ ನೋ ವಧೀಃ ಪಿತರಂ ಮೋತ ಮಾತರಂ ಮಾ ನಃ ಪ್ರಿಯಾ
ಸ್ತನ್ವೋ ರುದ್ರರೀರಿಷಃ॥೭॥
ಮಾನಸ್ತೋಕೆ ತನಯೇ ಮಾ ನ ಆಯುಷಿ ಮಾ ನೋ ಗೋಷು ಮಾ
ನೋ ಅಶ್ವೇಷು ರೀರಿಷಃ। ವೀರಾನ್ಮಾನೋ ರುದ್ರಭಾಮಿತೋ ವಧೀ
ರ್ಹವಿಷ್ಮಂತಃ ಸದಮಿತ್ವಾ ಹವಾಮಹೇ॥ ಋಗ್ವೇದ ಮಂ೧-ಸೂಂ೧೧೪

ಎಲೈ ರುದ್ರನೇ, ನಮ್ಮೊಳಗಿನ ಹಿರಿಯರು, ಕಿರಿಯರು, ಬೆಳೆಯುವವರು, ಬೆಳೆದವರು, ತಂದೆ ತಾಯಿಗಳು, ಪ್ರಿಯಶರೀರಗಳು ಇವೆಲ್ಲವುಗಳಿಗೆ ನೀನು ಪೀಡೆಕೊಡಬೇಡ, ಇದರಂತೆ "ನಮ್ಮ ಮಕ್ಕಳು, ಮೊಮ್ಮಕ್ಕಳು, ಆಳುಹೋಳುಗಳು, ಆಕಳುಗಳು. ಕುದುರೆಗಳು, ವೀರರು ಇವರೆಲ್ಲರನ್ನು ಸಹ ನೀನು ಕಾಡಬೇಡ, ಯಾಕೆಂದರೆ ಹವಿಸ್ಸು ಕೊಡುತ್ತ ನಿನ್ನನ್ನು ಕೊಂಡಾಡುತ್ತಲಿರುವೆವು."

ಈ ಪ್ರಕಾರ ಸ್ವಜನರನ್ನೂ ಸ್ವಸಂಪತ್ತಿಯನ್ನೂ ರಕ್ಷಣೆಮಾಡಲಿಕ್ಕೆದೇವರನ್ನು ಪ್ರಾರ್ಥಿಸಿದ್ದನ್ನು ನೋಡಲಾಗಿ ಆರ್ಯರು ವ್ಯಕ್ತಿಹಿತಕ್ಕಿಂತಲೂ ಸಮಾಜದ ಸುಸ್ಥಿತಿಯೂ ಸಂಪದಭಿವೃದ್ಧಿಯೂ ಶ್ರೇಷ್ಟವೆಂದು ಅರಿತಿದ್ದರೆಂದು ಸ್ಪಷ್ಟವಾಗುತ್ತದೆ. ಮೊಗಲ ಬಾದಶಹನ ಕಡೆಗೆ ಬಂದ ಇಂಗ್ಲಿಷವಕೀಲನು ಸ್ವಂತದ ಬಗ್ಗೆ ಜಾಹಾಗೀರನ್ನು ಬೇಡದೆ, ಇಡಿ ಇಂಗ್ಲಂಡಕ್ಕೋಸ್ಕರ ವ್ಯಾಪಾರದ ಹಕ್ಕುಗಳನ್ನು ಯಾವ ಸಾಮಾಜಿಕ ಹಿತಬುದ್ಧಿಯಿಂದ ಬೇಡಿಕೊಂಡನೋ, ಅದೇ ಸಾಮಾಜಿಕ ಹಿತಬುದ್ಧಿಯಿಂದಲೇ ಆರ್ಯರು ರಾಜರ ರಾಜನಾದ ದೇವರಿಗೆ ಬೇಡಿಕೊಂಡಿರುವರು. ಇದರಿಂದ ಆರ್ಯರ ಲೋಕಾರಾಧನ ಬುದ್ಧಿಯು ಎಷ್ಟು ಜಾಗ್ರತವಿತ್ತೆಂದು ಚನ್ನಾಗಿ ಹೊಳೆಯುತ್ತದೆ. ಹೀಗೆ ಪ್ರತಿಯೊಬ್ಬ ಆರ್ಯನು ಸಮಾಜಹಿತದ ಬಗ್ಗೆ ಕಣ್ಣಲ್ಲಿ ಎಣ್ಣೆಹಾಕಿಕೊಂಡು ಎಚ್ಚರದಿಂದ ನೋಡುತ್ತ, ಒಳ್ಳೇ ಒಕ್ಕಟ್ಟಿನಿಂದ ನಡೆದಬಳಿಕ

ಪರಕೀಯ ಜನರಿಂದ ಲೇಶಮಾತ್ರವೂ ಉಪದ್ರವ ಮಾಡಗೊಡಬೇಡೆಂದು ದೇವರಿಗೆ ಬೇಡಿಕೊಂಡಿದ್ದಾನೆ. ಸ್ವಜನರ ಏಳ್ಗೆಯೂ ಪರಕೀಯರಿಂದ ಆಗುತ್ತಿದ್ದ ಪೀಡೆಯ ನಿವಾರಣೆಯೂ ಆದಬಳಿಕ ಎಲ್ಲಕಡೆಯಲ್ಲಿ ಸ್ವಸ್ಥತೆಯುಂಟಾಯಿತು. ಬಳಿಕ ಅವರು ಯಥೇಷ್ಟ ಐಶ್ವರ್ಯವನ್ನು ಕೊಡೆಂದು ಪ್ರಾರ್ಥಿಸಿದ್ದಾರೆ. ಆಮೇಲೆ ದೇವತೆಗಳಿಗೆ ಒಡೆಯನಾದ ಇಂದ್ರನಿಗೆ "ನಮ್ಮ ಸತ್ತೆಯು ಎಲ್ಲಕಡೆಯಲ್ಲಿ ಹಬ್ಬುವಂತೆ ಮಾಡು" ಎಂದು ಬೇಡಿಕೊಂಡಿದ್ದಾರೆ:—

೩ ಮಾ ನೋ ಮರ್ತಾ ಅಭಿದ್ರುಹಂತ ನೂನಮಿಂದ್ರಗಿರ್ವಣಃ।
ಋಗ್ವೇದ ೧-೫-೧೦
(ನಮಗೆ ಯಾವ ಮನುಷ್ಯನಿಂದಲೂ ಉಪ್ರವವಾಗದಿರಲಿ)

೪ ಅಸ್ಮೇ ಧೇಹಿ ಶ್ರವೋ ಬೃಹದ್ಯುಮ್ನಂ ಸಹಸ್ರಸಾತಮಮ್। ಋಂ ೧-೯-೮
(ನಮಗೆ ಸುಕೀರ್ತಿ, ದೊಡ್ಡ ಅಧಿಕಾರ, ಅನಂತ ಸಾಮರ್ಥ್ಯ-ಸತ್ತೆಗಳನ್ನು ಕೊಡು)

೫ ಅಸ್ಮೇ ಸೋಮ ಶ್ರಿಯಮಧಿ ನಿ ಧೇಹಿ ಶತಸ್ಯ ನೃಣಾಮ್। ಋ ೧-೪೩-೭
(ಎಲೈ ಸೋಮನೇ ನಮಗೆ ಬಹುಜನ ಸಮಾಜದ ಮೇಲಿನ ಒಡೆತನವನ್ನು ಕೊಡು)

೬ ಅಕ್ಷಿತೋತಿಃ ಸನೇದಿಮ್ ವಾಜಮಿಂದ್ರಃ ಸಹಸ್ರಿಣಮ್। ಯಸ್ಮಿನ್
ವಿಶ್ವಾನಿ ಪೌಂಸ್ಯಾ। ಋ. ೧-೫-೯
(ಸಕಲ ಪರಾಕ್ರಮ ಯುಕ್ತ ವೈಭವಕ್ಕಿಂತ ಸಾವಿರಾರುಪಾಲು ಹೆಚ್ಚು ಸಾಮರ್ಥ್ಯವನ್ನು, ಅಖಂಡೈಶ್ವರ್ಯ ಕೊಡುವ ಇಂದ್ರನು ನಮಗೆ ದಯಪಾಲಿಸಲಿ.)

ಹತ್ತುಜನ ಬಂಧು ಬಳಗದವರೂ ಗೆಳೆಯರೂ ಪ್ರೀತಿಯಿಂದ ಉಣ್ಣುವದೇ ಮೇಲಾದ ಹಬ್ಬವೆಂದು ಈಗಲೂ ಹಿಂದೂಜನರು ಅನ್ನುತ್ತಾರೆ. ಹಬ್ಬಗಳು ಇಂಥಿಂಥವೆಂದು ಗೊತ್ತುಮಾಡಲ್ಪಟ್ಟವೆ. ದಸರೆ, ಸಂಕ್ರಮಣ ಮುಂತಾದ ಸಾಮಾಜಿಕ ಹಬ್ಬಗಳು ವೇದಕಾಲದಿಂದ ರೂಢವಾಗಿರುವವೆಂದು ಕೆಲವರು ಶೋಧಮಾಡಿದ್ದಾರೆ. ಈಗ ಎಲ್ಲ ಹಬ್ಬಗಳು ಅಷ್ಟೊಂದು ವೈಭವದಿಂದ ಜರಗಿಸಲ್ಪಡದಿದ್ದರೂ ತಾಂತ್ರಿಕರೀತಿಯಿಂದಾದರೂ ಕಷ್ಟದಿಂದ ಮಾಡಲ್ಪಡುತ್ತವೆ. ಅದಗಲ್ಲಿ ಮಾಡುತ್ತಿರುವ ಕೆಲವು ತಂತ್ರಗಳು ಅತಿ ಪ್ರಾಚೀನ ಆರ್ಯಸಿತಿಯ ದ್ಯೋತಕವಾಗಿರುವವು. ದೀವಳಿಗೆಯಲ್ಲಿ ನರಕಚತುರ್ದಶಿಯ ದಿವಸ ಉಷಃಕಾಲದಲ್ಲಿ ಎಣ್ಣೆಹಚ್ಚಿಸಿಕೊಂಡು ಆರತಿ ಮಾಡಿಸಿಕೊಳ್ಳುವ ಕಾರ್ಯವು ಸಹ, ಆರ್ಯರು ಉಷಸ್ಸೆಂಬ ದೇವತೆಯನ್ನು

ಕಂಡುಕೊಂಡದ್ದರ ಸ್ಮಾರಕವಿರುವದೆಂತಲೂ ದೀರ್ಘಕಾಲಿಕವಾದ ರಾತ್ರಿಯನ್ನು ಶ್ರಮದಿಂದ ನೀಗಿ ಉಷಃಕಾಲವು ಪ್ರಾಪ್ತವಾಗಲು, ಸಂತೋಷದಿಂದ ದೇವತೆಯನ್ನು ಕುರಿತು ಹಾಡಿದರೆಂತಲೂ ತಿಳಿಯುತ್ತದೆ. ಇಂಥ ಉತ್ಸವಗಳು ಈಗಿನ ಕಾಲಕ್ಕಿಂತ ಪೌರಾಣಿಕಕಾಲದಲ್ಲಿ ವಿಶೇಷವಾಗಿ ಆಗುತ್ತಿದ್ದವೆಂದು ಗ್ರಂಥಗಳಿಂದ ಗೊತ್ತಾಗುತ್ತದೆ. ಕಾಲಿದಾಸನು "ಉತ್ಸವಪ್ರಿಯಾಃ ಖಲುಮನುಷ್ಯಾಃ" ಎಂದು ಹೇಳಿದ್ದಾನೆ. ಆತನ ಕಾಲದಲ್ಲಿ ದೇಶದಲ್ಲಿ ಐಶ್ವರ್ಯವು ವಿಶೇಷವಾಗಿತ್ತು. ಜನಸಂಖ್ಯೆಯು ಕಡಿಮೆಯಿತ್ತು. ಜೀವನ ಕಲಹ (fighting for existance)ವು ಇದ್ದಿಲ್ಲ. ಆದ್ದರಿಂದ ವಸಂತೋತ್ಸವ, ಚಂದ್ರಿಕೋತ್ಸವ ಮುಂತಾದ ಎಲ್ಲ ಆರ್ಯ-ಉತ್ಸವಗಳು ಯಥಾಸಾಂಗವಾಗಿ ನೆರವೇರಿಸಲ್ಪಡುತ್ತಿದ್ದವು. ಆ ಎಲ್ಲ ಉತ್ಸವಗಳಲ್ಲಿ ಕೆಲವುಗಳಾದರೂ ಪ್ರಾಚೀನ ಆರ್ಯರ ಪರಂಪರೆಯನ್ನು ಸೂಚಿಸುವಂಥವುಗಳಿರಲಿಕ್ಕೆ ಬೇಕು. ವಿದ್ವಾಂಸರು ಪೌರಾಣಿಕಕಾಲದ ಗ್ರಂಥಗಳನ್ನು ಓದಿ ಅವುಗಳಲ್ಲಿ ಹೇಳಿರುವ ಉತ್ಸವಗಳು ವೈದಿಕಕಾಲದಲ್ಲಿ ವರ್ತಿಸಿದ ಸಂಗತಿಗಳ ಲಾಕ್ಷಣಿಕಗಳಾಗಲಿ, ರೂಪಕಗಳಾಗಲಿ ಇರುವವೆಂದು ಸಿದ್ಧಪಡಿಸಿದರೆ, ಅದೊಂದು ಮನೋರಂಜಕ ವಿಷಯವಾಗುವದು, ಇಷ್ಟೇ ಅಲ್ಲ; ಈಗಿನ ಹಿಂದೂ ಜನರ ಪ್ರಾಚೀನ ಪರಂಪರೆಯನ್ನು ಗೊತ್ತು ಹಚ್ಚಿ ಕೊಟ್ಟಂತಾಗಿ ಜನರಲ್ಲಿ ಒಂದು ಬಗೆಯ ಸದಭಿರುಚಿಯನ್ನೂ ಆತ್ಮವಿಶ್ವಾಸವನ್ನೂ ಮನೆತನದ ಪದ್ಧತಿಯ ಜ್ಞಾನವನ್ನೂ ಉಂಟುಮಾಡಿದ ಶ್ರೇಯಸ್ಸಿಗೆ ಪಾತ್ರರಾಗುವರು.

ಇರಲಿ, ಋಗ್ವೇದ ಕಾಲದ ಆರ್ಯರು ಒಟ್ಟುಗೂಡಲಿಕ್ಕೆ ಮಾಡುತ್ತಿದ್ದ ಕಾರ್ಯಗಳೆಂದರೆ ಯಜ್ಞಗಳು. ಯಜ್ಞಯಾಗಾದಿ ಕ್ರಿಯೆಗಳ ಮೇಲೆ ಅವರ ಶ್ರದ್ಧೆ ಬಹಳ. ಅದರಿಂದಲೇ ಅವರು ಕರ್ಮ ಮಾರ್ಗದ ಭೋಕ್ತಾರರಾಗಿದ್ದರು. ಯಜನ-ಯಾಜನ ಮಾಡುವವರಿಗೆ ಎಲ್ಲ ಆರ್ಯರು ನೆರವಾಗುತ್ತಿದ್ದರು. ಯಜ್ಞಕ್ರಿಯೆಗಳ ಸಂರಕ್ಷಣೆ ಮಾಡುವವರನ್ನು ಪ್ರೇಮದಿಂದ ನೋಡುತ್ತಿದ್ದರು. ಅದರಂತೆ ಸ್ವಜನಾಭಿಪ್ರಾಯವುಂಟಾಗಲಿಕ್ಕೆ ಅಳತೆ ಮೀರಿ ಯತ್ನ ಮಾಡುತ್ತಿದ್ದರು. ಯಾಜ್ಞಿಕರ ಕಲ್ಯಾಣಕ್ಕಾಗಿ ಹೆಣಗುತ್ತ ಅವರನ್ನು ತಮ್ಮ ಮಂಡಲದಲ್ಲಿ ಪ್ರಮುಖರನ್ನು ಮಾಡುತ್ತಿದ್ದರು. ಅವರನ್ನು ತಮ್ಮೊಳಗೆ ಸೇರಿಸಿಕೊಂಡು ಯಜ್ಞಮಾಡುವವರದೆಂಬದೊಂದು ದೊಡ್ಡ ರಾಷ್ಟ್ರವನ್ನೇ ಉಂಟುಮಾಡಿದರು. ಯಜ್ಞವೇ ಆರ್ಯರ ಮೇಲಾದ ಉತ್ಸವವಾಗಿತ್ತು, ಒಕ್ಕಟ್ಟಿನ ಸಾಧನವಾಗಿತ್ತು, ಲೋಕಾರಾಧನದ ಗುರುಮಂತ್ರವಾಗಿತ್ತು, [illegible] ರ ಜನರಿಂದ ವಿಂಗಡಿಸಿ ತೋರುವಂಥ ವಿಶಿಷ್ಟ

ಲಕ್ಷಣವಾಗಿತ್ತು. ಯಜ್ಞಮಾಡುವ ದೇಶವೆಂದರೆ ಆರ್ಯಾವರ್ತವು; ಯಜ್ಞ ಮಾಡುವ ಜನರೆಂದರೆ ಹಿಂದೂ ಆರ್ಯರು. ಹೀಗೆ ಜಗತ್ತಿನಲ್ಲೆಲ್ಲ ಈ ವರೆಗೂ ವಿಂಗಡವಾಗಿ ಒಡೆದು ತೋರುವಂತೆ ಆಗಿನ ಆರ್ಯ ಜನರು ಇದ್ದರು. ಯಜ್ಞ ಮಾಡದಿರುವವರನ್ನು ಅವರು ತಮ್ಮೊಳಗೆ ತಕ್ಕೊಳ್ಳಲಿಲ್ಲ. ಅವ್ರತರು, ಕರ್ಮ ಹೀನರು, ದಸ್ಯುಗಳು ಎಂದು ಯಜ್ಞಮಾಡದಿರುವವರಿಗೆ ಹೆಸರಿಟ್ಟು ಅವರನ್ನು ಬೇರೆಯಾಗಿಟ್ಟರು. ಯಜ್ಞಮಾಡದವರು ಅಮಂಗಲರೆಂಬ ಬಗ್ಗೆ ಜನರಲ್ಲಿ ಬುದ್ಧಿ ಯನ್ನುಂಟುಮಾಡಿದರು.

ವಿಜಾನೀಹ್ಯಾರ್ಯಾನ್ಯೇ ಚ ದಸ್ಯವೋ
ಬರ್ಹಿಷ್ಮತೇ ರನ್ಧಯಾ ಶಾಸದವ್ರತಾನ್। ಋ ೧-೫೮-೮

"ಎಲೈ ಇಂದ್ರನೇ! ಆರ್ಯರು ಯಾರು? ದಸ್ಯುಗಳು ಯಾರು? ಎಂಬದನ್ನು ನೀನು ಚೆನ್ನಾಗಿ ತಿಳಿದುಕೋ. ಮತ್ತು ಯಜ್ಞಮಾಡದ ಅವ್ರತರನ್ನು ಶಾಸನ ಮಾಡಿ ಯಜ್ಞ ಮಾಡುವವರ ವಶದಲ್ಲಿಡು." ಹೀಗೆ ಬೇಡಿಕೊಂಡಿದ್ದಾರೆ. ಹೀಗೆ ಹಲವು ವಿಧದಿಂದ ಲೋಕಮತವನ್ನು ಜಾಗ್ರತಗೊಳಿಸುವದರಲ್ಲಿಯೂ ಲೋಕಾ ರಾಧನಮಾಡುವದರಲ್ಲಿಯೂ ಆರ್ಯರು ಕುಶಲರಾಗಿದ್ದರು. ಅವರ ವಿಲಕ್ಷಣ ವಾದ ಹಂಚಿಕೆಗಳಿಗೆ ಯಶಸ್ಸು ಬರಹತ್ತಿತು. ಹೀಗೆ ಯಜ್ಞಗಳ ಪ್ರಾಬಲ್ಯವಾ ದಂತೆ, ಯಜ್ಞಮಾಡಿಸುವ ಋಷಿಗಳ ವರ್ಚಸ್ಸು ಬಹಳ ಹೆಚ್ಚಾಯಿತು. ಋಷಿ ಗಳು ಸರ್ವದಾ ಆರ್ಯಸಮಾಜದ ಮುಂದಾಳುಗಳಾಗಿ, ಯಾವಾಗಲೂ ತಮ್ಮ ಉಚ್ಚ ಸ್ಥಿತಿಯನ್ನು ಕಾಯ್ದುಕೊಳ್ಳುವದರಲ್ಲಿ ಜಾಗರೂಕರಾಗಿ, ಆರ್ಯ ರಾಷ್ಟ್ರದ ಐಶ್ವರ್ಯಾಭಿವೃದ್ಧಿಗಾಗಿ ತಮ್ಮ ಸಾಮರ್ಥ್ಯವನ್ನು ಅಪ್ರತಿಹತವಾಗಿ ವೆಚ್ಚಮಾ ಡುತ್ತ ನಡೆದರು. ಆದರಿಂದ ಲೋಕಾರಾಧನವು ಚೆನ್ನಾಗಿ ಜರಗಿತು. ಅದೇ ಆರ್ಯ ಜನಾಂಗದ ಏಳ್ಗೆಗೆ ಆಧಾರಸ್ತಂಭವಾಯಿತು. ಇದರಿಂದಲೇ ಆರ್ಯರಾಷ್ಟ್ರವು ಏರ್ಪಡೆಹೊಂದಿತು. ಈ ವಿವರದಿಂದ ಋಗ್ವೇದದ ಪೂರ್ವಕಾಲದಲ್ಲಿಯೇ ಸಮಾಜವಾಗಹತ್ತಿ, ಋಗ್ವೇದ ಕಾಲದಲ್ಲಿ ಲೋಕಾರಾಧನದ ಕಾರ್ಯವು ಪೂರ್ಣವಾಯಿತೆಂದು ವಾಚಕರಿಗೆ ತಿಳಿದಿರಬಹುದು. ಋಗ್ವೇದದ ಪೂರ್ವಕಾಲ ವೆಂದರೆ, ಭೂಸ್ತರ-ಶಾಸ್ತ್ರ-ಪರಿಗಣನಾನುರೂಪವಾದ ತೃತೀಯ-ಯುಗವು. ಈ ತೃತೀಯಯುಗವುಂಟಾಗಿ ಕನಿಷ್ಠಪಕ್ಷಕ್ಕೆ ೫೦-೬೦ ಸಾವಿರವರ್ಷಗಳಾಗಿರು ವವೆಂದು ಶೋಧಕರು ಗೊತ್ತುಹಚ್ಚಿದ್ದಾರೆ.

ಇನ್ನು ಋಗ್ವೇದದಿಂದಿತ್ತಕಡೆಯಕಾಲದಲ್ಲಿ ಪ್ರವೇಶಿಸಿನೋಡುವಾ; ಆಗಸಹ ಲೋಕಮತದ ಪ್ರಾಬಲ್ಯವು ವಿಶೇಷವಾಗಿದ್ದು, ಲೋಕಾರಾಧನದ ಸಂಸ್ಕಾರವು ಅತ್ಯುಚ್ಚ ಸ್ಥಿತಿಯನ್ನೈದಿತ್ತೆಂದು ತೋರುವದು. ಯಾಕಂದರೆ ರಾಜಪದವು ಸಹ ಲೋಕಾರಾಧನವನ್ನು ಅವಲಂಬಿಸಿತ್ತೆಂದು ಗೊತ್ತಾಗುವದು. ಅಥರ್ವ ವೇದದಲ್ಲಿ ಅರಸನು ಸಿಂಹಾಸನಸ್ಥನಾಗಬೇಕಾದರೆ ಅವನು ಲೋಕಾರಾಧನ ತತ್ಪರನಿರಲಿಕ್ಕೇ ಬೇಕೆಂದು "ತ್ವಾಂ ವಿಶೋ ವೃಣತಾಂ ರಾಜ್ಯಾಯ" ಅಥರ್ವ ೩-೪-೨" ಹೇಳಿರುತ್ತದೆ.

ಹಲವೆಡೆಗಳಲ್ಲಿ ಲೋಕಾರಾಧನದ ಸಂಪೂರ್ಣ ಮಹತ್ವವನ್ನು ಬಗೆದಂದು ಎಲ್ಲರೂ ಮನಃಪೂರ್ವಕವಾಗಿ ಐಕ್ಯರಕ್ಷಣೆ ಮಾಡಬೇಕೆಂದು ದೇವರನ್ನು ಕುರಿತು ಪ್ರಾರ್ಥಿಸಿದ್ದಾರೆ.

ಸಂ ಮನಾಂಸಿ ಸಮುವ್ರತಾಃ। ಅಥರ್ವ ೬-೭೪-೧

ಸಜ್ಞಪನಂ ವೋ ಮನಸೋಥೋ ಸಜ್ಞಪನಂ ಹೃದಃ। ಅಥರ್ವ ೬-೭೪-೨

ಇಮಾಂ ಜನಾನ್ತ್ಸಂಮನಸಸ್ಕೃಧೀಹಿಃ ಅಥರ್ವ ೬-೭೪-೩

ಈ ಎಲ್ಲ ಸಂಗತಿಗಳಿಂದ ವಿಚಾರಮಾಡಲು, ಈಗಿನ ಹಿಂದೂ ಜನರ ಪೂರ್ವಜರಾದ ಆರ್ಯರು ಲೋಕಮತದಬಗ್ಗೆ ಎಷ್ಟು ಆದರವುಳ್ಳವರಾಗಿದ್ದರೆಂಬದೂ, ಆದರ ತಾತ್ವಿಕಜ್ಞಾನದಿಂದ ಎಷ್ಟು ಪ್ರಯೋಜನ ಮಾಡಿಕೊಳ್ಳುತ್ತಿದ್ದರೆಂಬದೂ, ಲೋಕಾರಾಧನಮಾಡುತ್ತ ಎಷ್ಟು ಮನೋಹರರೀತಿಯಿಂದ ಪ್ರಗತಿಹೊಂದಿದರೆಂಬದೂ,ಈವರೆಗೆಸಹನಾವುಪರಮತಸಹಿಷ್ಣುಗಳಾಗಿ,ಲೋಕಾರಾಧನವನ್ನುಯಾಕೆ ಗೌರವಿಸುತ್ತೇವೆಂಬದೂ ಗೊತ್ತಾಗಿ ಮನಸಿಗೆ ಅತ್ಯಂತ ಸಂತೋಷವಾಗುತ್ತದೆ.

ಬಿಡಿಬಿಡಿಯಾಗಿರುವ ಮನುಷ್ಯರು ಸಮೂಹವಾಗಿ ವಾಸಮಾಡಹತ್ತಿದ ಮಹತ್ವದ ಮಾತಿನ ಸಲುವಾಗಿ ಸಭೆಗಳು ಏರ್ಪಡುವವು. ಸಭೆಗಳಲ್ಲಿ ಭಿನ್ನ ಭಿನ್ನ ವಿಚಾರಗಳು ಹೊರಬೀಳುವವು. ಅವುಗಳಿಂದ ಚರ್ಚೆಯಾರಂಭವಾಗುವದು. ಚರ್ಚೆಯಿಂದ ಯಾವದೊಂದು ಕೊನೆಯ ನಿರ್ಣಯವು ಸರ್ವಾನುಮತಿಯಿಂದ ಆಗುವದು. ಹೀಗೆ ಲೋಕಮತದ ಉತ್ಪತ್ತಿಯು, ಹಾಗು ಸಾಮರ್ಥ್ಯ ಪ್ರದರ್ಶನದ ಸ್ಥಳಗಳೇ ಸಭೆಗಳು. ತೀರ ಪ್ರಾಚೀನಕಾಲದಲ್ಲಿ ಆರ್ಯರಲ್ಲಿ ಅರಸೊತ್ತಿಗೆಯು ನೆಲೆಗೊಳ್ಳದೆ ಇದ್ದಕಾಲದಲ್ಲಿ ಸಭೆಗಳೂ ಸಮಿತಿಗಳೂ ಇದ್ದವೆಂದು ಹಿಂದಿನ ಪ್ರಕರಣದಲ್ಲಿ ಸಾಧಾರಣವಾಗಿ ಹೇಳಿದೆ. ಆದುದರಿಂದ "ಹಿಂದೂ ಆರ್ಯರಿಗೆ 'ಲೋಕಮತದ ಜ್ಞಾನವೇ ಇಲ್ಲವೆಂದು" ಹೇಳುವ ಆಕ್ಷೇಪದ ನಿರಸನವೂ ಆಗಿ

ಹೋಗಿದೆ. ಆದ್ದರಿಂದ ಸಭೆಗಳ ಸಂಬಂಧದಿಂದ ಪುನಃ ಬರೆಯುವದು ದ್ವಿರುಕ್ತಿಯಾಗುವದು.

ಬಹುಕಾಲದನಂತರ ಆರ್ಯರಲ್ಲಿ ಅರಸೊತ್ತಿಗೆಯು ನೆಲೆಗೊಂಡಿತು. ಆಗಿನ ಅರಸರು ಆಳಿಸಲ್ಪಟ್ಟ ಪ್ರಜೆಗಳೊಳಗಿನವರೇ ಆಗುತ್ತಿದ್ದದರಿಂದ ಲೋಕಮತದಿಂದ ನಿಯಮಿಸಲ್ಪಟ್ಟ ಅರಸನು ಲೋಕಾರಾಧನದ ಸಂಬಂಧದಿಂದಲೂ ಎಚ್ಚರುಳ್ಳವನಾಗಿರಬೇಕಾಗುತ್ತಿತ್ತೆಂಬ ಸಂಗತಿಯು ಸಹ ಅಥರ್ವ ವೇದದ ಮಂತ್ರಗಳಿಂದ ಹಿಂದಿನ ಪ್ರಕರಣದಲ್ಲಿ ಹೇಳಲ್ಪಟ್ಟದೆ. ಇನ್ನು ಅಥರ್ವವೇದದ ಪ್ರಾಚೀನತೆ ಅದರ ಐತಿಹಾಸಿಕ ಮಹತ್ವ, ಅದರಲ್ಲಿರುವ ಕಲ್ಪಕತೆ, ಮುಂತಾದವುಗಳ ಬಗ್ಗೆ ನಮ್ಮ ಅಭಿಪ್ರಾಯಕ್ಕಿಂತಲೂ ಪಾಶ್ಚಾತ್ಯರ ಅಭಿಪ್ರಾಯವನ್ನೇ ಹೇಳುವದು ಸಯುಕ್ತಿಕವಾಗಿ ತೋರುತ್ತದೆ. ಗ್ರಿಫಿಥ್‌ನೆಂಬ ಪಂಡಿತನು ಅನ್ನುವದೇನಂದರೆ:—

"The Atharva is like the Rik, in the main historica[l] and original. But the × × × × Atharva-samhita like-wis[e] contains pieces of great antiquity, which may perhap[s] have belonged more to the people proper to its lower gra-des, wheres the songs of the Rik appear rather to hav[e] been the higher families" (Griffith vol, I p. p. IV, VI[I])

ಪಾಶ್ಚಾತ್ಯ ಜನಾಂಗಗಳು ಉದಯಹೊಂದುವದಕ್ಕಿಂತ ಬಹು ಪ್ರಾಚೀನ ಕಾಲದಲ್ಲಿ ಹಿಂದೂ ಆರ್ಯರು ಜ್ಞಾನದ ಸರ್ವಶಾಖೆಗಳಲ್ಲಿ ಪಾರಂಗತರಾಗಿದ್ದು ಸುಧಾರಣೆಯ ಉಚ್ಚಶಿಖರವನ್ನು ಮುಟ್ಟಿದ್ದರು. (Early excellence of th[e] Brahmans in all the branches of learning. ......Eliphin[s]tone's India p, 92.) ಆ ಕಾಲದಲ್ಲಿ ಸಭೆಗಳ ರಚನೆಯು, ಇತರ ಸಂಸ್ಥೆಗಳ ಸ್ಥಾಪನೆಯು, ಲೋಕಮತದ ಕಲ್ಯಾಣಕಾರವಾದ ಪ್ರಭಾವವು, ಮುಂತಾದ ಎಷ್ಟೋ ಸಂಗತಿಗಳನ್ನು ಸಾಂಗೋಪಾಂಗವಾಗಿ ಅರಿತಿದ್ದರು. ಈ ಬಗ್ಗೆ ಪಾಶ್ಚಾತ್ಯ ಇತಿಹಾಸಕಾರನಾದ ಥಾರ್ನಟನ್ನನೆಂಬ ಪಂಡಿತನು ಬರೆದಿರುವದೇನಂದರೆ:

Ere yet the Pyramids looked down upon the vall[ey] of the Nile,-when Greece and Italy those cradles of mo-dern civilization housed only the tenants of the wilder-ness—India was the seat of wealth and grandeur.

ಅಂದರೆ, ಮಿಸರದೇಶದೊಳಗಿನ ಭವ್ಯವೂ, ವಿಶಾಲವೂ, ಪ್ರಚಂಡವೂ, ಆದ 'ಪಿರಮಿಡ್' ಗೋಪುರಗಳು ಮೇಲಕ್ಕೆದ್ದು ನಿಂತು ನೈಲನದಿಯನ್ನು ನೋಡಲಿಕ್ಕೆ ಗೋಣು ಎತ್ತರಿಸುವದಕ್ಕೆ ಹತ್ತುವದಕ್ಕಿಂತ ಪೂರ್ವದಲ್ಲಿಯೇ, ಭರತಖಂಡವು ಧನಧಾನ್ಯಗಳಿಂದ ತುಂಬಿದ್ದಾಗಿತ್ತು. ಅದರಲ್ಲಿ ಸಣ್ಣ ದೊಡ್ಡ ಅರಸರು, ಸರದಾರರು, ನಾಯಕರು, ಪಾಳೇಗಾರರು, ಮುಂತಾದವರ ಮಂದಿರಗಳು ಪ್ರತಿ ಇಂದ್ರಭುವನವಾಗಿದ್ದವು. ಅಂದರೆ ಹಿಂದುಸ್ಥಾನದಲ್ಲಿ ಬಂಗಾರದ ಹೊಗೆಯು ಹಾಯುತ್ತಿತ್ತು. ಶಾಸ್ತ್ರಕಲಾಜ್ಞಾನವು ಪೂರ್ಣವಾಗಿ ಬೆಳೆದಿತ್ತು. ಕವಿಗಳು, ತತ್ವಜ್ಞಾನಿಗಳು, ಇತಿಹಾಸಕಾರರು, ಮುಂತಾದವರ ಕೊರತೆಯೇ ಇದ್ದಿಲ್ಲ. ಆ ಕಾಲದ ಹಿಂದುಸ್ಥಾನದ ಸ್ಥಿತಿಗೆ, ಒಳ್ಳೆ ಬೆಳವಣಿಗೆ ಹೊಂದಿದ್ದ ಗ್ರೀಸ ರೋಮಗಳ ಸ್ಥಿತಿಯನ್ನು ಒರಿಹಚ್ಚಿ ನೋಡಿದರೆ ಆ ರಾಜ್ಯಗಳು ತೀರ ಕಾಡುಸ್ಥಿತಿಯಲ್ಲಿದ್ದವೆನ್ನಲಿಕ್ಕೆ ಏನೂ ಆತಂಕವಿಲ್ಲ. ಇನ್ನು ಹಿಂದೂ ಆರ್ಯರ ಲೋಕಾರಾಧನದ ಬಗ್ಗೆ ತೀರ ಪ್ರಾಚೀನಕಾಲದ ಬಗ್ಗೆ ಹೇಳುವದನ್ನು ಸಾಕುಮಾಡಿ ಅದರ ಮುಂದಿನ, ಅಂದರೆ ರಾಮಾಯಣಕಾಲದಲ್ಲಿ ಲೋಕಾರಾಧನವು ಹ್ಯಾಗೆ ಇತ್ತೆಂಬದನ್ನು ನೋಡುವಾ–

ರಾಮಾಯಣದ ಕಥೆಯು ಸರ್ವವಿಷಯಗಳ ಅತಿರೇಕವನ್ನು ಸೂಚಿಸುತ್ತದೆ. ದಶರಥನು ಮಾನವನಾದರೂ ದೇವತೆಗಳಿಗೆ ಸಹ ಸಹಾಯಮಾಡಿ ಇಂದ್ರನ ಅರ್ಧಾಸನವನ್ನು ಪಡೆಯುವಷ್ಟು ಬಲ್ಲಿದನಿದ್ದನು. ವಿತ್ತ ವಿಷಯಗಳನ್ನು ಕೊಡುವದರಲ್ಲಿ ಔದಾರ್ಯತೋರಿಸುವವರು ಬಹುಜನರು, ಆದರೆ ವಿಶ್ವಾಮಿತ್ರನು ಕೇಳಿದೊಡನೆಯೇ ಹೊಟ್ಟೆಯ ಕಂದಮ್ಮಗಳನ್ನು ಕಡುರಕ್ಕಸರ ಕೂಡ ಯುದ್ಧಮಾಡಲಿಕ್ಕೆ ಕಳಿಸುವದು ಸಾಮಾನ್ಯವಾದ ಔದಾರ್ಯವಲ್ಲ, ಸಾಧಾರಣವಾದ ಗಟ್ಟಿಮನಸ್ಸು ಅಲ್ಲ. ಚಿಕ್ಕಬಾಲಕನಾದ ರಾಮನು ಪ್ರಚಂಡವಾದ ಶಿವಧನುಸ್ಸನ್ನು ಮುರಿದದ್ದೂ ನಿಃಕ್ಷತ್ರಿಯ ಪೃಥ್ವಿಯನ್ನು ಮಾಡಬೇಕೆಂದು ಹಟತೊಟ್ಟು, ಕ್ಷತ್ರಿಯರುಧಿರಮಯವಾದ ಕೊಡಲಿಯನ್ನು ಕೈಯಲ್ಲಿ ಹಿಡಿದು ತಿರುಗುತ್ತಿದ್ದ ಪರಶುರಾಮನ ಸತ್ವಾಪಹಾರ ಮಾಡಿದ್ದೂ ಅಲೌಕಿಕಕಾರ್ಯಗಳು. ಚಿಕ್ಕಮಕ್ಕಳನ್ನು ವನವಾಸಕ್ಕೆ ಕಳಿಸುವದು ಮೇರೆಯಿಲ್ಲದ ಕಲ್ಲೆದೆಯಕಾರ್ಯವು. ಅದು ಪರತಂತ್ರನಾದರೂ ದಶರಥನಿಂದ ಆದದ್ದು, ಕೊಟ್ಟವಚನ ಪಾಲಿಸಿದ್ದರ ಅತಿರೇಕದ ಉದಾಹರಣೆಯು. ಗಂಡನೊಡನೆ ವನವಾಸಕ್ಕೆ ಸಂತೋಷದಿಂದ ಹೊರಟು, ಕ್ರೂರಾತ್ಮನಾದ ರಾವಣನ ಕೈಯಲ್ಲಿ ಸಿಲುಕಿ ಪರಿಪರಿಯ ತಾಪವನ್ನೂ ಪೀಡೆಯನ್ನೂ ಅನುಭವಿಸಿದರೂ ಪಾತಿವ್ರತ್ಯವನ್ನು ಕಾಯ್ದುಕೊಂಡ ಸೀತಾಮಾತೆಯ ಲೋಕೋತ್ತರ ಚರಿತ್ರೆಯು

ಆರ್ಯಸ್ತ್ರೀಯರಿಗೆ ಅಭಿಮಾನಾಸ್ಪದವೂ, ಇಡಿ ಜಗತ್ತಿಗೆ ಅನುಕರಣೀಯವೂ ಆಗಿದೆ. ಅನ್ನನೀರುಗಳನ್ನು ಪೂರ್ಣವಾಗಿ ಮರೆತು ಅಣ್ಣನ ಸೇವೆಯಲ್ಲಿಯೇ ಪೂರ್ಣಮಗ್ನನಾದ ಲಕ್ಷ್ಮಣನ ಬಂಧುಪ್ರೀತಿಯನ್ನು ಹೋಲುವಂಥ ಉದಾಹರಣೆಯು ಜಗದಲ್ಲಿ ಅನ್ಯತ್ರ ದೊರೆಯುವದು ಅಸಾಧ್ಯವು. ಒಡೆಯನಲ್ಲಿರುವ ಭಕ್ತಿಯ ಮೂಲಕವಾಗಿ ಸಮುದ್ರವನ್ನು ಜಿಗಿದು ದಾಟಿ, ರಾವಣ ಕುಂಬಕರ್ಣರಂಥ ವಿಕರಾಳರಾಕ್ಷಸರನ್ನು ಕೆಣಕಿದಂಥ ಹನುಮಂತನಿಗೆ ಸರಿಯಾದ ರಾಮಭಕ್ತರು ಜಗತ್ತಿನಲ್ಲಿ ಮತ್ತಾರು ತೋರುವರು? ದೇವಾನುದೇವತೆಗಳನ್ನು ಜಯಿಸಿದ ರಾವಣನು ಸಮಸ್ತ ಬಂಧುಬಾಂಧವರು ಮಡಿದರೂ, ತೊಲಗಿ ಹೋದರೂ, "ರಣದಲ್ಲಿ ಜಯಪಡೆಯುವೆನು. ಇಲ್ಲವೆ ಮಡಿಯುವೆನು" ಎಂದು ಪಂಥಮಾಡಿ ತೋರಿಸಿದ ವೈರಭಾವಕ್ಕಿಂತ ಹೆಚ್ಚಿನ ಶತ್ರುತ್ವವು ತೀರ ಅಪರೂಪವಾಗಿರುವದು. ಇದರಂತೆ ರಾಮನ ಏಕಪತ್ನೀ ವ್ರತವು, ಸೀತೆಯ ಶುದ್ಧತೆಯ ನಿದರ್ಶನಕ್ಕಾಗಿ ಮಾಡಿದ ಅಗ್ನಿ ಪ್ರವೇಶವು ಮುಂತಾದವು ಅಸದೃಶಸಂಗತಿಗಳಾಗಿರುವವು. ಹೀಗೆ ರಾಮಾಯಣಕಾಲದಲ್ಲಿ ಭಾರತೀಯರಾಷ್ಟ್ರದ ತೇಜಸ್ಸು, ಪವಿತ್ರಕೀರ್ತಿ, ನಿರ್ಮಲಮನೋವೃತ್ತಿ, ಸುಮಂಗಲವಾದ ಆಚಾರಗಳು, ಉದ್ದಂಡಪ್ರತಾಪವು, ಪ್ರೌಢಬುದ್ಧಿ, ಅಸದೃಶವಾದ ಏಕನಿಷ್ಠಾ, ಅಪೂರ್ವಪ್ರೇಮಬಂಧನ, ದೃಢನಿಶ್ಚಯ, ಮುಂತಾದ ನಾನಾವಿಧಗುಣಗಳು ಸಂಪೂರ್ಣಪರಿಪುಷ್ಟವಾಗಿದ್ದಂತೆಯೇ ಲೋಕಾರಾಧನದ ಬಗ್ಗೆ ಇದ್ದ ಆದರ ಬುದ್ಧಿಯೂ ಪರಿಪಕ್ವದೆಸೆಯನ್ನು ಹೊಂದಿತ್ತು. ಆಗ ಲೋಕಮತದ ಪ್ರಾಬಲ್ಯವು ವಿಶೇಷಪ್ರಚಂಡವಾಗಿತ್ತು. ಲೋಕಮತದ ಉದಾತ್ತವಾದ ಇಷ್ಟಾಭಿಲಾಷೆಗೆ ಸಾರ್ವಭೌಮರಾದ ದಶರಥ-ಶ್ರೀರಾಮಚಂದ್ರರು ಸಹ ಮಾನ ಕೊಡುತ್ತಿದ್ದರೆಂಬದಕ್ಕೆ ಸ್ವಲ್ಪವಾದರೂ ಸಂಶಯವಿಲ್ಲ.

ಹರಣೀವೃತ್ತ

ಅಥ ದಶರಥಃ ಪುತ್ರಂ ರಾಮಂ ಸ್ವತಸ್ತ್ರಿಜಗತ್ಪತಿಮ್
ಸ್ವವಿಷಯ ಮಹೀಮಾತ್ರೇ ಕರ್ತುಂ ಪತಿಂ ವಿದಧೇ ಮತಿಮ್ ॥ (ಚಂ. ರಾ.)

ದಶರಥರಾಯನು ೩ ಲೋಕಗಳ ಒಡೆಯನಾದ ಶ್ರೀರಾಮಚಂದ್ರನನ್ನು ತನ್ನ ಮಟ್ಟಿಗೆ ಮಾತ್ರ ಇರುವ ಭೂಮಿಗೆ ಒಡೆಯನನ್ನು ಮಾಡಬೇಕೆಂದು ಬಯಸಿದನು.

ಗದ್ಯ ॥ ತದನನ್ತರಮಸೌ ಸಂಮಂತ್ರ್ಯ ಮನ್ತ್ರಿಭಿಃಸಹಪೌರ ವೃದ್ಧಾನ್
ವೃದ್ಧಶ್ರವಃ ಪುರೋಧಃ ಸಮೂನ್ಸಮಾಹೂಯ ಸಮಾದಿದೇಶ (ಚಂ. ರಾ.)

"ಬಳಿಕ ಆ ದಶರಥರಾಯನು ಮಂತ್ರಿಗಳೊಡನೆ ಆಲೋಚನೆಮಾಡಿ, (ವಿದ್ಯಾಬು

ದ್ಧಿಗಳಿಂದ) ಬೃಹಸ್ಪತಿ ಸಮಾನರಾದ ಹಿರಿಯರಾದ ನಾಗರಿಕರನ್ನು ಕರೆಸಿ ಹೇಳಿದನು. ಏನಂದರೆ ನಮ್ಮ ಪೂರ್ವಜರೆಲ್ಲ ಪ್ರಜಾಪಾಲನ ಕಾರ್ಯದಲ್ಲಿ ಕೃತಕೃತ್ಯರಾಗಿ ದೇವತ್ವವನ್ನು ಹೊಂದಿದರು. ಅದರಂತೆ ನಾನೂ ಪ್ರಜಾಪಾಲನಕಾರ್ಯವನ್ನು ನೆರವೇರಿಸಿದೆನು. ನಾನು ಹ್ಯಾಗೆ ಪ್ರಜಾಪಾಲನ ಮಾಡಿದೆನೆಂಬದಕ್ಕೆ ನೀವೇಸಾಕ್ಷಿಯಾಗಿರುವಿರಿ. ಈಗ ನಿಮ್ಮನ್ನು ಕರಿಸಿ ಬೇಡಿಕೊಳ್ಳುತ್ತೇನೆ. ಏನಂದರೆ–ನಾನು ಮುದುಕನಾದೆನು. ಆದದರಿಂದ—

...ಜನಾನುರಾಗನಿಲಯೇ ವತ್ಸೇ ರಾಮೇऽಸ್ಮಿನ್ ನಿವೇಶ್ಯ ವಿಶ್ವಂಭರಾಭಾರ ಚಿರಕಾಲ ಧಾರ್ಯಮಾಣ ಮಾರ್ಯೈರನುಮತಃ ಸನ್ ವಿಶ್ರಾಂತಿ ಸುಖಮನು ಭವಿತು ಮಭಿಲಷಾಮಿೂತಿ (ಚಂ. ರಾ)

ಜನರಿಗೆ ಪ್ರೀತ್ಯಾಸ್ಪದನಾದ ಕುಮಾರನಾದ ರಾಮನಮೇಲೆ ಎಲ್ಲ ಭೂಮಿಯ ಭಾರವನ್ನು ನಿಮ್ಮೆಲ್ಲರ ಒಪ್ಪಿಗೆಯಿಂದ ಹೊರಿಸಿ, ವಿಶ್ರಾಂತಿಸುಖವನ್ನು ಅನುಭವಿಸಬೇಕೆಂದು ಬಯಸುತ್ತೇನೆ. ಎಂದು ಹೇಳಿದನು. ಅದಕ್ಕೆ ಎಲ್ಲ ಜನರು ಆನಂದೋದ್ಗಾರಗಳಿಂದ ಒಪ್ಪಿಗೆ ಕೊಟ್ಟರು ಹಾಗು

ವ. ತಿ. ॥ ಆನಂದ ಬಾಷ್ಪವಿಸರೋ ವದನೇ ಪ್ರಜಾನಾಮ್ ।
ಆವಿರ್ಬಭೂವ ಮಕರಂದ ಇವಾರವಿಂದೇ ॥ (ಚ.ಂ ರಾ.

"ಕಮಲದಲ್ಲಿ ಮಕರಂದರಸವುಂಟಾಗುವಂತೆ ಎಲ್ಲ ಪ್ರಜೆಗಳ ಮೋರೆಗಳಲ್ಲಿಯೂ ಆನಂದಭಾಷ್ಪಗಳುಂಟಾದವು. ಬಳಿಕ ದಶರಥರಾಜನು ಮಂತ್ರಿಗಳೊಡನೆ ಯೋಚನೆ ಮಾಡಿ ಅವಗ ಒಪ್ಪಿಗೆಯನ್ನು ಪಡೆದು ವಸಿಷ್ಠಾದಿ ಕುಲಪುರೋಹಿತರು ಆಜ್ಞಾಪಿಸಿದಂತೆ ರಾಮನಿಗೆ ಯುವ ರಾಜ ಪಟ್ಟವನ್ನು ಕಟ್ಟಲಿಕ್ಕೆ ಏರ್ಪಾಟು ಮಾಡಿದನು. ಬಳಿಕ—

ವ ತಿ ॥ ಆಹೂಯ ರಾಮಂ ವಿನಯಾಭಿರಾಮಮ್ । ಅವಿಃಪ್ರಮೋದಃ ಪುಭುರೇವ ಮೂಚೇ ॥ ತವೋತ್ತಮಾಂಗೇ ಮಕುಟಂ ನಿಧಾತುಮ್ । ಅಹಾಮಿ ತಿಷ್ಯೇ ದಿವಸೇ ಯತಿಷ್ಯೇ ॥ (ಚಂ. ರಾ.)

ವಿನಯಶಾಲಿಯಾದ ರಾಮನನ್ನು ಕರೆದು "ಮಗನೇ, ಬೇಗ ಪುಷ್ಯ ನಕ್ಷತ್ರದಲ್ಲಿ ನಿನಗೆ ಪಟ್ಟಗಟ್ಟುವೆನೆಂದು" ಹೇಳಿದನು.

ಜನಮತವನ್ನು ಕುರಿತು ಹೇಳುವಾಗ ಇಷ್ಟು ಸಂಗತಿಗಳು ಸಾಕು. ದಶರಥನು ರಾಮನನ್ನು ಅರಸನನ್ನು ಮಾಡುವಾಗ ಪ್ರಾರಂಭದಲ್ಲಿ ಯೋಗ್ಯರಾದ ಸಾಮಾನ್ಯ ಜನರ ಒಪ್ಪಿಗೆಯನ್ನು ತಕ್ಕೊಂಡನು. ಬಳಿಕ ಮಂತ್ರಿ ಮಂಡಲದವರ ಸಮ್ಮತಿಯನ್ನು ಪಡೆದನು. ಆ ಮೇಲೆ ತನಗೆ ಪೂಜಾರ್ಹರಾದ ಋಷಿಗಳ ಆಲೋ

ಚನೆಯಂತೆ ಕಾರ್ಯೋದ್ಯುಕ್ತನಾದನು. ಎಲ್ಲಕ್ಕೂ ಕೊನೆಗೆ ತನ್ನ ಮಗನಿಗ ತನ್ನ ಆಲೋಚನೆಯನ್ನು ತಿಳಿಸಿದನು. ಲೋಕಮತಕ್ಕೆ ಬೇಕಾಗಿರುವ ಇದಕ್ಕೂ ಹೆಚ್ಚಿನ ಪ್ರತಿಷ್ಠೆಯು ಈಗಿನ ೨೦ನೇ ಶತಮಾನದಲ್ಲಿ ಎಲ್ಲಿಯಾದರೂ ತೋರುವದೇನು?

ಇಷ್ಟೆಲ್ಲ ಸಿದ್ಧತೆಯಾದರೂ ರಾಮನ ವನವಾಸ ಬೇರೆ ತಪ್ಪಲಿಲ್ಲ. ಲೋಕ ಮತಕ್ಕೆ ವಿರುದ್ಧವಾಗಿ ದಶರಥನು ರಾಮನನ್ನು ವನಕ್ಕೆ ಅಟ್ಟಲಿಲ್ಲವೋ? ಎಂದು ಯಾರಾದರೂ ಶಂಕಿಸಬಹುದು. ಅದಕ್ಕೆ ಸಮಾಧಾನವೇನಂದರೆ–ಆ ಕಾಲದಲ್ಲಿ ಅರಸನು ಲೋಕಮತಕ್ಕೆ ಸನ್ಮಾನಮಾಡುತ್ತಿದ್ದಂತೆಯೇ ಜನರಾದರೂ ಅರಸನ ಬಗ್ಗೆ ಅತ್ಯಂತರಾಜನಿಷ್ಠರಿದ್ದರೆಂಬದನ್ನು ಮರೆಯತಕ್ಕದ್ದಲ್ಲ. ಅರಸನ, ಹಾಗು ಪ್ರಜೆಗಳ ಚಿತ್ತೈಕ್ಯವು ವಿಲಕ್ಷಣವಾಗಿತ್ತು. ತಮ್ಮ ಅರಸನನ್ನು ವಚನಭ್ರಷ್ಟನನ್ನು ಮಾಡಲಿಕ್ಕೆ ಚಿತ್ತೈಕ್ಯವುಳ್ಳ ಪ್ರಜೆಗಳು ಎಂದೂ ಎತ್ತುಗಡೆಮಾಡರು. ಅಂತೇ ವಚನ ಬದ್ಧನಾದ ದಶರಥನನ್ನು ಸತ್ಯ ಪ್ರತಿಜ್ಞನನ್ನು ಮಾಡುವದಕ್ಕೋಸ್ಕರ ಆತನ ಪ್ರಜೆಗಳು ತಮಗಾದ ಅಗಾಧಶೋಕವನ್ನು ಹತ್ತೊತ್ತಿಕೊಂಡು ರಾಮನ ವನವಾಸ ವನ್ನು ಸಹಿಸಿದರು. ಇದರಲ್ಲಿ ಪ್ರಜೆಗಳ ದಿವ್ಯರಾಜನಿಷ್ಠೆಯೂ ದಶರಥನ ಅಮೋ ಘವಾದ ಸತ್ಯ ಸಂಧತೆಯೂ ಹೆಚ್ಚು ಉಜ್ಜ್ವಲವಾಗಿ ಪ್ರಕಾಶಿಸುತ್ತಿರುವವು. ದೋ ಷಾಸ್ಪದವೂ ಆಕ್ಷೇಪಾರ್ಹವೂ ಆದ ಯಾವ ಸಂಗತಿಯೂ ಒದಗಲಿಲ್ಲೆಂದು ಸ್ಪಷ್ಟ ವಾಗಿ ತೋರುವವು.

ಇನ್ನು ರಾಮಾಯಣಕಾಲದಲ್ಲಿ ಲೋಕಾರಾಧನದ ಕಲ್ಪನೆಯು ಅತ್ಯದ್ಭು ತವಾಗಿತ್ತೆಂದು ಮುಂದಿನ ಸಂಗತಿಯಿಂದ ತಿಳಿಯುವದು.

ಶ್ರೀರಾಮನು ರಾವಣಾದಿಗಳನ್ನು ಕೊಂದು ಸೀತೆಯೊಡನೆ ಅಯೋಧ್ಯೆಗೆ ಬಂದು ಸುಖದಿಂದ ರಾಜ್ಯಭಾರಮಾಡುತ್ತಿದ್ದನು. ಬಹುಕಾಲದಮೇಲೆ ಸೀತಾದೇ ವಿಯು ಗರ್ಭಿಣಿಯಾದಳು. ರಾಮನಿಗೆ ಪರಮಹರ್ಷವಾಯಿತು. ಬಸುರಾದ ಕಾಲದಲ್ಲಿ ಆಗತಕ್ಕ ಉತ್ಸವಗಳೆಲ್ಲ ಒಳ್ಳೇ ವಿಜೃಂಭಣೆಯಿಂದ ನೆರವೇರಿದವು. ಒಂದುದಿನ ಲೋಕಾರಾಧನ ತತ್ಪರನಾದ ಶ್ರೀರಾಮನ ಹತ್ತರ ಒಬ್ಬ ದೂತನು ಬಂದು

ದಾ ಷ॥ ಪೆಂಡತಿ ತವರ್ಮನೆಗೆ ಮುಳಿದು ಪೇಳದೆಪೋದ।
ಚೆಂಡಿತನಕವಳ ತಾಯ್ತಂದೆಗಳ್ ಕಳುಹ ಬಂ।
ದಂಡಲೆದೊಡಿನ್ನೊಲ್ಲೆ ನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ॥

ಕೊಂಡಾಳುವವನಲ್ಲ ತಾನೆಂದು ರಜಕನು।
ದ್ದಂಡದೊಳ್ ನುಡಿಯೆ ಕಿವಿಮುಚ್ಚಿಕೊಂಡೆಂ ದೇವ॥
ಖಂಡಿತದ ಮಂತ್ರಪೂರಿತಹವಿಯನರಿದೆಂಜಲಿಪುದೆ ವಾಯಸವೆಂದನು॥
(ಜೈಮಿನಿ)

"ರಾವಣನ ಮನೆಯಲ್ಲಿ ಸೀತೆಯಿದ್ದಳು. ಅಲ್ಲಿ ಹ್ಯಾಗಿದ್ದಳೋ ಏನೋ! ರಾಮನು ಮಾತ್ರ ಸೀತೆಯನ್ನು ಸ್ವೀಕರಿಸಿದನು. ಹಾಗೆ ನಾನು ಅಗಲಿಹೋದ ಹೆಂಡತಿಯನ್ನು ಎಂದೂ ಕೂಡುವವನಲ್ಲವೆಂದು ಒಬ್ಬ ರಜಕನು ಅಂದನು" ಎಂದು ಹೇಳಿದನು. ಅದನ್ನು ಕೇಳಿದಕೂಡಲೆ ಶ್ರೀ ರಾಮನ ಎದೆಯಲ್ಲಿ ಬಾಣನೆಟ್ಟಂ ತಾಯಿತು. ಅಯ್ಯೋ, ಲೋಕಾರಾಧನತತ್ಪರನೆಂಬ ಬಿರುದು ವ್ಯರ್ಥವಾಗುವದಲ್ಲ! ಎಂದು ಅಂದುಕೊಂಡು ಸೀತೆಯನ್ನು ಮತ್ತೆ ಬಿಡಲುದ್ಯುಕ್ತನಾದನು. ಸಮ್ರಾಟನಾದ ಶ್ರೀರಾಮನು ಸಮುದ್ರವಲಯಾಂಕಿತವೂ ಅಬಾಧಿತವೂ ನಿಷ್ಕಂಟಕವೂ ಆದ ಸಾಮ್ರಾಜ್ಯಕ್ಕೆ ಒಡೆಯನಾಗಿದ್ದನು; ಆದರೂ ಲೋಕಮತದ ಗಾಳಿಯು ಹ್ಯಾಗೆ ಯಾವಕಡೆಗೆ ಬೀಸುತ್ತದೆಂಬದರ ಸುಳುವನ್ನು ಸ್ವಲ್ಪದರಲ್ಲಿಯೇ ಅರಿತುಕೊಂಡು ಲೋಕಾರಾಧನ ಮಾಡಲಿಕ್ಕೆ ಯತ್ನಿಸಿದನು. ಅದಕ್ಕಾಗಿಯೇ ತನ್ನ ಸುಶೀಲೆಯೂ ಪವಿತ್ರಳೂ ಜಗದ್ವಂದ್ಯಳೂ ಆದ ಸೀತಾಪತ್ನಿಯನ್ನು ಅಡವಿಗೆ ಕಳುಹಿದನು.

ಪೌರಾಪವಾದಃ ಸುಮಹಾಂಸ್ತಥಾ ಜನಪದಸ್ಯ ಚ
ವರ್ತತೇ ಮಯಿ ಬೀಭತ್ಸಾ ಸಾಮೇ ಮರ್ಮಾಣಿ ಕೃಂತತಿ॥೩॥

ರಾಮಾಯಣ ಉತ್ತರಕಾಂಡ ೪೫.

ಭವಭೂತಿಯು ಸಹ, ಉತ್ತರರಾಮಚರಿತ್ರೆಯಲ್ಲಿ "ಸಾರ್ವಭೌಮ ರಾಮಚಂದ್ರನು ಪ್ರಜೆಗಳ ಕಲ್ಯಾಣಕ್ಕೋಸ್ಕರ ಸ್ನೇಹ, ದಯೆ, ಸೌಖ್ಯಗಳನ್ನು ಲೆಕ್ಕಿಸದೆ ತನ್ನ ಹೆಂಡತಿಯನ್ನು ಸಹ ಏನೂ ವ್ಯಥೆಯಿಲ್ಲದೆ ಬಿಟ್ಟನೆಂದು ಹೇಳಿದ್ದಾನೆ.

ಸ್ನೇಹಂ ದಯಾಂ ತಥಾ ಸೌಖ್ಯಂ ಯದಿವಾ ಜಾನಕೀಮಪಿ।
ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿ ಮೇ ವ್ಯಥಾ॥

ಉತ್ತರರಾಮಚರಿತ್ರ ೧-೧೨.

ಅಪ್ರತಿಮ ಸಂಪತ್ಕಾಲದಲ್ಲಿ, ಗರ್ಭವತೀಭಾರ್ಯೆಯನ್ನು ಲೋಕಾರಾಧನಕ್ಕಾಗಿ ಬಿಡುವದು ಸಾಮಾನ್ಯ ಕಾರ್ಯವೋ? ಇಂಥ ಪ್ರಜಾವತ್ಸಲನಾದ ದೊರೆಯು ಪ್ರಜೆಗಳನ್ನು ಮಕ್ಕಳಂತೆ ತಿಳಿದು, ತಾನು ಅರಸನೆಂಬದನ್ನು ಮರೆತು, ಪ್ರಜೆಗಳ ಸೇವೆಯೇ ತನ್ನ ಕರ್ತವ್ಯವೆಂದು ಬಗೆದು, ಪ್ರಜೆಗಳ ಸೌಖ್ಯವನ್ನೂ ವಿಪತ್ತಿನ

ನಿವಾರಣೆಯನ್ನೂ ದುಃಖಪರಿಹಾರವನ್ನೂ ಮಾಡುತ್ತ ಈ ಭರತಖಂಡದಲ್ಲಿ ಸುಮಾರು ಐದುಸಾವಿರವರ್ಷಗಳ ಹಿಂದೆ ಆಗಿಹೋದನು. ಆತನು ಲೋಕಾರಾಧನದ ಬಗ್ಗೆ ಅತ್ಯಂತ ದೃಢನಿಶ್ಚಯದಿಂದ ನಡೆದನು. ಅದರಂತೆ ಸೀತೆಯನ್ನು ಭಾಗೀರಥೀನದಿಯನ್ನು ದಾಟಿಸಿ ಬಿಟ್ಟು ಬರುವ ಬಗ್ಗೆ ರಾಮನು ಮಾಡಿದ ಅಪ್ಪಣೆಯನ್ನು ಪಾಲಿಸಿದ ಲಕ್ಷ್ಮಣನು ಸಹ, ಲೋಕಾರಾಧನದ ಬಗ್ಗೆ ಸಂಪೂರ್ಣ ನಿಷ್ಠೆಯನ್ನು ತೋರಿಸಿದನು. ಬಹಳ ಮಾತೇನು? ನಿಷ್ಕಲಂಕಳೂ ಪರಮ ಪವಿತ್ರಳೂ ಆದ ಸೀತಾಮಾತೆಯು, ರಾಮಾಜ್ಞೆಯಿಂದ ಇಳಿಬಿಳಿ ಮುಳುಗಿಹೋಗಿದ್ದಳು. ಆಕೆ ವನದಲ್ಲಿ ಬಿಡಲ್ಪಟ್ಟಾಗ ವನವಾಸವನ್ನು ಸುಮ್ಮನೆ ಅನುಭೋಗಿಸಲಿಕ್ಕೆ ಸಿದ್ಧಳಾಗಿ ಲೋಕಾರಾಧನತತ್ಪರತೆಯನ್ನು ಗಂಡನಿಗಿಂತ ಮಿಗಿಲಾಗಿ ವ್ಯಕ್ತಪಡಿಸಿದಳು! ಆಕೆ ತನಗೆ ಕುಂದಿಟ್ಟವರನ್ನು ನಿಂದಿಸಲಿಲ್ಲ. ಗಂಡನ ಆಜ್ಞೆಯನ್ನು ಮೀರಲಿಲ್ಲ. ತಿರುಗಿ ಕೇಳಿದರೆ ಆಕೆ ಅತ್ಯಂತ ಉದಾತ್ತಮನಸ್ಸಿನಿಂದ ಲಕ್ಷ್ಮಣನಿಗೆ ಹೇಳಿದಳೇನಂದರೆ—"ಮೈದುನನೇ, ನೀನು ಶ್ರೀ ರಾಮನ ರಕ್ಷಣೆಯನ್ನು ಒಳ್ಳೇ ಪ್ರೇಮದಿಂದ ಮಾಡುತ್ತಿರುವಂತೆ, ಸಮಗ್ರ ಪ್ರಜಾಪರಿವಾರವನ್ನೂ ಒಳ್ಳೇ ನಿರ್ಮಲ ಪ್ರೀತಿಯಿಂದ ರಕ್ಷಿಸುತ್ತಿರು. ಯಾಕಂದರೆ ಹಾಗೆ ನಡೆಯುವದೇ ನಿಜವಾದ ಧರ್ಮವೂ ಕರ್ತವ್ಯವೂ ಆಗಿರುವದು "ಎಂದು ಹೇಳಿದಳು!

ವಿಷಕುಡಿಸುವವರಿಗೆ ಹಾಲುಣಿಸುವಂತೆ, ಕೆನ್ನೆಯಮೇಲೆ ಹೊಡೆದವರ ಕೈಗೆ ಎಣ್ಣೆಹಚ್ಚಿ ಉಪಚರಿಸುವಂತೆ ಇದ್ದ ಸೀತೆಯ ವರ್ತನವನ್ನು ನೋಡಿ ಎಂಥ ಖಳನಾದರೂ ಸೌಜನ್ಯವನ್ನು ಪಡೆಯುವನು.

ಯಥಾ ಭ್ರಾತೃಷು ವರ್ತೇಥಾಸ್ತಥಾ ಪೌರೇಷು ನಿತ್ಯದಾ।
ಪರಮೋಹ್ಯೇಷ ಧರ್ಮಸ್ತೇ ತಸ್ಮಾತ್ಕೀರ್ತಿರನುತ್ತಮಾ॥

ರಾಮಾಯಣ ಉತ್ತರಕಾಂಡ ೩-೪೮-೧೫.

ಇದರಮೇಲಿಂದ ನೋಡಲು, ರಾಮಾಯಣಕಾಲದಲ್ಲಿ ಲೋಕಾರಾಧನವು ಶ್ರೇಷ್ಠ ಸ್ಥಿತಿಯಲ್ಲಿತ್ತೆಂತಲೂ, ಅದರ ನಿಜವಾದ ಸ್ವರೂಪವು ಭಾರತೀಯ ಆರ್ಯರಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿತ್ತೆಂತಲೂ, ಲೋಕಾರಾಧನದ ಕಾರ್ಯದಲ್ಲಿ ಆರ್ಯರು ಒಳ್ಳೇ ನಿಷ್ಣಾತರಿದ್ದರೆಂತಲೂ, ವಾಚಕರಿಗೆ ಚೆನ್ನಾಗಿ ತಿಳಿಯುವಂತೆ ಅದೆ.

ರಾಮಾಯಣಕಾಲದಂತೆ ಭಾರತಕಾಲದಲ್ಲಿಯೂ ಲೋಕಾರಾಧನದ ಬಗ್ಗೆ ಆರ್ಯರು ಒಳ್ಳೇ ಜಾಗರೂಕರಾಗಿದ್ದರೆಂದು, ಆ ಕಾಲದ ಇತಿಹಾಸದಿಂದ ಗೊತ್ತಾ

ಗುತ್ತದೆ. ಪ್ರತ್ಯಕ್ಷ ಭಗವಂತನಾದ ಶ್ರೀ ಕೃಷ್ಣನು ಲೋಕಾರಾಧನದ ಮಹಿಮೆಯನ್ನು ವರ್ಣಿಸಿ, ಅದಕ್ಕೋಸ್ಕರ ಕಷ್ಟವನ್ನಾದರೂ ಸೋಸಬೇಕೆಂದು ಅರ್ಜುನನಿಗೆ ಗೀತೆಯ ಮುಖಾಂತರವಾಗಿ ಉಪದೇಶ ಮಾಡಿದ್ದಾನೆ.

ಲೋಕ ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ॥ ಭ. ೩--೨೦

ಇದರಂತೆ ಉದ್ಯೋಗ ಪರ್ವದಲ್ಲಿರುವ ಪ್ರಜಾಗರ ಪರ್ವದೊಳಗೆ ವಿದುರನ ಮುಖದಿಂದ, ನೀರಡಿಸಿದವರ ನೀರಡಿಕೆ ಹರಿಯುವಂತೆ ನೀತಿಬೋಧಾಮೃತ ಪ್ರವಾಹವು ಹೊರಟಿರುವದು. ಅದರಲ್ಲಿ, ನೇತ್ರದಿಂದಲೂ, ಮಾತಿನಿಂದಲೂ, ಕ್ರಿಯೆಯಿಂದಲೂ, ಮನಸಿನಿಂದಲೂ ಜನರನ್ನು ಸರ್ವದಾ ಸಂತುಷ್ಟಪಡಿಸಬೇಕೆಂತಲೂ, ಅದರಿಂದಲೇ ಲೋಕಮತವು ಅರಸನಿಗೆ ಬೆಂಬಲವಾಗಿ ದೊರೆಯುವದೆಂತಲೂ ಹೇಳಲ್ಪಟ್ಟದೆ. ಅದು ಬಹಳ ಮಹತ್ವದ್ದೂ ರಾಜನೀತಿಯ ಉದಾತತ್ವಗಳಿಂದ ತುಂಬಿದ್ದೂ ಇರುತ್ತದೆ.

ಚಕ್ಷುಷಾ ಮನಸಾ ವಾಚಾ ಕರ್ಮಣಾ ಚ ಚತುರ್ವಿಧಂ।
ಪ್ರಸಾದಯತಿ ಯೋಲೋಕಂ ತಂ ಲೋಕೋನುಪ್ರಸೀದತಿ॥

ಮಹಾಭಾರತಕಾಲವು ಕ್ರಿ. ಶ. ಪೂರ್ವದಲ್ಲಿ ಮೂರುಸಾವಿರ ವರ್ಷವೆಂದು ಶೋಧಕರು ಗೊತ್ತುಹಚ್ಚಿದ್ದಾರೆ.

ಹೀಗೆ ಪರಂಪರೆಯಿಂದ ಅಂದರೆ ವೇದಪೂರ್ವಕಾಲ, ವೇದಕಾಲ, ವೇದಗಳ ನಂತರದಕಾಲ, ರಾಮಾಯಣಕಾಲ, ಭಾರತಕಾಲಗಳಲ್ಲಿ ಆರ್ಯರು ಲೋಕಾರಾಧನ ತತ್ಪರರಾಗಿದ್ದರೆಂದು ಮೇಲಿನ ವಿವರದಿಂದ ತಿಳಿಯುವದು. ಆದದರಿಂದ ಪರಮತವನ್ನು ಆದರಿಸುವದೂ, ಪರರನ್ನು ಶಕ್ತಿಮೀರಿ ಸನ್ಮಾನಿಸುವದೂ ಆರ್ಯವಂಶಸ್ಥರಾದ ಈಗಿನ ಹಿಂದೂಜನರಿಗೆ ಮೈಯುಂಡುಹೋಗಿದೆ. ಭಾರತರಾಮಾಯಣಕಾಲದಲ್ಲಿದ್ದ ಆರ್ಯಸಮಾಜಸ್ಥಿತಿಯ ಸಂಬಂಧವಾಗಿ ಮನೋರಂಜಕ ಸಂಗತಿಗಳು ಸ್ವತಂತ್ರಪ್ರಕರಣದಲ್ಲಿ ವಿವರಿಸಲ್ಪಡುವವು. ಈಗ ಬಂದೇ(ಲೋಕಾರಾಧನದ) ಸಂಗತಿಯಬಗ್ಗೆ ದಿಗ್ದರ್ಶನ ಮಾಡಿದೆ.

ಸುಮಾರು ೧೨೦೦ ವರ್ಷಗಳ ಪೂರ್ವದಲ್ಲಿ ಸಹ ಒದಗಿದ ಒಂದು ಐತಿಹಾಸಿಕ ಸಂಗತಿಯಿಂದ ಆರ್ಯರ ಲೋಕಾರಾಧನ ಬುದ್ಧಿಯು ನಿಚ್ಚಳವಾಗಿ ಹೊಳೆದಂತೆ ತೋರುವದು. ಮುಸಲ್ಮಾನರ ಅಸಹ್ಯವಾದ ಧರ್ಮಛಲದಿಂದ ಪೀಡಿತರಾದ ಪಾರ್ಸಿಜನರು, ಹಡಗಗಳನ್ನೇರಿ ಹಿಂದುಸ್ಥಾನಕ್ಕೆ ಬಂದರು. ಆಗಿನ ಕಾಲದಲ್ಲಿದ್ದ ಗುರ್ಜರಾಧಿಪನಾದ ಆರ್ಯರಾಜನು ಅವರಿಗೆ ಬರಬೇಡಿರೆನ್ನಲಿಲ್ಲ, ಪೀಡೆಕೊಡ

ಲಿಲ್ಲ, ತಿರುಗಿಹೋಗಲಿಕ್ಕೆ ಒತ್ತಾಯಮಾಡಲಿಲ್ಲ. ಧರ್ಮಾಂತರಮಾಡಲಿಕ್ಕೆ ಹೇಳಲಿಲ್ಲ. ರಾಜಕಾರಣದ ಕೆಲವು ಕ್ಷುಲ್ಲಕ ಕಟ್ಟಳೆಗಳಿಗೆ ಪಾರ್ಸೀಜನರು ಒಪ್ಪಿದ ಕೂಡಲೆ ಅವರಿಗೆ ಇರಲಿಕ್ಕೆ ಸ್ಥಳಕೊಟ್ಟು ಶಾಂತರೀತಿಯಿಂದ ಬಾಳಿವೆ ಮಾಡಗೊಟ್ಟನು. ಯಾವಧರ್ಮದವರೇ ಆಗಲಿ, ಶಾಂತರೂ, ಸೌಜನ್ಯವುಳ್ಳವರೂ ಇದ್ದರೆ ಅವರನ್ನು ಆದರಿಸುವದು ಆರ್ಯರ ಶೀಲವು. ಮುಸಲ್ಮಾನರಲ್ಲಿ ಸಹ ಸೌಜನ್ಯವುಳ್ಳವರು ಆರ್ಯರಿಂದ ಆದರಣೆಹೊಂದಿದರು. ಆದರೆ ಪ್ರಾರಂಭದಿಂದ ಬಂದ ಬಹುಜನ ಮುಸಲ್ಮಾನರ ಸಂಸ್ಕೃತಿಯು ಆರ್ಯಸಂಸ್ಕೃತಿಗಿಂತ ಕಡಿಮೆ ತರದ್ದಾದದರಿಂದಲೂ ಈಶ್ವರಕೃಪೆಯಾಗಲಿಕ್ಕೆ ಇಸ್ಲಾಮಧರ್ಮವು ಕಾರಣವೇ ಹೊರತು, ಅನ್ಯಧರ್ಮವು ಪಾಪಮಯವಾದದ್ದೆಂಬ ತಿಳುವಳಿಕೆಯಿದ್ದದರಿಂದಲೂ ಹಿಂದುಸ್ತಾನದಲ್ಲಿಯ ಮುಸಲ್ಮಾನರ ಇತಿಹಾಸದ ಬಹುದೊಡ್ಡಭಾಗವು ಕೊಲೆ, ಸುಲಿಗೆ, ಧರ್ಮಛಲ, ಮನಸ್ತಾಪ, ಕಪಟಾಚರಣೆ, ದಂಗೆ, ಬಂಡು, ಕಾಳಗ, ಯುದ್ಧ, ಹಿಂಸೆ, ಮೂರ್ಖತನ, ಅಹಂಕಾರ, ಅವಿಶ್ವಾಸ, ಮುಂತಾದ ಹಲವು ದುರ್ವಿಷಯಗಳಿಂದ ತುಂಬಿಹೋಗಿದೆ.

೫ ಸಮಾಜದ ಬಲವೃದ್ಧಿಗೆ ಧರ್ಮದಿಂದಾಗುವ ಸಹಾಯವು.

ಮನುಷ್ಯಜಾತಿಯು ಆರಂಭದ ಕಾಲದಿಂದ ವಿಚಾರಮಾಡಿ ನೋಡಿದರೆ, ಧರ್ಮವು ಮನುಷ್ಯನನ್ನು ಬಿಟ್ಟಿರುವದಿಲ್ಲ. ಮನುಷ್ಯನು ಹಿಮಾಲಯದ ದಕ್ಷಿಣಕ್ಕಿರುವ ಧನಧಾನ್ಯ ಸಮೃದ್ಧವಾದ ಹಿಂದುಸ್ತಾನದಲ್ಲಿ ಇರಲಿ, ಆಫ್ರಿಕೆಯೊಳಗಿನ ಸಹರಾ ಅರಣ್ಯದಲ್ಲಿರಲಿ, ಅಮೇರಿಕೆಯಂಥ ನೂತನ ವಸತಿಯ ಪ್ರದೇಶದಲ್ಲಿ ಇರಲಿ, ಚೀನದಂಥ ಪ್ರಾಚೀನ ರಾಷ್ಟ್ರದಲ್ಲಿರಲಿ, ಸೈಬೀರಿಯವೆಂಬ ಶೀತಕಟಬಂಧ ಪ್ರದೇಶದಲ್ಲಿರಲಿ, ಗಿನಿಯೆಂಬ ಉಷ್ಣಕಟಿಬಂಧದೊಳಗಿನ ನಾಡೊಳಗಿರಲಿ, ಎಲ್ಲಿದ್ದರೂ ಆತನನ್ನು ಧರ್ಮವೊಂದು ಅಂಟಿಕೊಂಡಿರುವದು. ವಿಚಾರಮಾಡಿದರೆ ಮನುಷ್ಯಜಾತಿಯ ಇತಿಹಾಸವು ಧರ್ಮದಲ್ಲಿಯೇ ಬೀಜರೂಪವಾಗಿರುವದೆಂದು ತಿಳಿಯುವದು. ಅತಿ ಪ್ರಾಚೀನಕಾಲದಿಂದ ಧರ್ಮವೇ ಮನುಷ್ಯನಿಗೆ ಮಾರ್ಗದರ್ಶಕವಾಗಿರುವದು. ಇನ್ನು ಮುಂದಾದರೂ ಮಾರ್ಗದರ್ಶಕವಾಗುವದು.

'ಧರ್ಮ,ಶಬ್ದಕ್ಕೆ ನಿಶ್ಚಿತವಾದ ವ್ಯಾಖ್ಯೆಹೇಳುವದು ಸುಲಭವಲ್ಲ. ಜರ್ಮನ್ ತತ್ವಜ್ಞಾನಿಯಾದ ಕಾಂಟನು "ಶುದ್ಧವಾದ ಕರ್ತವ್ಯ ಕರ್ಮವೇ ಈಶ್ವರಾಜ್ಞೆ

ಯೆಂದು ನಂಬುವದೇ ಧರ್ಮವೆಂದು ಹೇಳುವನು. ಆರ್ಯ ತತ್ವಜ್ಞಾನಿಗಳು "ಏಷ ಧರ್ಮಃಸನಾತನಃ, ಎಂದು ಹಲವು ಬಗೆಯ ವಿಚಾರಗಳನ್ನು ಧರ್ಮದಲ್ಲಿ ಸಮಾವೇಶ ಮಾಡಿದ್ದಾರೆ. ಹೀಗಿದ್ದರೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಧರ್ಮಗಳು ಪ್ರಚಲಿತವಾಗಿರುವವು. ಅವೆಲ್ಲವುಗಳಲ್ಲಿ ಒಂದು ಮಾತ್ರ ಸರ್ವಸಾಧಾರಣವಾಗಿ ಕಂಡುಬರುತ್ತದೆ. ಹಿಂದೂ-ಕ್ರಿಸ್ತೀ-ಮುಸಲ್ಮಾನೀ-ಪಾ-ರಸೀ ಮುಂತಾದ ಬೇಕಾದ ಧರ್ಮಗಳಲ್ಲಿ ನೋಡಿದರೂ ಅವುಗಳೊಳಗಿನ ಕೆಲವು ಸಂಗತಿಗಳು ಶ್ರದ್ಧೆಯಿಂದ ಮಾತ್ರ ನಂಬತಕ್ಕವುಗಳಿರುವವು. ಅಂಥ ಸಂಗತಿಗಳು ಬುದ್ಧಿಗೆ ಮೀರಿರುತ್ತವೆ. ಬುದ್ಧಿಯು "ಇಂಥ ಸಂಗತಿಯು ಅಶಕ್ಯವು" ಎಂದು ಹೇಳುತ್ತಿರುವಾಗ ಶ್ರದ್ಧೆಯು "ಇದು ಶಕ್ಯವು" ಎಂದು ಹೇಳುತ್ತದೆ. ಅಂದರೆ ಬುದ್ಧಿಗೆ ನಿಲುಕದಂಥ, ಬುದ್ಧಿಗೆ ವಿರುದ್ಧವಾದಂಥ ಎಷ್ಟೋ ಸಂಗತಿಗಳು ಧರ್ಮದಲ್ಲಿ ಇರುತ್ತವೆ. ಸತ್ತವರು ಮೇಲಕ್ಕೇಳುವದು ಬುದ್ಧಿಗೆ ಶಕ್ಯವಾಗಿ ತೋರುವದಿಲ್ಲ. ಆದರೆ ಕ್ರಿಸ್ತೀಧರ್ಮದಲ್ಲಿಯೂ ಹಿಂದೂ ಸಾಧುಗಳ ಮಹಿಮೆಯಲ್ಲಿಯೂ ವರ್ಣಿಸಿರುವದನ್ನು, ಆಆ ಧರ್ಮದವರು ಶ್ರದ್ಧೆಯಿಂದ ನಂಬಿಯೇ ನಂಬುವರು. ತಿಳುವಳಿಕೆಗೆ ಅಗಮ್ಯವಾದ, ಸಾರಾಸಾರ ವಿಚಾರವನ್ನು ಮೂಲೆಗೊತ್ತುವ, ಕಾರ್ಯಕಾರಣ ಭಾವವನ್ನು ಮೀರಿದ ಹಲವು ಸಂಗತಿಗಳು ಪ್ರತಿಯೊಂದು ಧರ್ಮದಲ್ಲಿ-ಯೂ ರೂಢವಾಗಿರುತ್ತವೆ. ಬಹುಶಃ ಎಲ್ಲ ಧರ್ಮಗಳು ಈ ಬಗೆಯ, ಅಂದರೆ ಪ್ರಜ್ಞೆಗೆ ಅಗೋಚರವಾಗಿರುವ ತತ್ವಗಳ ಮೇಲೆ ರಚಿಸಲ್ಪಟ್ಟಿರುತ್ತವೆ. ಅಂಥ ತತ್ವಗಳಿಲ್ಲದ ಧರ್ಮವೇ ಇಲ್ಲೆಂದರೂ ಸಲ್ಲುವದು. ಇಜಿಪ್ತದ ಧರ್ಮದಲ್ಲಿ ಮೃತಜನರ ಆತ್ಮದ ಉಪಾಸನೆಯು ಮುಖ್ಯವಾಗಿರುವದು. ಅಸೀರಿಯದ ಜನರು ಪುನರ್ಜನ್ಮವನ್ನೂ ಬೇರೆ ಹಲವು ದೇವತೆಗಳ ಉಪಾಸನೆಯನ್ನೂ ಧರ್ಮದ ಅಂಗಗಳೆಂದು ತಿಳಿದಿದ್ದರು. ಸುಧಾರಣೆಯು ಶಿಖರಕ್ಕೆ ಮುಟ್ಟಿದ ಗ್ರೀಸ-ರೋಮಗಳ ಧರ್ಮದಲ್ಲಿಯೂ ಮರಣಹೊಂದಿದ ಪೂರ್ವಜರ ಉಪಾಸನೆ ಇದ್ದೇ ಇತ್ತು. ಈ ಕಾಲದಲ್ಲಿ ಜಗತ್ತಿನ ಬಹುದೊಡ್ಡ ಭಾಗದಮೇಲಿರುವ ಬೌದ್ಧಧರ್ಮವು 'ಕರ್ಮ' ವೆಂಬ ಶಬ್ದದಿಂದ ಬೋಧವಾಗುವ ಕಲ್ಪನೆಯಮೇಲೆ ಸ್ಥಾಪಿಸಲ್ಪಟದೆ. ಈ ಜನ್ಮದಲ್ಲಿ ಆಗುವ ಸುಖ-ದುಃಖಗಳು ಪೂರ್ವಕರ್ಮದ ಫಲವೆಂದು ಆ ಧರ್ಮದಲ್ಲಿ ಹೇ-ಳಿದೆ. ಹಿಂದೂಧರ್ಮದ ಬಗ್ಗೆಯಂತೂ ಹೇಳಲಿಕ್ಕೇ ಬೇಡ, ಪುನರ್ಜನ್ಮ, ಜೀವ-ಶಿವರ ಐಕ್ಯ, ಜೀವೇಶ್ವರರಭೇದ, ಮುಕ್ತಿಯ ಪ್ರಕಾರಗಳು, ಸ್ವರ್ಗ-ನರಕಾದಿಗಳ ವರ್ಣನೆ, ಮುಂತಾದ ಅಸಂಖ್ಯ ಸಂಗತಿಗಳು ಶ್ರದ್ಧೆಯಿಂದ ನಂಬತಕ್ಕವುಗಳಿ

ರುವವು. ಕ್ರಿಸ್ತೀಧರ್ಮದ ದಶಾಜ್ಞೆಗಳನ್ನು ಓದಿ ನೋಡಿದರೆ ಸಾಕು. ಅವುಗಳೊಳಗಿನವೈದು, ಐಹಿಕ ವಿಚಾರಕ್ಕೂ, ಬೇರೆ ಐದು ಪಾರತ್ರಿಕ ವಿಚಾರಕ್ಕೂ ಸಂಬಂಧಿಸಿದವುಗಳೆಂದು ಕೂಡಲೆ ಗೊತ್ತಾಗುವದು. ಒಟ್ಟನಿಂದ ಇತ್ಯರ್ಥವೇನಂದರೆ-ಈಗ ಪ್ರಚಲಿತವಾಗಿರುವ, ಇಲ್ಲವೆ ಪ್ರಾಚೀನಕಾಲದಲ್ಲಿದ್ದು ಈಗ ಲುಪ್ತವಾಗಿರುವ ಸುಧಾರಿಸಿದ ಇಲ್ಲವೆ ಕಾಡುಸ್ಥಿತಿಯಲ್ಲಿರುವ, ಯಾವಬಗೆಯ ಧರ್ಮದಲ್ಲಿಯಾದರೂ ಬುದ್ಧಿ ಗ್ರಾಹ್ಯವಲ್ಲದ ಅತೀಂದ್ರಿಯ ತತ್ವಗಳುಂಟೇ ಉಂಟು. ಹಾಗು ಅಂಥ ತತ್ವಗಳೇ ಧರ್ಮದ ಪ್ರಧಾನಭಾಗಗಳಾಗಿರುವವು. ಇಂತಹ ತತ್ವಗಳಿಗೇ ಪ್ರಜ್ಞಾತೀತ-ತತ್ವಗಳೆಂತಲೂ ದೈವಿಕ ತತ್ವಗಳೆಂತಲೂ ಈಶ್ವರ ಪ್ರಣೀತ ವಿಷಯವೆಂತಲೂ ತಿಳಿದು ಆಆ ಧರ್ಮಗಳನ್ನು ಶ್ರದ್ಧೆಯಿಂದ ನಂಬುವರು.

ಆದರೆ ಎಷ್ಟೋ ವಿದ್ವಾಂಸರು ಧರ್ಮದ ಈ ಪ್ರಜ್ಞಾತೀತ ತತ್ವಗಳನ್ನು ಅಲ್ಲಗಳೆಯಲಿಕ್ಕೆ ಯತ್ನಿಸುತ್ತಾರೆ. ಬುದ್ಧಿಯ ಒರೆಗಲ್ಲಿಗೆ ತಿಕ್ಕಿನೋಡಿ, ಯೋಗ್ಯವೆಂದು ಕಂಡುಬಂದ ಸಂಗತಿಗಳನ್ನು ಮಾತ್ರ ನಂಬತಕ್ಕದ್ದೆಂತಲೂ, ಉಳಿದವುಗಳನ್ನು ಪವಿತ್ರಗ್ರಂಥಗಳಲ್ಲಿರುವವೆಂಬದಿಷ್ಟೇ ಕಾರಣದಿಂದ ನಂಬಬಾರದೆಂತಲೂ ಅನ್ನುತ್ತಾರೆ. ಇಷ್ಟೇ ಅಲ್ಲ, ಬುದ್ಧಿಗ್ರಾಹ್ಯವಲ್ಲದ ಸಂಗತಿಗಳನ್ನೆಲ್ಲ ಕಿತ್ತುಹಾಕಿ ಬೇರೆ ಸಮಾಜಗಳನ್ನು ಸ್ಥಾಪಿಸುತ್ತಾರೆ. ಹಿಂದುಸ್ಥಾನದಲ್ಲಿ ಪ್ರಾರ್ಥನಾಸಮಾಜ, ಬ್ರಹ್ಮೋಸಮಾಜ, ಆರ್ಯಸಮಾಜ, ಮುಂತಾದವುಗಳು ಇಂಥ ಜನರಿಂದಲೇ ಉಂಟಾಗಿವೆ. ಆದರೆ ಅವು ಕೊನೆತನಕ ಸಮಾಜವಾಗಿರತಕ್ಕವೇ ಹೊರತು, ಧರ್ಮವೆನಿಸಿಕೊಳ್ಳಲಾರವು. ಧರ್ಮದ ಉಜ್ವಲ ಹಾಗು ಭವ್ಯಸ್ವರೂಪವು ಅವಕ್ಕೆ ಎಂದೂ ಬರಲಾರದು. ಹಾಗು ಜನರನ್ನು ವಶಮಾಡಿಕೊಳ್ಳುವ ಸಾಮರ್ಥ್ಯವು ಅವುಗಳಿಗೆ ಉಂಟಾಗಲಾರದು.

ವ್ಯಕ್ತಿಯ ಮನಃಪ್ರವೃತ್ತಿಯು ಸ್ವಾಭಾವಿಕವಾಗಿ ಸ್ವಹಿತ ತತ್ಪರವಾಗಿರುತ್ತದೆ. ಸ್ವಹಿತವನ್ನು ಹೆಚ್ಚುಕಡಿಮೆಮಾನದಿಂದ ಆಹುತಿ ಹಾಕಿದ ಹೊರತು ಸಮಾಜ ಹಿತವು ಸಾಧಿಸಲಾರದು. ಸ್ವಹಿತ ನಿರಪೇಕ್ಷತೆಯು ಹೆಚ್ಚುತ್ತ ಹೋದಂತೆ ಸಮಾಜ ಹಿತವು ಹೆಚ್ಚೆಚ್ಚಾಗುತ್ತ ಹೋಗುವದು. ಸ್ವಹಿತ ಸಾಧಿಸಿಕೊಳ್ಳುವ ಬುದ್ಧಿಯನ್ನು ಬದಿಗೊತ್ತಿ, ಎಂಥ ಎಡರುಗಳಿಗಾದರೂ ಎದೆಗುಂದದೆ, ಮರಣಪ್ರಾಯವಾದ ಗಂಡಾಂತರಗಳಿಗೆ ತಲೆಗೊಟ್ಟು, ಸಮಾಜ ಹಿತವನ್ನು ಸಾಧಿಸುವದೇ ಮನುಷ್ಯ ಜನ್ಮವೆತ್ತಿದ್ದಕ್ಕೆ ಸಾರ್ಥಕ್ಯವೆಂದು ಬಗೆದು, ಎಷ್ಟೋ ಮಹಾತ್ಮರು ಸಮಾಜದಲ್ಲಿದ್ದ ಅನಾಚಾರಗಳನ್ನು ಮೂಲೆಗೊತ್ತಿ, ನೀತಿಯನ್ನು ನೆಲೆ

ಗೊಳಿಸಿ, ಪರಹಿತೈಕ ಬುದ್ಧಿಯನ್ನು ಜಾಗ್ರತಗೊಳಿಸಿ, ಕೀರ್ತಿಹೊಂದಿದರು. ಅವರೇ ಧರ್ಮಸ್ಥಾಪಕರು! ಅವರು ಉದಾತ್ತವಾದ ಆಚರಣೆಯುಳ್ಳವರಾಗಿ ಹೊರಗೆ ಡವಿದ ಉತ್ತಮೋತ್ತಮ ವಿಚಾರಗಳ ಸಂಗ್ರಹವೇ ಧರ್ಮವು. ಇಂಥ ಮಹಾತ್ಮರ ದೈವೀತೇಜಸ್ಸುಳ್ಳ ಧರ್ಮದಿಂದ-ಉಸುಕಿನ ಬಿಡಿಕಣಗಳು ಕರಗಿ, ಹೊಳೆಯುವ ಘನವಾದ ಕಾಜು ಆಗುವಂತೆ-ಮಾನವ ಜಾತಿಯು ಬಹುದೊಡ್ಡ ಸಮಾಜವು ಏಕ ಜೀವತೆಯನ್ನೂ ತೇಜಸ್ಸನ್ನೂ ಪಡೆದಿರುವವು. ಧರ್ಮವಿಲ್ಲದಿದ್ದರೆ, ವ್ಯಕ್ತಿಗಳ ಸ್ವಹಿತೈಕ ಬುದ್ಧಿಯಿಂದ ಗೊಂದಲವೆದ್ದು "ಉತ್ಸೀದೇಯುರಿಮೇ ಲೋಕಾಃ "ಎಂಬ ಸ್ಥಿತಿಯುಂಟಾಗುತ್ತಿತ್ತು. ಇದರಿಂದ ನೋಡಲು, ಸಮಾಜ-ಬಲ-ವೃದ್ಧಿಗೆ ಧರ್ಮವು ಅತ್ಯವಶ್ಯವೆಂಬ ಮಾತು ಸ್ಪಷ್ಟವಾಗುತ್ತದೆ.

ಕ್ರಿಸ್ತೀ ಧರ್ಮವು, ರೋಮರಾಜ್ಯವು ಮುರುಕಳಿಗೆಬಂದ ಕಾಲದಲ್ಲಿ ಉದಯವಾಯಿತು. ಸಾಮ್ರಾಜ್ಯದಲ್ಲಿ ಅನಾಯಕತ್ವವುಂಟಾಗಿ ಯುರೋಪಿಯನ್ ಸಮಾಜವು ತೀರ ಶಿಥಿಲವಾಗಿತ್ತು. ಅದರಲ್ಲಿ ಹಲವು ಬಗೆಯ ಅನಾಚಾರಗಳು ನೆಲೆಗೊಂಡವು. ಇಂಥ ವೇಳೆಯಲ್ಲಿ ಮಹಾತ್ಮನಾದ ಏಸುವು ಮೈದೋರಿದನು. "ಪ್ರೇಮ ತೋರಿಸಿ ದ್ವೇಷವನ್ನು ನಾಶಪಡಿಸಬೇಕು. ಒಂದು ಗಲ್ಲಕ್ಕೆ ಹೊಡೆದರೆ ಮತ್ತೊಂದು ಗಲ್ಲವನ್ನು ಮುಂದೆಮಾಡಬೇಕಲ್ಲದೆ ಕೈಯೆತ್ತಬಾರದು. ಪಾಮರರ ಉದ್ಧಾರಮಾಡಲಿಕ್ಕೆ ಮರಣವನ್ನಾದರೂ ಲೆಕ್ಕಿಸಬಾರದು"ಎಂಬ ಅದ್ವಿತೀಯ ಪರಹಿತತತ್ಪರತೆಯನ್ನು ಬೋಧಿಸಿದನು, ಇಷ್ಟೇ ಅಲ್ಲ, ಪಾಪಿಗಳ ಪಾಪನಿವಾರಣೆಗಾಗಿ ಭಯಂಕರ ಯಾತನೆಯನ್ನೂ, ಕೊನೆಗೆ ಶೂಲಕ್ಕೇರಿ ಮರಣವನ್ನೂ ಕೈಕೊಂಡನು. ಸ್ವಹಿತನಿರಭಿಲಾಷೆಯ ಪರಮಾವಧಿಯು ಇದೇ. ಅಂತೇ ಕ್ರಿಸ್ತೀಧರ್ಮವು ಹಬ್ಬುತ್ತ ನಡೆದಂತೆ ಯುರೋಪಿಯನ್ ಸಮಾಜವು ಸ್ಥಿರತ್ವವನ್ನು ಪಡೆಯಿತು; ಪರಹಿತತತ್ಪರವಾಯಿತು. ಭೂತದಯೆಗೆ ಮನಸು ಹಾಕಿತು. ಅಳತೆಮೀರಿ ಆಗುವ ಹಾನಿಯನ್ನು ಸಂತೋಷದಿಂದ ಸಹಿಸಿ ಇಂಗ್ಲಂಡವು ಗುಲಾಮರ ವ್ಯಾಪಾರವನ್ನು ನಿಲ್ಲಿಸಿದ್ದೂ, ಬಡಕೂಲಿಕಾರರ ಹಿತಕ್ಕಾಗಿ ಪೆನ್‌ಶನ್ನಿನ, ವಿಮೆಯ ಕಾಯದೆಗಳನ್ನು ಮಾಡಿದ್ದೂ, ಹುಂಜಗಳ ಕಾದಾಟ, ಹೊಡುವ ದನಗಳ ಜೋಪಾನ, ಇವುಗಳ ಬಗ್ಗೆ ಕಟ್ಟಳೆಮಾಡಿದ್ದೂ, ಸಹಗಮನ, ಶಿಶುವಧೆಗಳನ್ನು ನಿಲ್ಲಿಸಿದ್ದೂ ಕ್ರಿಸ್ತೀ ಧರ್ಮದ ಪರಹಿತಬುದ್ಧಿಯ ಫಲಗಳೆಂದು ಪರಂಪರೆಯಿಂದಾದರೂ ಒಪ್ಪಿಕೊಳ್ಳತಕ್ಕ ಸಂಗತಿಗಳಾಗಿರುತ್ತವೆ. ಸಂಪತ್ತಿನ ಆಶೆಯಿಂದ ಸ್ಪೇನ ಮುಂತಾದ ಕೆಲವು ಕ್ರಿಸ್ತೀ ರಾಷ್ಟ್ರಗಳು ಅತಿಕ್ರೂರ ಕೃತ್ಯಮಾಡಿದವು. ಅವು ಧರ್ಮವಿರುದ್ಧ ನಡೆದ ಪಾಪದ ಫಲ

ದಿಂದಲೋ ಏನೋ, ಈಗ ತೀರ ದುರ್ಬಲತೆಯನ್ನು ಹೊಂದಿರುವವು.

ಕಪಿಲಮುನಿಯು ವೈದಿಕಋಷಿಯು; ಅವನ ತತ್ವಗಳು ವೇದಧರ್ಮದ ತೇಜಸ್ಸಿನ ಕಾಲದಲ್ಲಿ ಅದರ ಒಂದು ಅಂಗವಾಗಿದ್ದವು. ಆದರೆ ವೈದಿಕ ಧರ್ಮದಲ್ಲಿ ತೇಜಸ್ಸು ಕಡಿಮೆಯಾಗಿ ಅದರ ಸಂಶೋಧನೆಯು ಅಗತ್ಯ ತೋರಲು, ಕಪಿಲ ಮುನಿಯು ತತ್ವಗಳಿಗೆ ಕಳೆಯೇರಿತು. ಗೌತಮ ಬುದ್ಧನು ಅವುಗಳಲ್ಲಿ ಒಳ್ಳೇ ತೇಜಸ್ಸನ್ನುಂಟುಮಾಡಿದನು. ಸ್ವತಃ ಗೌತಮನು ಐಹಿಕ ಸುಖದ ಪರಮಾವಧಿಯೆನಿಸುವ ರಾಜ್ಯಪದವನ್ನು ಧಿಕ್ಕರಿಸಿದನು. ಹೆಂಡತಿಯ ವ್ಯಾಮೋಹವನ್ನು ಹರಿದು ಚಲ್ಲಿದನು, ಪುತ್ರಪ್ರೇಮಪಾಶವನ್ನು ಕಡಿದು ಹಾಕಿದನು. ಸತ್ಯಶೋಧದ ಕಾರ್ಯದಲ್ಲಿ ಸಂಪೂರ್ಣಪ್ರೇಮ ತಾಳಿ ಯಾವ ಕಷ್ಟಕ್ಕೂ ಹೆದರದೆ ಕೊನೆಯಲ್ಲಿ ಸತ್ಯವನ್ನು ಕಂಡುಕೊಂಡನು. ಬಳಿಕ ಸಾತ್ವಿಕ ಧರ್ಮೋಪದೇಶ ಮಾಡುತ್ತ ಹಿಂದುಸ್ತಾನದಲ್ಲಿ ಬೌದ್ಧಧರ್ಮವನ್ನು ನೆಲೆಗೊಳಿಸಿದನು. ಎಷ್ಟೋ ರಾಜರೂ ರಾಜೇಶ್ವರರೂ ಬೌದ್ಧಧರ್ಮವನ್ನು ಸ್ವೀಕರಿಸುವಂತೆ ಮಾಡಿದನು. ಪರದೇಶಗಳಲ್ಲಿ ತನ್ನ ಧರ್ಮವನ್ನು ಹಬ್ಬಗೊಳಿಸಲಿಕ್ಕೆ ಒಂದೇ ದಿನ ಎರಡು ಸಾವಿರ ಜನ ಭಿಕ್ಷುಗಳನ್ನು ಕಳಿಸಿಕೊಟ್ಟನು! ಹೀಗೆ ಹಿಂದೀಸಮಾಜವು ಉಜ್ಜ್ವಲಸ್ಥಿತಿಹೊಂದಿತು. ಧರ್ಮದ ಬಗ್ಗೆ ತಳಮಳಿಸುತ್ತಿದ್ದ ಚೀನ, ಜಪಾನ, ಮುಂತಾದ ದೇಶದವರು ಸಂಪೂರ್ಣ ತೃಪ್ತಿಯನ್ನೂ ಮನಃ ಶಾಂತಿಯನ್ನೂ ಹೊಂದಿದರು.

ಮಹಮ್ಮದ ಪೈಗಂಬರರು ಹುಟ್ಟುವದಕ್ಕಿಂತ ಮೊದಲು ಅರಬರ ದುರ್ನಡತೆಗಳಿಗೆ ಸೀಮೆಯೇ ಇದ್ದಿಲ್ಲ. ನಿರಂತರ ಕಲಹ, ಸುಲಿಗೆ, ಬಡಿದಾಟಗಳಿಂದ ಅರಬಸ್ತಾನವು ತುಂಬಿಹೋಗಿತ್ತು. ಆದರೆ ಮಹಮ್ಮದ ಪೈಗಂಬರರ ಜ್ಞಾನಾಗ್ನಿಯ ಕಣವು ಅರಬಸ್ತಾನದ ಉಸುಬಿನ ಬೈಲಿನಮೇಲೆ ಬಿದ್ದಕೂಡಲೆ ಹರವಿಟ್ಟ ಮದ್ದಿಗೆ ಬೆಂಕಿ ಹತ್ತಿದಂತಾಗಿ, ಒಮ್ಮೆಲೆ ಭಯಂಕರ ಗರ್ಜನೆಮಾಡಿ, ತೇಜಸ್ಸಿನಿಂದ ಉರಿಯಹತ್ತಿ ಇಡಿ ಪೂರ್ವಗೋಲಾರ್ಧವನ್ನು ದಂಗುಬಡಿಸಿತು. ಅದರ ಪ್ರಖರ ತೇಜಸ್ಸಿನಲ್ಲಿ ಏಶಿಯಾ ಯುರೋಪ ಖಂಡಗಳ ದಕ್ಷಿಣಕ್ಕಿರುವ ರಾಷ್ಟ್ರಗಳು ಹುರುಪಳಿಸಿ ಹೋದವು. ಅರಬರಲ್ಲಿ ಹಾಗು ಮಹಮ್ಮದ ಪೈಗಂಬರರ ಅನುಯಾಯಿಗಳಲ್ಲಿ ಬಲವನ್ನೂ, ತೇಜಸ್ಸನ್ನೂ ಉಂಟುಮಾಡಲಿಕ್ಕೆ, ಮುಸಲ್ಮಾನೀ ಧರ್ಮವೇ ಕಾರಣವೆಂದು ಹೊಸದಾಗಿ ಹೇಳಬೇಕಾಗಿಲ್ಲ.

ಸ್ವಹಿತ ನಿರಪೇಕ್ಷತೆ, ಪರಹಿತತತ್ಪರತೆಗಳ ಬಗ್ಗೆ ಶ್ರೀ ಮಚ್ಛಂಕರಾಚಾರ್ಯರು ಬಹುಪ್ರಸಿದ್ಧರು. ಬೌದ್ಧಧರ್ಮದ ಭೂತದಯೆ, ಜನಸೌಹೃದ-ಮನೋನಿಗ್ರಹ

ಗಳು ಗೌಣವಾಗಿ ಹಿಂದೆ ಬಿದ್ದವು, ಭಿಕ್ಷುಗಳ ಸಂಖ್ಯೆಯೇ ಮಿತಿಮೀರಿ ಬೆಳೆಯಿತು, ಗೃಹಸ್ಥವರ್ಗದ ಮೇಲೆಯೇ ಭಿಕ್ಷುಗಳ ಸಂರಕ್ಷಣೆಯ ಭಾರವು ಹೆಚ್ಚಾಗಿ ಬಿತ್ತು. ಅದರಿಂದ ಹಿಂದೀ ಸಮಾಜವು ಮತ್ತೆ ಕೀಳ್ದೆಸೆಹೊಂದಿತು. ಅದರಿಂದ ಧರ್ಮ ಸಂಶೋಧನವು ಮತ್ತೆ ಅವಶ್ಯವಾಯಿತು. ಆಗ ಶ್ರೀ ಮಚ್ಛಂಕರಾಚಾರ್ಯರು, ಸಮಾಜದ ವ್ಯವಸ್ಥೆಮಾಡಲಿಕ್ಕೆ ಕಂಕಣ ಬದ್ಧರಾದರು. ಅವರು ಲಗ್ನ ಮಾಡಿ ಕೊಳ್ಳುವದನ್ನು ಧಿಕ್ಕರಿಸಿದರು. ಬೌದ್ಧರ ತತ್ವಜ್ಞಾನವು ಮಧ್ಯಮತರದ್ದೆಂತಲೂ, ವೈದಿಕ-ತತ್ವಜ್ಞಾನವೇ ಶ್ರೇಷ್ಠವಾದದ್ದೆಂತಲೂ ಅವಿಶ್ರಾಂತ ಶ್ರಮಪಟ್ಟು ಸಿದ್ಧಪಡಿಸಿದರು. ಶ್ರೀ ಶಂಕರಾಚಾರ್ಯರುಂಟಾಗದಿದ್ದರೆ, ಹಿಂದೂ ಧರ್ಮಕ್ಕೆ ಈಗಿರುವ ಪ್ರಾಚೀನ ಪರಂಪರೆಯು ಕಡಿಕಳಚಿದ ಸರಪಳಿಯಂತೆ ಇಲ್ಲದಾಗುತ್ತಿತ್ತು. ಅವರ ತರುವಾಯ ನಾನಕ, ಚೈತನ್ಯ, ಶ್ರೀ ಮಧ್ವಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಬಸವೇಶ್ವರ ಮುಂತಾದ ಮಹಾತ್ಮರು ವೈದಿಕ ತತ್ವಗಳನ್ನೇ ಅನುಸರಿಸಿ, ತಮ್ಮ ತಮ್ಮ ಅನುಯಾಯಿಗಳಲ್ಲಿ ಸುನೀತಿ-ಸದಾಚರಣೆಗಳನ್ನು ನೆಲೆಗೊಳಿಸಲಿಕ್ಕೆ ಅತರ್ಕ್ಯವಾದ ಸಾಹಸಮಾಡಿ ಹೃದಯದಲ್ಲಿ ಈಗ ಸಹ ವಾಸಿಸುತ್ತಾರೆ. ಅವರ ನಿಂದೆಯು ಅವರ ಅನುಯಾಯಿಗಳಲ್ಲಿ ವಿಲಕ್ಷಣ ತ್ವೇಷವನ್ನೂ, ಸಂತಾಪವನ್ನೂ, ದುಃಖವನ್ನೂ ಇಂಡಿಗೂ ಉಂಟು ಮಾಡುತ್ತಲಿದೆ.

ಹೀಗೆ ಜಗದೊಳಗಿನ ಯಾವ ಸಮಾಜಲ್ಲಿ ನೋಡಿದರೂ ಧರ್ಮವು ಸಮಾಜದ ಬಲವೃದ್ಧಿಗೆ ಮುಖ್ಯ ಕಾರಣವಾಗಿರುವದೆಂಬ ಮಾತು ನಿದರ್ಶನಕ್ಕೆ ಬರುತ್ತದೆ.

(೬) ಭಾರತರಾಮಾಯಣ ಕಾಲದಸಮಾಜ ಸ್ಥಿತಿ.

ಮನುಷ್ಯಜಾತಿಯು ತೀರ ಕಾಡುಸ್ಥಿತಿಯಿಂದ, ಈಗಿನ ಉತ್ತಮ ಪರಿಣತ ಸ್ಥಿತಿಯನ್ನು ಪಡೆದ ಕೆಲಸದಲ್ಲಿ ಪ್ರಾಚೀನ ಗ್ರಂಥಗಳು ಸರ್ವೋತ್ಕೃಷ್ಟ ಸಹಾಯಕಾರಿಗಳಾಗಿರುತ್ತವೆ. ಹಿಂದೂ ಸಮಾಜಕ್ಕೆ ಅತ್ಯಂತ ಪ್ರಿಯವಾದ ಮಹಾಭಾರತ ರಾಮಾಯಣಗಳೆಂಬ ಪ್ರಾಚೀನ ಗ್ರಂಥಗಳಂತೆ ಆರ್ಯಾವರ್ತದ ಮೇಲೆ ಮಾಡಿರುವ ಚಿರಸ್ಥಾಯಿಯಾದ ಪರಿಣಾಮವನ್ನು ಬೇರೆ ಯಾವ ಗ್ರಂಥಗಳೂ ಮಾಡಿರಲಿಕ್ಕಿಲ್ಲ. ಹಿಂದುಸ್ಥಾನದ ಪ್ರಾಚೀನ ಹಾಗು ಅರ್ವಾಚೀನ ಕವಿಗಳ ಕವಿತಾ ಸ್ಫೂರ್ತಿಗೆ ಇವೇ ಎರಡು ಗ್ರಂಥಗಳು ಕಾರಣವಾಗಿರುತ್ತವೆ. ಭಾರತದಲ್ಲಿ ಬಹುತರ ಎಲ್ಲ ವ್ಯಾವಹಾರಿಕ ವಿಷಯಗಳೂ, ವೇದಾಂತ ವಿಚಾರಗಳೂ

ತುಂಬಿರುತ್ತವೆ. ಆದ್ದರಿಂದಲೇ "ಭಾರತಃ ಪಂಚಮೋ ವೇದಃ" ಎಂದು ತಿಳಿದವರು ಅನ್ನುತ್ತಾರೆ. ಎಲ್ಲ ಸದ್ಗುಣಗಳ ಪರಮಾವಧಿಯನ್ನು ತೋರಿಸುವ ರಾಮಾಯಣದ ಕಥೆಯನ್ನು ಅಸಂಖ್ಯ ಕವಿಗಳು ಬಹುವಿಧವಾಗಿ ವರ್ಣಿಸಿರುವರು. ಅಂತೇ ಕುಮಾರ ವ್ಯಾಸನು ಕನ್ನಡ ಭಾರತವನ್ನು ರಚಿಸುವಾಗ "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ..." ಎಂದು ಹೇಳಿರುವನು. ತೀರ ಅಶಿಕ್ಷಿತನಾದ ಹಿಂದೂ ಮನುಷ್ಯನಿಗೆ ಸಹ, ಭಾರತ ರಾಮಾಯಣಗಳ ಕಥೆಯು ಗೊತ್ತಿರುತ್ತದೆ. ಹರಿಶ್ಚಂದ್ರ ಚರಿತ್ರೆ, ರಾಮರಾಜ್ಯವಿಯೋಗ, ಮುಂತಾದ ಹೃದಯದ್ರಾವಕ ಕಥಾಭಾಗದಿಂದ ಕಣ್ಣೀರು ಸುರಿಸದವರು ಅಪರೂಪ. ಹಿಂದೂ ಜನರ ಚಿತ್ತವೃತ್ತಿಯಲ್ಲಿ ಚಲನವಲನವನ್ನುಂಟು ಮಾಡಲಿಕ್ಕೂ, ಅಲ್ಲೋಲ ಕಲ್ಲೋಲವಾದ ಚಿತ್ತವೃತ್ತಿಯಲ್ಲಿ ಶಾಂತಿಯನ್ನು ನೆಲೆಗೊಳಿಸಲಿಕ್ಕೂ ಭಾರತ ರಾಮಾಯಣಗಳ ಸಾಮರ್ಥ್ಯವು ಅದ್ವಿತೀಯವಾಗಿರುತ್ತದೆ.

ಈಗಿನ ಹಿಂದೂ ಸಮಾಜದಲ್ಲಿ ರೂಢವಾಗಿರುವ ಕೆಲಕೆಲವು ಆಚಾರ ವಿಚಾರಗಳು ಭಾರತ ರಾಮಾಯಣ ಕಾಲದಲ್ಲಿ ಇದ್ದವು. ಆ ಕಾಲದಲ್ಲಿ ಇದ್ದ ಕೆಲವು ಧಾರ್ಮಿಕ ಸಂಸ್ಕಾರಗಳು ಈಗಾದರೂ ಮಾಡಲ್ಪಡುತ್ತವೆ. ಹಿಂದೂ ಸಮಾಜ ಘಟನೆಯ ಬಗ್ಗೆ ಪೂರ್ಣವಾಗಿ ವಿಚಾರ ಮಾಡಬೇಕಾದರೆ, ಈಗಿನ ಸಾಮಾಜಿಕ ಪ್ರಶ್ನಗಳ ಬಗ್ಗೆ ಯೋಗ್ಯ ಊಹಾಪೋಹವಾಗಬೇಕಾದರೆ, ಈಗ ಸಮಾಜದಲ್ಲಿ ಹಲವು ಪಂಥಗಳೂ, ಒಳಭೇದಗಳೂ ಯಾಕಾಗಿರುವವೆಂಬದರ ಕಾರಣವನ್ನು ಗೊತ್ತು ಹಚ್ಚಬೇಕಾದರೆ, ಭಾರತ ರಾಮಾಯಣ ಗ್ರಂಥಗಳನ್ನು ಪರಿಶೀಲನೆ ಮಾಡಿದ ಹೊರತು ನಿರ್ವಾಹವಿಲ್ಲ.

"ಭಾರತ ರಾಮಾಯಣ ಗ್ರಂಥಗಳು ಈಗಿನ ಸ್ಥಿತಿಯನ್ನು ಒಮ್ಮೆಲೆ ಪಡೆಯಲಿಲ್ಲ, ಬೇರೆ ಬೇರೆ ಪಂಡಿತರೂ ಕವಿಗಳೂ ಬೇರೆ ಬೇರೆ ಕಾಲಗಳಲ್ಲಿ ಬೇರೆ ಪ್ರಕರಣಗಳನ್ನು ಪ್ರಕ್ಷಿಪ್ತವಾಗಿ ಸೇರಿಸಿರುವರು, ಆದ್ದರಿಂದ ಅವುಗಳಲ್ಲಿ ಸೇರಿಸಿರುವ ಸಂಗತಿಗಳು ಒಂದಾನೊಂದು ನಿಯಮಿತ ಕಾಲದಲ್ಲಿ ವರ್ತಿಸಿದವುಗಳಿರುತ್ತವೆಂದು ಎದೆ ತಟ್ಟಿಕೊಂಡು ಹೇಳಲಿಕ್ಕೆ ಬರುವಂತಿಲ್ಲ" ವೆಂದು ಕೆಲವು ಪಂಡಿತರು ಹೇಳುತ್ತಾರೆ. ಅವರ ಮಾತು ಕೆಲವಂಶದಿಂದ ನಿಜವಿರಬಹುದು. ಆದರೂ ೨-೩ ಸಾವಿರ ವರ್ಷಗಳ ಹಿಂದಿನ ಹಿಂದೂ ಸಮಾಜಸ್ಥಿತಿಯನ್ನು ಸ್ಪಷ್ಟವಾಗಿ, ವಸ್ತುಸ್ಥಿತಿಗೆ ಅನುಸರಿಸಿ, ತಿಳಿಸುವ ಸಂಬಂಧದಿಂದ ಆ ಎರಡು ಗ್ರಂಥಗಳಿಗೆ ಇರುವ ಅಧಿಕಾರವು ಎಂದಿಗೂ ಇಲ್ಲದಂತಾಗದು.

ಭಾರತ- ರಾಮಾಯಣಕಾಲದ ಸಮಾಜಸ್ಥಿತಿಯು ವಿಶದವಾಗಿ ತಿಳಿಯುವ ಡಕ್ಕೋಸ್ಕರ ಸಮಾಜಸ್ಥಿತಿಗೆ ಅನುಕೂಲವಾಗುವಂತೆ ಬೇರೆ ಬೇರೆ ಭಾಗಗಳನ್ನು ಮಾಡಿದೆ, ಆದರೆ ಇಷ್ಟೇಭಾಗಗಳೆಂದು ತಿಳಿಯತಕ್ಕದ್ದಲ್ಲ. ಹೆಚ್ಚೆಚ್ಚು ಶೋಧ ಮಾಡುವ ಪಂಡಿತರಿಗೆ ಹೆಚ್ಚೆಚ್ಚು ವಿಷಯಗಳು ತೋರಬಹುದು. ಅದರಿಂದ ವಿವರಣೆಯೂ ಹೆಚ್ಚಾಗಬಹುದು.

(ಅ) ಧರ್ಮವೂ ತತ್ವಜ್ಞಾನವೂ.

ಮಹಾಭಾರತದಲ್ಲಿ ಧಾರ್ಮಿಕ ವಿಚಾರವು ಅಪಾರವಾಗಿರುತ್ತದೆ. ರಾಮಾಯಣದಲ್ಲಿ ಅಷ್ಟಿಲ್ಲ; ಆದರೂ ಎರಡೂ ಗ್ರಂಥಗಳಲ್ಲಿ ಸೃಷ್ಟಿಕರ್ತನಾದ ಪರಮೇಶ್ವರನೊಬ್ಬನೇ ಇರುತ್ತಾನೆಂದು ಹೇಳಿರುತ್ತದೆ. ಹಿಂದೂ ಜನರ ಪ್ರಮುಖ ದೇವತೆಗಳಾದ ಶಿವ, ವಿಷ್ಣು ಇವರಿಬ್ಬರಲ್ಲಿ ವಿಷ್ಣುವಿನ ಸ್ತುತಿಯು ಭಾರತದಲ್ಲಿ ವಿಶೇಷವಾಗಿರುತ್ತದೆ. ಆದರೆ ಶಿವನ ಸ್ತುತಿಯು ಇಲ್ಲೆಂತಲ್ಲ, ಸ್ವತಃ ವಿಷ್ಣುವೇ ಶಿವಸ್ತುತಿಯನ್ನು ಮಾಡಿರುವನು. ವಿಷ್ಣುವು ಬಹಳ ಕಡೆಯಲ್ಲಿ (ಯಸ್ತ್ವಾಂ ವೇತ್ತಿ ಸಮಾಂ ವೇತ್ತಿ ಯಸ್ತ್ವಾಮನು ಸಮಾಮನು । ನಾವಯೋರಂತರಂ ಕಿಂಚಿನ್ಮಾತೇ ಭೂದ್ಬುದ್ಧಿರನ್ಯಥಾ ॥ ಶಾಂತಿ ೩೪೩) "ನನಗೂ ನಿನಗೂ ಭೇದವಿಲ್ಲೆಂದು" ಶಿವನಿಗೆ ಹೇಳಿದ್ದಾನೆ. ಇದರಿಂದ ನೋಡಲು ಶೈವ ವೈಷ್ಣವ ಪಂಥಗಳ ಏಕೀಕರಣ ಮಾಡುವದೇ ಭಾರತದ ಉದ್ದೇಶವಿರಬಹುದೆಂದು ಅನುಮಾನವಾಗುತ್ತದೆ. ಆ ಕಾಲದಲ್ಲಿ ಲಿಂಗಪೂಜೆಯು ಇತ್ತು. (ಲಿಂಗಪೂಜಯಿತಾ ನಿತ್ಯಂ ಮಹತೀಂ ಶ್ರಿಯಮಶ್ನುತೇ ॥ ಅನುಶಾ. ೧೬೨-೧೬) ಬ್ರಹ್ಮ-ವಿಷ್ಣು-ಮಹೇಶ್ವರರು ಒಬ್ಬನೇ ಪರಮಾತ್ಮನ ಮೂರು ರೂಪಗಳೆಂಬ ಗ್ರಹಿಕೆಯಿತ್ತು. (ವನಪರ್ವ ೨೭೨-೪೭)

ಪರಬ್ರಹ್ಮದಿಂದ ಕ್ರಮವಾಗಿ ಆಕಾಶ, ವಾಯು, ತೇಜಸ್ಸು, ಜಲ, ಪೃಥ್ವಿಗಳೆಂಬ ಪಂಚಭೂತಗಳುಂಟಾಗಿ ಅವುಗಳ ಪಂಚೀಕರಣದಿಂದಲೇ ಯಾವತ್ತು ಜಡಸೃಷ್ಟಿಯುಂಟಾಯಿತೆಂದು ಆ ಕಾಲದಲ್ಲಿ ತಿಳುವಳಿಕೆಯಿತ್ತು. (ಶಾಂತಿ ೨೦೧।೧) ಆತ್ಮವು ಅಮರವಿರುತ್ತದೆ. ಅದು ಜೀರ್ಣದೇಹವನ್ನು ಬಿಟ್ಟು ಹೊಸದೇಹವನ್ನಾಶ್ರಯಿಸುತ್ತದೆ. ಸಂಸಾರದದಲ್ಲಿ ತೋರುವ ವಿಷಮತೆಯು ಪೂರ್ವಜನ್ಮಕೃತಕರ್ಮದ ಫಲವಿರುತ್ತದೆ, ಹೀಗೆ ತಿಳಿಯುತ್ತಿದ್ದರು. (ಕಿಷ್ಕಿಂದಾ ೨೧।೨ ಮತ್ತು ವನಪರ್ವ ೨।೩೧) ಎಲ್ಲ ಧಾರ್ಮಿಕ ಸಂಗತಿಗಳಲ್ಲಿ ವೇದಗಳ ಅಧಿಕಾರವು ಹೆಚ್ಚಿನದೆಂತಲೂ ವೇದವಾಕ್ಯಗಳನ್ನು ಶ್ರದ್ಧೆಯಿಂದ ನಂಬಬೇಕೆಂತಲೂ, ಶುಷ್ಕತರ್ಕವು

(ಬುದ್ಧಿಭೇದವನ್ನುಂಟುಮಾಡುವದರಿಂದ) ನಿರುಪಯುಕ್ತವೆಂತಲೂ, ಪರಸ್ಪರವಿರುದ್ಧವಾದ ವೇದವಾಕ್ಯಗಳಿದ್ದರೆ ಸದ್ಗುರುವಿನ ನಿರ್ಣಯವು ಪ್ರಮಾಣವಾಗಿ ತಿಳಿಯಬೇಕೆಂತಲೂ ವೇದಕ್ಕೆ ವಿರುದ್ಧವಾದ ಸ್ಮೃತಿವಚನಗಳು ತ್ಯಾಜ್ಯವೆಂತಲೂ ಸಿದ್ಧಾಂತಮಾಡಿದ್ದರು.

ಇಹ ಪರಸುಖಪ್ರಾಪ್ತಿಗಾಗಿ ಹಲವುಬಗೆಯ ಯಜ್ಞಯಾಗಗಳನ್ನು ಆಗಿನ ಜನರು ಮಾಡುತ್ತಿದ್ದರು. ವರ್ಣಾಶ್ರಮಗಳನ್ನು ಅನುಸರಿಸುವ ಪ್ರತಿಯೊಬ್ಬನು ಅವಶ್ಯವಾಗಿ ಮಾಡಬೇಕಾದ ನಿತ್ಯ ಹಾಗು ನೈಮಿತ್ತಿಕ ಕರ್ಮಗಳು ಗೊತ್ತುಮಾಡಲ್ಪಟ್ಟಿದ್ದವು. ಹೀಗಿದ್ದರೂ ಭಾರತರಾಮಾಯಣ ಕಾಲದಲ್ಲಿ ಯಜ್ಞಗಳ ಹೊರತು ಬೇರೆಸಾಧನಗಳಿಂದಲೂ ಮೋಕ್ಷದೊರೆಯುವಂತಿದೆಂದು ತಿಳಿದಂತೆ ತೋರುತ್ತದೆ. ಯಜ್ಞಯಾಗಗಳು ತೀರ ಮುಗ್ಗಿದ್ದಿಲ್ಲ. ದಶರಥರಾಯನೂ ಯುಧಿಷ್ಠಿರನೂ ಅಶ್ವಮೇಧ ಯಜ್ಞಮಾಡಿದ್ದು ಪ್ರಸಿದ್ಧವದೆ (ಬಾಲಕಾಂಡ ೧೪, ಅಶ್ವಮೇಧಪರ್ವ) ಯಜ್ಞಗಳಲ್ಲಿ ಅನ್ನಕ್ಕೆ ಮುಕ್ತದ್ವಾರವಿತ್ತು. ಸಾರ್ವಭೌಮರ ಯಜ್ಞಗಳಲ್ಲಿ ಮಾಂಡಲಿಕರು ಅತಿಥಿಸತ್ಕಾರಮಾಡುತ್ತಿದ್ದರು. ಯಜ್ಞಗಳಲ್ಲಿ ಹತವಾದ ಪಶುವು ನೆಟ್ಟಗೆ ಸ್ವರ್ಗಕ್ಕೆ ಹೋಗುತ್ತದೆಂದು ತಿಳಿದಿದ್ದರು. ಹೀಗಿದ್ದರೂ 'ಅಹಿಂಸಾ ಪರಮೋಧರ್ಮಃ, ಎಂಬ ತತ್ವವು ಪ್ರಚಾರದಲ್ಲಿ ಬರತೊಡಗಿತ್ತು. (ಅನು.೧೧೫) ಈ ತತ್ವವು ಗೌತಮ ಬುದ್ಧನಿಂದಲೇ ಪ್ರಕಟವಾಯಿತೆಂದು ಕೆಲವರು ತಿಳಿಯುತ್ತಾರೆ. ಇದು ನಿಜವಲ್ಲ. ಕರ್ಮಕಾಂಡದ ಖಟಾಟೋಪಕ್ಕೆ ಜನರು ಬೇಜಾರಗೊಂಡು ಅಹಿಂಸಾತತ್ವಕ್ಕೆ ಮನಸ್ಸನ್ನು ಬಲಿಸಿದಾಗ ಗೌತಮ ಬುದ್ಧನು ಉದಯವಾದನು.

ಸಾಧುಗಳ ರಕ್ಷಣೆಗಾಗಿ, ದುರ್ಜನರ ನಾಶಕ್ಕಾಗಿ ದೇವರು ಅವತರಿಸುವನೆಂದು ಈಗಿನಂತೆ ಆಗಾದರೂ ನಂಬುತ್ತಿದ್ದರು. (ಭೀಷ್ಮಂ ೫೫· ೫೬ಅಧ್ಯಾಯ) ಕೃಷ್ಣನು ಪರಬ್ರಹ್ಮವೆಂದು ಶಿವನು ವರ್ಣಿಸಿದ್ದಾನೆ. (ಅನುಶಾ.೧೪೭)ಭಾರತ ರಾಮಾಯಣಗಳ ಅವತಾರಗಳಲ್ಲಿ ಬುದ್ಧನ ಹೆಸರು ಇಲ್ಲ. ಈಗಿನ ದಶಾವತಾರಗಳಲ್ಲಿ 'ಹಂಸ, ವೆಂಬ ಅವತಾರದ ಹೆಸರು ಇಲ್ಲ. ರಾಮಾಯಣದಲ್ಲಿ ಬಂದ ಬುದ್ಧನ ಹೆಸರುಳ್ಳ ಶ್ಲೋಕವು ಪ್ರಕ್ಷಿಪ್ತವೆಂದು ಸ್ಪಷ್ಟವಾಗಿ ತೋರುವಂತೆ ಅದೆ. (ಅಯೋಧ್ಯ ೧೦೯।೩೪)

(ಬ) ಪ್ರಾಪಂಚಿಕಸ್ಥಿತಿಯು.

ಸ್ತ್ರೀ ಸಮಾಜವು—ಸ್ತ್ರೀನಿಂದೆಮಾಡುವ ವಾಕ್ಯಗಳು ಅಲ್ಲಲ್ಲಿ ಹೇರಳವಾಗಿ

ರುತ್ತವೆ. ಸ್ತ್ರೀಯರು ಚಂಚಲರು ಧರ್ಮಹೀನರು, ತೀಕ್ಷ್ಣರು, ಕಲಹಗಾರ್ತಿಯರು, ಸುಳ್ಳರು, ಮಾನಗೇಡಿಗಳು; ಹಿರಿಯರೂ, ಆಳುಹೋಳುಗಳೂ ನೋಡುತ್ತಿರುವದರಿಂದಲೇ ಮರ್ಯಾದೆಯಿಂದ ಬಾಳುವರು, ಇಲ್ಲದಿದ್ದರೆ ಇಲ್ಲ. (ಅಯೋಧ್ಯಾಕಾಂಡ ೧೦೮।೩ ಅರಣ್ಯಕಾಂಡ ೪೫।೨೯ ಅನುಶಾ ೩೮।೧೬)ಲಕ್ಷಕ್ಕೊಬ್ಬಳು ಪತಿವ್ರತೆಯಿರುವಳು. ಚಿಕ್ಕತನದಲ್ಲಿ ತಂದೆಯು, ಹರಯದಲ್ಲಿ ಗಂಡನು, ಮುಪ್ಪಿನಲ್ಲಿ ಮಗನು ಸ್ತ್ರೀಯನ್ನು ರಕ್ಷಿಸಬೇಕು. ಸ್ತ್ರೀಯು ಸರ್ವದಾ ಪರಾಧೀನೆಯಾಗಿಯೇ ಇತಕ್ಕವಳು; (ಅನುಶಾ ೨೦।೨೧) ಕೆಲವೆಡೆಯಲ್ಲಿರುವ ನಿಂದೆಯಂತೂ ಓದಲಿಕ್ಕೆ ಹೇಸಿಕೆ ಬರುವಷ್ಟು ಅಶ್ಲೀಲವಾಗಿರುತ್ತದೆ.

ಆದರೆ ಸ್ತ್ರೀಯರನ್ನು ಸ್ತುತಿಸುವ ವಾಕ್ಯಗಳು ಯಥೇಷ್ಟವಾಗಿರುವವು. ಸ್ತ್ರೀಯು ತಪ್ಪಿನಡೆಯಲಿಕ್ಕೆ ಪುರುಷನೇ ಕಾರಣವು. (ಶಾಂತಿ ೩೬೩।೩೮.) ಸ್ತ್ರೀಯು ನೆಮ್ಮದಿಯಿಂದ ಇದ್ದರೆ ದೇವತೆಗಳು ಸಂತೋಷಪಡುತ್ತಾರೆ. (ಅನು. ೪೬।೫) ಅಭ್ಯುದವನ್ನು ಬಯಸುವವನು ಸ್ತ್ರೀಯನ್ನು ಮನ್ನಿಸಬೇಕು. ಸ್ತ್ರೀಯನ್ನು ರಕ್ಷಿಸಿದರೆ ಆಕೆ ಪ್ರತ್ಯಕ್ಷ ಲಕ್ಷ್ಮಿಯಾಗುತ್ತಾಳೆ. ತಾಯಿಯು ೧೦ಜನ ತಂದೆಗಳಿಗಿಂತ ಅಥವಾ ಭೂಮಿಗಿಂತ ದೊಡ್ಡವಳು, ಸರ್ವಶ್ರೇಷ್ಠಳು. ಶರಣಾಗತ ವತ್ಸಲಳು, ತಂಪಾದ ನೆರಳಿನಂತಿರುವವಳು, ಇರುವಳು. (ಶಾಂತಿ ೩೬೩।೩೧) ಗಂಡಹೆಂಡಿರ ವರ್ಣನೆಯು ಉದಾತ್ತವಿರುವದು. ಹೆಂಡತಿಯು ಗಂಡನ ಅರ್ಧ ದೇಹವು, ಆಕೆ ಗಂಡನ ಮಿತ್ರನೂ ಧರ್ಮಾರ್ಥಕಾಮಗಳಿಗೆ ಮೂಲವೂ, ಸಂಸಾರ ಸಾಗರವನ್ನು ದಾಟಿ ಪಾರಾಗಲಿಕ್ಕೆ ಸಾಧನವೂ ಆಗಿದ್ದಾಳೆ. (ಆದಿ. ೭೪।೪೦)

ಹೀಗೆ ನಿಂದಾ-ಸ್ತುತಿಗಳಿರುವದನ್ನು ನೋಡಲಾಗಿ ಆ ಕಾಲದಲ್ಲಿ ಸ್ತ್ರೀಯರ ಯೋಗ್ಯತೆಯು ಸಮಾಜಕ್ಕೆ ಚನ್ನಾಗಿ ಗೊತ್ತಾಗಿತ್ತೆಂದು ತೋರುತ್ತದೆ. ಸ್ತ್ರೀಯರ ಯೋಗ್ಯತೆಯು ದೊಡ್ಡದಿರುವದು. ಅವರು ಪುರುಷರಿಗೆ ಬರೇ ಭೋಗ್ಯ ವಸ್ತುಗಳಲ್ಲ, ಸ್ತ್ರೀಯರು ನಿಂದ್ಯರೆನಿಸಿಕೊಳ್ಳದೆ, ಪವಿತ್ರಾಚರಣೆಯುವರಾಗಬೇಕು ಹೀಗೆ ತಿಳಿದು ನಿಂದೆಯ ವಾಕ್ಯಗಳನ್ನು ಹೇಳಿರುವರು. ಪ್ರಾಚೀನ ಕಾಲದಲ್ಲಿ ಸ್ತ್ರೀಯರ ದೋಷಗಳನ್ನು ಬೆಳಿಸಿ ವರ್ಣಿಸುವ ಚಟವಿದ್ದದರಿಂದ ಕೆಲವು ಅಶ್ಲೀಲ ನಿಂದೆಯ ವಾಕ್ಯಗಳು ಸೇರಿಸಲ್ಪಟ್ಟಿರುವವು.

ವಿವಾಹವು—ಮನುಷ್ಯಪ್ರಾಣಿಯು ತೀರ ಪ್ರಾಚೀನಕಾಲದಲ್ಲಿ ಪಶುವಿನಂತಿದ್ದಾಗ ವಿವಾಹದ ನಿರ್ಬಂಧವಿದ್ದಿಲ್ಲ. ಬರಬರುತ್ತ ವಿವಾಹವು ರೂಢವಾಯಿತು. ಸಮಾಜವು ಸುಧಾರಿಸದಿದ್ದಲ್ಲಿ ಸ್ವೈರಾಚರಣೆಯೇ ಇತ್ತು. ಉತ್ತರಕುರುದೇಶ

ದಲ್ಲಿ ಏನೂ ಬಂಧನವಿದ್ದಿಲ್ಲೆಂದು ಪಾಂಡುರಾಯನು ಹೇಳಿರುವನು. (ಆದಿ-೧೨೨-೪) ಮಾಹಿಷ್ಮತೀ ನಗರದ ಸ್ತ್ರೀಯರು ಪಾತಿವ್ರತ್ಯವನ್ನು ಉಲ್ಲಂಘನೆ ಮಾಡಿದರೆ ಪಾಪವಿಲ್ಲೆಂದು ತಿಳಿದು ಸ್ವಚ್ಛಂದದಿಂದ ನಡೆಯುವರೆಂದು ವರ್ಣನೆಯುಂಟು. (ಸಭಾ ೩೧-೩೭) ಮುಂದೆ ಉದ್ದಾಲಕನ ಮಗನಾದ ಶ್ವೇತಕೇತುವು ಸ್ತ್ರೀಪುರುಷರ ಸಂಬಂಧದ ನಿಯಮಮಾಡಿ ಪಾತಿವ್ರತ್ಯ ಮೀರಿದರೆ ಭ್ರೂಣಹತ್ಯದ ಪಾತಕ ಬರುವದೆಂದು ಹೇಳಿದನು. (ಆದಿ ೧೨೨-೧೭) ದ್ರೌಪದಿಯ ಪಂಚಪತಿತ್ವದ ಸಂಗತಿಯು ಮನಸಿಗೆ ಬಹಳ ಚುಚ್ಚುವಂತಿರುತ್ತದೆ. ಈ ಅಮಾನುಷ್ಯವಾದ ವಿಲಕ್ಷಣ ಸಂಗತಿಯು ಬಹಳ ವಾದವಿವಾದವಾಗಿ ಹಳೆಯ ಆಧಾರಗಳನ್ನು ತೋರಿಸಿ ನೆರವೇರಿಸಲ್ಪಟ್ಟಿತು.

ಈ ಕಾಲದಲ್ಲಿ ತಿರಸ್ಕರಣೀಯವೂ, ವಿಲಕ್ಷಣವೂ ಆಗಿ ತೋರುವದೊಂದು ಸಂಗತಿಯು ಆ ಕಾಲದಲ್ಲಿ ರೂಢವಾಗಿತ್ತು. ಮಗನಿಲ್ಲದ ವಿಧವೆಯು ಮೈದುನನಿಂದಾಗಲಿ, ಪಂಡಿತನಾದ ಬ್ರಾಹ್ಮಣನಿಂದಾಗಲಿ ಮಗನನ್ನು ಪಡೆಯುತ್ತಿದ್ದಳು. ಜನಸಂಖ್ಯೆ ಬೆಳೆಯಬೇಕೆಂದು, ವಂಶವು ಬೆಳೆಯಬೇಕೆಂದು, ಸಂಪತ್ತಿಗೂ, ಪಿತೃಗಳಿಗೆ ಪಿಂಡದಾನ ಮಾಡಲಿಕ್ಕೂ ಮೂಲಕನಿರಬೇಕೆಂದು, ಈ ನಿಂದ್ಯವಾದ ಆಚರಣೆಯು ಪ್ರಚಾರಹೊಂದಿತ್ತು. (ಅನು ೮-೨೨) ಪರಶುರಾಮನು ನಿಃ ಕ್ಷತ್ರಿಯ ಭೂಮಿಯನ್ನು ಮಾಡಲು, ಕ್ಷತ್ರಿಯಸ್ತ್ರೀಯರು ಬ್ರಾಹ್ಮಣರಿಂದ ಮಕ್ಕಳನ್ನು ಪಡೆದರು (ಆದಿ ೧೦೪-೫) ಈ ನೈತಿಕ ವಿರುದ್ಧಾಚರಣೆಯು ಸುಧಾರಣೆ ಹೆಚ್ಚಾದಂತೆ ಹೇಳ ಹೆಸರಿಲ್ಲದೆ ಹೋಯಿತು.

ಬಹಳ ಹೆಂಡಿರನ್ನು ಮಾಡಿಕೊಳ್ಳುವ ಪದ್ಧತಿಯು ಮಾತ್ರ ಬಹಳ ರೂಢಿಯಲ್ಲಿತ್ತು. ದಶರಥನಿಗೆ ಮೂರು ಮಂದಿ ರಾಣಿಯರಲ್ಲದೆ, ಬೇರೆ ಹಲವು ಹೆಂಡಿರಿದ್ದರು. ಯಯಾತಿ, ಪಾಂಡು, ಇವರು ಇಬ್ಬಿಬ್ಬರು ಹೆಂಡಿರನ್ನು ಮಾಡಿಕೊಂಡಿದ್ದರು. ಬ್ರಾಹ್ಮಣರು ಬಹುಶಃ ಏಕಪತ್ನೀಕರಾಗಿರುತ್ತಿದ್ದರು. ಕ್ಷತ್ರಿಯರಲ್ಲಿ ಶ್ರೀ ರಾಮಚಂದ್ರನಂತೆ ಏಕಪತ್ನೀ ವ್ರತಸ್ಥರೆಷ್ಟೋ ಜನರಿದ್ದರು. ವಿವಾಹದಲ್ಲಿ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚಗಳೆಂಬ ಎಂಟು ಪ್ರಕಾರಗಳನ್ನು (ವಿವಾಹವಾಗುವ ಕ್ರಮವನ್ನನುಸರಿಸಿ) ಮಾಡಿದ್ದರು. ಕ್ಷತ್ರಿಯರು ಪಣವನ್ನು ಗೆದ್ದವರಿಗೆ ಹೆಣ್ಣು ಕೊಡುತ್ತಿದ್ದರು. ವರನು ೨೧ ರಿಂದ ೩೦ ವರ್ಷದವನೂ ಕನ್ಯೆಯು ೭ ರಿಂದ ೧೦ ವರ್ಷದವಳೂ ಇರಬೇಕೆಂದು ಗೊತ್ತುಮಾಡಿದ್ದರು. ಗಾಂಧರ್ವದ ಹೊರತು ಉಳಿದ ವಿವಾಹಗಳ

ಬಗ್ಗೆ ಹಿರಿಯರ ಒಪ್ಪಿಗೆಯು ಬೇಕಾಗುತ್ತಿತ್ತು. ಮೈನೆರೆತಮೇಲೆ ಸಹ ತಂದೆಯು ಮದುವೆಮಾಡಿಕೊಡದಿದ್ದರೆ, ಮೂರು ವರ್ಷಗಳ ತರುವಾಯ ಕನ್ಯೆಯು ತಾನೇ ಗಂಡನನ್ನು ಮಾಡಿಕೊಳ್ಳುತ್ತಿದ್ದಳು. (ಅನು ೪೪-೧೬) ಬ್ರಾಹ್ಮಣನು ಕೆಳಗಿನ ಮೂರು ವರ್ಣಗಳ ಹೆಣ್ಣನ್ನೂ, ಕ್ಷತ್ರಿಯನು ತನ್ನ ಕೆಳಗಿನ ಎರಡು ವರ್ಣಗಳ ಹೆಣ್ಣನ್ನೂ ವೈಶ್ಯನು ಶೂದ್ರಕನ್ಯೆಯನ್ನೂ ಮಾಡಿಕೊಳ್ಳಬಹುದು. ಇದು ಅನುಲೋಮ ವಿವಾಹವು. ಆದರೆ ಪ್ರತಿ ಲೋಮ (ತಿರುಗಿ ಮೇಲಿನ ವರ್ಣದ) ವಿವಾಹವು ಆಗಕೂಡದೆಂದು ನಿರ್ಬಂಧವಿತ್ತು. ರೋಗವುಳ್ಳವರೂ ೬೦ ವರ್ಷದವರೂ ವಿವಾಹಕ್ಕೆ ಅಯೋಗ್ಯರಾಗುತ್ತಿದ್ದರು. ತಂದೆಯು ಮಗಳಿಗೆ ಮದುವೆಯ ಕಾಲದಲ್ಲಿ ಬೆಲೆಯುಳ್ಳ ಉಡುಗರೆ ಕೊಡುತ್ತಿದ್ದನು. ಕನ್ಯೆಯನ್ನು ಮಾರುವವರೂ ಭಾರಿಯಾದ ವರದಕ್ಷಿಣೆ ತಕ್ಕೊಳ್ಳುವವರೂ ಮಲ-ಮೂತ್ರ-ಸ್ವೇದಗಳನ್ನು ತಿನ್ನುತ್ತ, ಘೋರ ನರಕದಲ್ಲಿ ಬಹುಕಾಲ ಬೀಳುವರೆಂದು ಹೇಳಿದೆ. ಇದನ್ನು ವರ-ಕನ್ಯಾ-ವಿಕ್ರಯ ಮಾಡುವ ತಾಯಿತಂದೆಗಳು ಲಕ್ಷದಲ್ಲಿಡತಕ್ಕದ್ದಾಗಿದೆ.

ತ್ರಿಕರಣಪೂರ್ವಕವಾಗಿ ಪತಿಸೇವೆಮಾಡುವ ಸತಿಗೆ ಉಳಿದ ದೇವತಾ ಪೂಜೆಯು ಬೇಡ. (ಅಯೋಧ್ಯಾ೨೪. ೨೬.) ದ್ರೌಪದಿ, ಸೀತೆ, ಅರುಂಧತಿ, ಲೋಪಾಮುದ್ರೆ, ದಮಯಂತಿ, ಸಾವಿತ್ರಿ, ಮುಂತಾದ ಸ್ತ್ರೀರತ್ನಗಳ ಪ್ರಭಾವವು ಹಿಂದೂ ಸ್ತ್ರೀಸಮಾಜದಲ್ಲಿ ನೆಲೆಗೊಂಡು ಮಾಡುತ್ತಿರುವ ಗುಪ್ತಕಾರ್ಯವು ಅಲೌಕಿಕವಿರುತ್ತದೆ. ಅವರ ಸ್ಫೂರ್ತಿ ಜನಕ ಚರಿತ್ರಗಳಿಂದ ಹಿಂದೂ ಕುಟುಂಬಗಳಲ್ಲಿ ಶಾಂತಿ-ಸುಖಗಳು ನೆಲೆಗೊಂಡಿರುತ್ತವೆ. ಆ ಕಾಲದಲ್ಲಿ ಸ್ತ್ರೀ ಶಿಕ್ಷಣದಬಗ್ಗೆ ಶಾಲೆಗಳಿರದಿದ್ದರೂ ಸ್ತ್ರೀಯರು ಸುಶೀಲ-ಸ್ವಭಾವದವರಾಗುವಂತೆ ವ್ಯವಸ್ಥೆ ಇತ್ತು. ಎಷ್ಟೋ ಸ್ತ್ರೀಯರು ತತ್ವಜ್ಞಾನವುಳ್ಳವರಿದ್ದರು. ನಾಟ್ಯ-ಗಾಯನ-ವಾದನ-ಚಿತ್ರಲೇಖಗಳನ್ನು ಕಲಿಯುವದು ನಿಂದ್ಯವಲ್ಲೆಂದು ಆಗಿನ ಸ್ತ್ರೀಯರು ತಿಳಿದಿದ್ದರು. (ವಿರಾಟ ೨. ೨೯) ಸ್ತ್ರೀಯರು ಪರತಂತ್ರರಾಗಿದ್ದರೂ ಮನೆಗೆಲಸಗಳಲ್ಲಿ ಅಧಿಕಾರವುಳ್ಳವರಿದ್ದರು. ಕುಂತಿ, ವಿದುಳೆ, ಉತ್ತರೆ, ಮುಂತಾದವರು ಮಕ್ಕಳನ್ನು ಯುದ್ಧಕ್ಕೆ ಪ್ರೋತ್ಸಾಹಿಸಿ, ವೀರಮಾತೆಯರೆನಿಸಿಕೊಳ್ಳುತ್ತಿದ್ದರು. (ಉದ್ಯೋಗ) (೯೦। ೩೩) ಉಚ್ಚಕುಲದ ಸ್ತ್ರೀಯರು ಬಹುಶಃ ಪುರುಷಸಮಾಜದಲ್ಲಿ ಮಿಶ್ರವಾಗುತ್ತಿದ್ದಿಲ್ಲ. ಸೀತೆಯು ಒಳಗೇ ಇರುತ್ತಿದ್ದಳು. ದ್ರೌಪದಿಯು ಸಭೆಗೆ ಒತ್ತಾಯದಿಂದ ಎಳೆದು ತರಲ್ಪಟ್ಟಳು. ಆದರೂ ಬುರುಕಿಹಾಕಿಕೊಳ್ಳುವ ನಡತೆಯಿದ್ದಿಲ್ಲ. ವಿವಾಹ ಸಮಾರಂಭದಲ್ಲಿ ಸಂಕಟಕಾಲದಲ್ಲಿ, ಯಜ್ಞಗಳಲ್ಲಿ, ಸ್ತ್ರೀಪುರುಷರು ಒಟ್ಟಾಗಿರ್ಬ

ತ್ತಿದ್ದರು. (ಯುದ್ಧಕಾಂಡದ ೧೧೬। ೨೮) ವಿಧವಾವಪನವಂತೂ ಆ ಕಾಲದಲ್ಲಿ ನಿಜವಾಗಿ ಇದ್ದಿಲ್ಲ. ಆದರೆ ಸಹಗಮನ ರೂಢಿಯು, ಕ್ವಚಿತ್ತಾಗಿ ಇತ್ತು. ಮಾದ್ರಿಯು ಸತಿಹೋದಳು. ಆದರೆ ಕೌಸಲ್ಯೆ, ಕುಂತಿ, ಭಾರತಯುದ್ಧದಲ್ಲಿ ಸತ್ತವರ ಅಸಂಖ್ಯ ಪತ್ನಿಯರು, ಸಹಗಮನ ಮಾಡಲಿಲ್ಲ. ವಿಧವಾ ವಿವಾಹವು ಅಧರ್ಮವೆಂದು ಹೇಳಿದೆ. (ಆದಿಪರ್ವ ೧೦೪। ೩೨। ೧೬೦। ೩೬)"ದಮಯಂತಿಯು ಮರಳಿ ಸ್ವಯಂವರವನ್ನು ಸಾರಿಸಿದಳು." "ಶ್ರಾದ್ಧಕ್ಕೆ ಪುನರ್ವಿವಾಹಿತ ಸ್ತ್ರೀಯ ಮಗನನ್ನು ಕೂಡ್ರಿಸಬಾರದು." ಎಂಬ ೨ ಸಂಗತಿಗಳಿಂದ ವಿಧವಾವಿಹಾಹವು ಅಪ... ರೂಪವಾಗಿ ಆಗುತ್ತಿತ್ತೆಂದು ತೋರುತ್ತದೆ. (ಅನುಶಾ.)

ಈಗಿನಂತೆ ಆಕಾಲದಲ್ಲಿ ಅವಿಭಕ್ತ ಕುಟುಂಬಗಳೇ ಇರುತ್ತಿದ್ದವು. ಕುಟುಂ... ಬದಲ್ಲಿ ಮಾತಾಪಿತೃಭಕ್ತಿಯು ಅತ್ಯುಜ್ವಲವಾಗಿತ್ತು. ತಂದೆಗ ವಚನಭಂಗದ... ಪಾಪವು ತಟ್ಟಬಾರದೆಂದು ರಾಮನು ವನಕ್ಕೆ ತೆರಳಿದನು; ಪುರುರಾಜನು ತನ್ನ... ಯೌವನವನ್ನು ತಂದೆಗೆ ಕೊಟ್ಟು ಆತನ ಜರೆಯನ್ನು ಕೈಕೊಂಡನು! ಪಿತೃಭಕ್ತಿ... ಗಾಗಿ ಭೀಷ್ಮನು ಆ ಜನ್ಮ ಬ್ರಹ್ಮಚಾರಿಯಾದನು!! ಪಿತಾಜ್ಞೆಯ ಮೂಲಕವಾಗಿ... ಪರಿಶುರಾಮನು ತಾಯಿಯ ಶಿರಚ್ಛೇದಮಾಡಿದನು.!!! ಪಿತೃಭಕ್ತಿಗಿಂತ ಹೆಚ್ಚಿನ... ಧರ್ಮವಿದ್ದಿಲ್ಲ. (೧೯ ೨೨.) ತಂದೆಗಳಾದರೂ ಉತ್ಕಟ ಪುತ್ರವತ್ಸಲರಿದ್ದರು... ದಶರಥನು ಪುತ್ರಶೋಕದಿಂದ ಸತ್ತುಹೋದನು! ದುರ್ಯೋಧನನನ್ನು ಬಿಟ್ಟುಬಿ... ಲಿಕ್ಕೆ ಶ್ರೀ ಕೃಷ್ಣ-ವಿದುರರು ಎಷ್ಟು ಬೋಧಿಸಿದರೂ ಧೃತರಾಷ್ಟ್ರನು ಕೇಳಲಿಲ್ಲ... ಆಕಾಲದಲ್ಲಿ ಬಂಧುಪ್ರೀತಿಯೂ ಅಸದೃಶವಾಗಿತ್ತು. ಹೆಂಡತಿಯು ಸೀರೆ ಸೆಳೆ... ದ್ದಕ್ಕೆ ರೊಚ್ಚಿಗೇರಿದ ಭೀಮಾರ್ಜುನರು ಧರ್ಮರಾಯನ ಮಾತಿನಂತೆ ಸುಮ್ಮ... ಕೂತರು. ಅಣ್ಣನ ಸುಖಕ್ಕಾಗಿ ಲಕ್ಷ್ಮಣನು ಸ್ವಸುಖವಿಮುಖನಾದನು. ತಂ... ತೀರಲು ಭರತನು ಅಣ್ಣನೇ ತಂದೆಯೆಂದು ಹೇಳಿರುವನು. (ಅಯೊಧ್ಯಾ-೭೨ ೩... ಷೋಡಶ-ಧಾರ್ಮಿಕ ಸಂಸ್ಕಾರಗಳು ಆಕಾಲದಲ್ಲಿ ಚನ್ನಾಗಿ ಜರುಗಿಸಲ್ಪಡು... ದ್ದವು. ಸತ್ಯದ ಮಹಿಮೆಯಂತೂ ಮಿತಿಮೀರಿ ವರ್ಣಿಸಲ್ಪಟ್ಟದೆ. ಸಾವಿರ ಅಶ್ವಮೇ... ಗಳಿಂದ ಬರುವ ಪುಣ್ಯಕ್ಕಿಂತ ಸತ್ಯವು ಹೆಚ್ಚಿನದು (ಆದಿ ೭೦।೧೦೨) ಅಸತ್ಯ... ಇಷ್ಟಾಪೂರ್ತಿಯನ್ನು ಸುಟ್ಟುಬಿಡುತ್ತದೆ? (ಉದ್ಯೋಗ ೧೦೩।೮। ಸತ್ಯದಲ್ಲಿಯೇ ... ಹ್ಮವುತುಂಬಿದೆ.(ಅಯೋಧ್ಯಾ ೧೪।೭) ಎಂದು ಹೇಳಿದೆ, ಸತ್ಯಕ್ಕಾಗಿ ಕರ್ಣ, ಹ... ಶ್ಚಂದ್ರ, ಭೀಷ್ಮ, ರಾಮ, ಮುಂತಾದವರು ಬಲು ಕಷ್ಟಪಟ್ಟರು. ಎಂಥ ಸಂ... ಟಬಂದರೂ ಧಾರ್ಮಿಕ ವೃತ್ತಿಯು ತಪ್ಪುತ್ತಿದ್ದಿಲ್ಲ. "ಯತೋಧರ್ಮಸ್ತತೋಜಯ...

ಎಂಬ ಮಾತು ಸರ್ವಸಾಧಾರಣವಾಗಿತ್ತು. ಬ್ರಹ್ಮಚರ್ಯದಿಂದ ಋಷಿಗಳ, ಯಜ್ಞಗಳಿಂದ ದೇವತೆಗಳ, ಪ್ರಜೋತ್ಪತ್ತಿಮಾಡಿ ಪಿತೃಗಳ, ಋಣವನ್ನು ತೀರಿಸುತ್ತಿದ್ದರು. ಅತಿಥಿಯು ವಿಮುಖನಾದರೆ, ತನ್ನ ಪಾಪಕೊಟ್ಟು ಪುಣ್ಯವನ್ನೊಯ್ಯುವನೆಂದು ಬಗೆದು, ಚೆನ್ನಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರು. (ಅನು ೨/೯೩) ಆಕಳು, ದೀಪ, ಎಳ್ಳು, ಮುಂತಾದವುಗಳ ದಾನಮಾಡುತ್ತಿದ್ದರು. ಅನ್ನದಾನವೇ ಮೇಲಾದದ್ದೆಂದು ತಿಳಿದಿದ್ದರು. ಕರ್ಣನು ಜೀವಿತಾಧಾರಿಗಳಾದ ಕವಚಕುಂಡಲಗಳನ್ನು ಸಹ ದಾನಕೊಟ್ಟನು; ಶಿಬಿರಾಜನು ಶ್ಯೇನಪಕ್ಷಿಗೆ ತನ್ನ ಮಾಂಸಕೊಟ್ಟು ಶರಣಾಗತ ರಕ್ಷಣೆಮಾಡಿದನು; ಕೀರ್ತಿರಕ್ಷಣೆಯು ಜೀವಕ್ಕಿಂತ ಹೆಚ್ಚಿನದೆಂದು ಕರ್ಣನು ಹೇಳಿದ್ದಾನೆ. (ವನ ೩೦೦।೩೮) ರಾಮನು ಹೆಂಡತಿಯನ್ನು ಅಪವಾದ ಭಯಕ್ಕಾಗಿ ಬಿಟ್ಟನು; ಪಾಪಿಯಾಗಿದ್ದರೂ ಗಂಗಾದಿ ತೀರ್ಥಯಾತ್ರೆಗಳಿಂದ ಉತ್ತಮ ಗತಿಹೊಂದುತ್ತಾನೆಂದು ತಿಳಿದಿದ್ದರು. (ಅನು ೨೬।೩೦

ಕನ್ಯಾವಿಕ್ರಯವು ನಿಂದ್ಯವಾಗಿತ್ತು. ಮದ್ಯಪಾನ ಮಾಡುವ ಬ್ರಾಹ್ಮಣನು ಧರ್ಮಬಾಹ್ಯನಾಗುತ್ತಿದ್ದನು. (ಅಯೋಧ್ಯಾ ೧೨· ೭೮) ಜೂಜಾಡುವದು ಸರ್ವಮಾನ್ಯ ವ್ಯಸನವಾಗಿತ್ತು; ಯಾರಾದರೂ ಜೂಜಾಡಲಿಕ್ಕೆ ಕರೆದರೆ, ನಾನು ಹಿಂದೆಗೆಯಲಾರೆನೆಂದು ಧರ್ಮರಾಜನು ಹೇಳಿದ್ದಾನೆ. (ಸಭಾ. ೫೮।೧೬) ಕದ್ರೂ-ವಿನತೆಯರಂಥ ಹೆಂಗಸರು ಸಹ ದ್ಯೂತಾಸಕ್ತಿಯುಳ್ಳವರಿದ್ದರು; ಆದರೂ ದ್ಯೂತ, ಮೃಗಯಾ, ಸುರಪಾನ, ಸ್ತ್ರೈಣತೆಗಳು, ಕ್ಷಯಕಾರಕಗಳೆಂದು ಹೇಳಿದೆ. (ಅನು ೧೫೭· ೩೩)

(ಕ) ತಿಂಬುವ ಪದಾರ್ಥಗಳೂ ವಸ್ತ್ರಾಲಂಕಾರಗಳೂ.

ಆಹಾರಪದಾರ್ಥಗಳಲ್ಲಿ ಖಾದ್ಯ, ಪೇಯ, ಲೇಹ್ಯ, ಚೋಷ್ಯಗಳೆಂದು ನಾಲ್ಕುಪ್ರಕಾರಗಳು.(ಅಯೋಧ್ಯಾ ೯೧।೭೦) ಬ್ರಾಹ್ಮಣಾದಿ ಸರ್ವರು ಆ ಕಾಲದಲ್ಲಿ ಮಾಂಸತಿನ್ನುತ್ತಿದ್ದರು; ಆದರೆ ಬ್ರಾಹ್ಮಣ-ಕ್ಷತ್ರಿಯರು ಐದು ಉಗುರುಗಳುಳ್ಳ ಪ್ರಾಣಿಗಳಲ್ಲಿ ಗಂಡಕಮೃಗ, ಶ್ವಾವಿಧ, ಉಡ, ಮೊಲ, ಆವೆಗಳೆಂಬ ಐದು ಪ್ರಾಣಿಗಳನ್ನು ತಿನ್ನುತ್ತಿದ್ದರು. (ಕಿಷ್ಕಿಂದಾ ೧೭।೩೯) ಇವಲ್ಲದೆ ಶುದ್ಧಬಾಣದಿಂದ ಹೊಡೆದ ಚಿಗರೆಗಳನ್ನು ತಿನ್ನುತ್ತಿದ್ದರು. ಆದರೂ ಮದ್ಯ, ಮಾಂಸ, ಪರಸ್ತ್ರೀ, ಇವರಿಂದ ವಿಮುಖರಾದವರು ಸ್ವರ್ಗಕ್ಕೆ ಹೋಗುವರೆಂತಲೂ, ತಪಸ್ವಿಗಳು ಮಾಂಸ ತಿಂದರೆ ದೋಷತಟ್ಟುವದೆಂತಲೂ ಹೇಳಿದೆ. (ಅನುಶಾಸನ

೧೧೪।೧೦) ಆರಣ್ಯಕಾಂಡದಲ್ಲಿ ಗೋಧಿ–ಅಕ್ಕಿಗಳೂ, ಉತ್ತರಕಾಂಡದಲ್ಲಿ ಎಳ್ಳು–ಉದ್ದು–ಹೆಸರು–ಹುಳ್ಳಿಗಳೂ, ಭಾರತದಲ್ಲಿ ಅಕ್ಕಿ–ಗೋಧಿ–ಸಾವಿ–ಎಳ್ಳು–ಹುಳ್ಳಿ, ಸಾಸಿವೆ, ಕಡಲೆ, ಹೆಸರು, ಅಗಸಿಗಳೂ ಪಲ್ಲೆಕಾಯಿ (ತರಕಾರಿ) ಯೊಳಗಿನ ಹುಳಿಚಿಕ್ಕ, ಮೂಲಂಗಿ, ಉಳ್ಳಿಗಡ್ಡಿ, ಬೆಳ್ಳುಳ್ಳಿ, ನುಗ್ಗಿ, ಕುಂಬಳಕಾಯಿಗಳೂ ಉಲ್ಲೇಖಿಸಲ್ಪಟ್ಟವೆ. ಹಾಲು, ಮೊಸರು, ತುಪ್ಪಗಳು ಸರ್ವಮಾನ್ಯ ಆಹಾರಗಳಾಗಿದ್ದವು. ಪಕ್ವಾನ್ನಗಳಲ್ಲಿ ಗಾರಿಗೆ, ಚಕ್ಕಲಿ, ಜಿಲೇಬಿ, ಖೀರು, ಕಡಬು, ದಾಳಿಂಬ–ದ್ರಾಕ್ಷೆಗಳಪಾಕ, ಇವುಗಳ ಉಲ್ಲೇಖವುಂಟು. ಅರಸರೂ ಮುನಿಗಳೂ ಸಹ ಬಾರೀಹಣ್ಣು, ಕೇರಹಣ್ಣುಗಳನ್ನು ತಿನ್ನುತ್ತಿದ್ದರು. (ಅನು ೫೯।೧೯) ತಾಮ್ರಪಾತ್ರೆಗಳು ಅಡಿಗೆಗಾಗಿ ಉಪಯೋಗಿಸಲ್ಪಡುತ್ತಿದ್ದವು. (ಅನು. ೧೨೬।೨೨) ಅಡಿಗೆಮಾಡಲಿಕ್ಕೆ ಗಂಡಸರು ಸಹ ಇರುತ್ತಿದ್ದರು. ಆ ಬಲ್ಲವಾಚಾರ್ಯರು ಪುಷ್ಟರಾಗಿ ಕುಸ್ತಿಯಾಡಲಿಕ್ಕೆ ಹುರುಪುಗೊಳ್ಳುತ್ತಿದ್ದರು; ಉಪ್ಪು, ಹಾಲ್ಮೊಸರು, ಜೇನತುಪ್ಪ, ತುಪ್ಪ, ಎಣ್ಣೆ, ಬೆಂದಅನ್ನ, ಮಾಂಸ, ಹಣ್ಣು, ಗಡ್ಡೆ ಬೇರುಗಳು, ಪಲ್ಲೆ, ಎಳ್ಳು ಪರಿಮಳಪದಾರ್ಥ, ಬೆಲ್ಲ, ಇವುಗಳನ್ನು ಮಾರಬಾರದೆಂದು ಹೇಳಿದೆ. (ಉದ್ಯೋಗ ೩೮· ೫)

ಹೆಂಗಸರು ಎರಡು ವಸ್ತ್ರಗಳನ್ನು ಧರಿಸುತ್ತಿದ್ದರು. ಋಷಿಗಳು ಚಿಗರಿಯ ಹಾಗು ಹುಲಿಯ ಚರ್ಮಗಳನ್ನು ಹೊದಿಯುತ್ತಿದ್ದರು. ಆಗ ರೇಶಿಮೆಯ ಹಾಗು ಉಣ್ಣೆಯ ವಸ್ತ್ರಗಳೇ ಬಹಳವಾಗಿದ್ದವು. ವಸ್ತ್ರದಮೇಲೆ ಬೇರೆ ಬಣ್ಣಗಳಂತೆ ಕೇರ ಎಣ್ಣೆಯ ಬಣ್ಣವು ಹೋಗುವದಿಲ್ಲೆಂದು ಹೇಳಿದೆ. (ಶಾಂತಿ ೨೯೨· ೧೦) ಅರಳೆಯ ವಸ್ತ್ರಗಳ ಪ್ರಚಾರವು ಕಡಿಮೆಯಿತ್ತು. ಹನುಮಂತನ ಬಾಲಕ್ಕೆ ಅರಳೆಯ ಬಟ್ಟೆಗಳನ್ನು ಸುತ್ತಿ ಉರಿಹಚ್ಚಿದರೆಂದು ವರ್ಣನೆಯುಂಟು. (ಸುಂದರ ೫೩· ೬) ಅರಸರು ಕಿರೀಟವನ್ನೂ ಬೇರೆ ಜನರು ಉಷ್ಣೀಷವೆಂಬ ವೇಷ್ಟನವನ್ನೂ ತಲೆಯಲ್ಲಿ ಧರಿಸುತ್ತಿದ್ದರು.

ಹೆಂಗಸರು ಕುಂಡಲ, ಶ್ವದಂಷ್ಟ್ರ (ಕಿವಿಯ ಆಭರಣ) ಬಳಿ, ನಾಗಮುರಿಗೆ ಸರಗಳು, ಪಟ್ಟ, ಪೈಜಣ, ಉಂಗುರಗಳನ್ನು ಧರಿಸುತ್ತಿದ್ದರು. ಬಂಗಾರ ಬೆಳ್ಳಿಗಳಲ್ಲದೆ, ಹವಳ, ಪಚ್ಚೆ, ಸ್ಫಟಿಕ, ಮುತ್ತುಗಳ ಉಲ್ಲೇಖವುಂಟು. ಈಗಿನಂತೆ ಆಗ ಸಹ ಮುತ್ತು, ಪಚ್ಚೆ, ರತ್ನಗಂಬಳಿಗಳು ಸಿಂಹಲ ದ್ವೀಪದಿಂದ ಬರುತ್ತಿದ್ದವು. (ಸಭಾ ೫೨· ೩೬) ಹೆಂಗಸರು ಪಾದಗಳಿಗೆ ಜಾವಡಿಯನ್ನು ಹಚ್ಚಿಕೊಳ್ಳುತ್ತಿದ್ದರು. (ಅಯೋಧ್ಯಾ ೬೦· ೧೮)

(ಡ) ರಾಜ್ಯವ್ಯವಸ್ಥೆಯೂ ಯುದ್ಧಕಲೆಯೂ.

ಭಾರತರಾಮಾಯಣಕಾಲದಲ್ಲಿ ಪ್ರಜಾಸತ್ತಾತ್ಮಕರಾಜ್ಯಪದ್ಧತಿಯಿದ್ದಿಲ್ಲ. ಆದರೂ ರಾಜಸತ್ತೆಯು ಅನಿಯಂತ್ರಿತವಿದ್ದಿಲ್ಲ. ಈ ಬಗ್ಗೆ ಶ್ರೀ ರಾಮನ ಪಟ್ಟಾಭಿಷೇಕಕಾಲದಲ್ಲಿ ನಡೆದ ಸಂಗತಿಯನ್ನು ಹಿಂದಿನ ಪ್ರಕರಣದಲ್ಲಿ ಹೇಳಿದೆ. ಪೌರ ಜನರ ಸಭೆಮಾಡಿ ಅವರ ಅಭಿಪ್ರಾಯದಂತೆ ರಾಜನು ನಡೆಯುತ್ತಿದ್ದನು. ಸಗರ ರಾಜನ ಮಗನಾದ ಅಸಮಂಜಸನು ಸಣ್ಣಮಕ್ಕಳನ್ನು ಸರಯೂನದಿಯಲ್ಲಿ ಚೆಲ್ಲಿಕೊಟ್ಟು ಅವರ ಪ್ರಾಣಾಂತ ವೇದನೆಯನ್ನು ಚಕ್ಕಂದದಿಂದ ನೋಡುತ್ತಿದ್ದನು. ಆಗ ಪ್ರಜೆಗಳು ಸಗರನಿಗೆ ದೂರು ಹೇಳಲು ಅವನು ತನ್ನ ಮಗನನ್ನು ಗಡಿ ದಾಟಿಸಿದನು; ಪೂರುವು ತಂದೆಗೆ ತನ್ನ ಪ್ರಾಯವನ್ನು ಕೊಟ್ಟು ತಂದೆಯ ಮುಪ್ಪನ್ನು ಸ್ವೀಕರಿಸಿ, ತಂದೆಗೆ ಪ್ರೀತಿ ಪಾತ್ರನಾದನು. ಆಗ ತಂದೆಯು ಪ್ರಜೆಗಳ ಸಮ್ಮತಿಯಿಂದಲೇ ೨ನೆಯ ಮಗನಾದ ಪೂರುವಿಗೆ ಪಟ್ಟಗಟ್ಟಿದನು. ಜ್ಯೇಷ್ಠಪುತ್ರನಿಗೆ ವಾಡಿಕೆಯಾಗಿ ಅರಸೊತ್ತಿಗೆಯು ದೊರೆಯುತ್ತಿತ್ತು. ಆದರೆ ವಿಶೇಷಕಾರಣವಿದ್ದರೆ ಚಿಕ್ಕಮಗನಿಗೂ ರಾಜ್ಯಪದವು ದೊರೆಯುತ್ತಿತ್ತು. ಪ್ರತೀಪರಾಜನ ಹಿರಿಯಮಗನಾದ ದೇವಾಪಿಯು ತ್ವಗ್ರೋಗಗ್ರಸ್ತನಾದದರಿಂದ, ಜನರ ಇಚ್ಛೆಯಂತೆ ಚಿಕ್ಕಮಗನಾದ ಶಾಂತನುವು ಅರಸನಾದನು. (ಉದ್ಯೋಗ ೧೪೯. ೨೫)ಧೃತರಾಷ್ಟ್ರನು ಕುರುಡನಾದದರಿಂದ ಆತನ ತಮ್ಮನಾದ ಪಾಂಡುವಿಗೆ ಪಟ್ಟವಾಯಿತು

ರಾಜಧರ್ಮವಂತೂ ಅತಿ ವಿಸ್ತಾರವಾಗಿ ಹೇಳಿದೆ. ರಾಜನು ಸಾಮ-ದಾನ-ಭೇದ-ದಂಡಗಳೆಂಬ ೪ ಉಪಾಯಗಳನ್ನು ತಕ್ಕಕಾಲದಲ್ಲಿ ಉಪಯೋಗಿಸಬೇಕು. ಕೋಟೆಗಳಲ್ಲಿ ದ್ರವ್ಯ, ಬಲ, ಅನ್ನ, ನೀರು, ಶಸ್ತ್ರಾಸ್ತ್ರಗಳು ಶಿಲ್ಪಕಾರರು ಇವರ ಸಂಗ್ರಹ ಮಾಡಿಡಬೇಕು. ರಾಜನಿಷ್ಠ ಸೇವಕರು ಸತ್ತರೆ, ಅವರ ಕುಟುಂಬಗಳ ಯೋಗಕ್ಷೇಮವನ್ನು ನೋಡಬೇಕು. ರಾಜ್ಯದ ಆಯ-ವ್ಯಯಗಳನ್ನು ದಕ್ಷತೆಯಿಂದ ನೋಡಬೇಕು. ಕೃಷಿಯಲ್ಲಿ ಸಮೃದ್ಧಿಯುಂಟಾಗುವಂತೆ ವರ್ತಿಸಬೇಕು. ಪರರಾಷ್ಟ್ರಗಳಲ್ಲಿ ಗುಪ್ತ-ಹೇರರನ್ನು ಕಳಿಸಿರಬೇಕು. ರಾಜ್ಯದ ಉತ್ಪನ್ನದ $\frac{1}{6}$ ಭಾಗವನ್ನು ಮಾತ್ರ ತಕ್ಕೊಳ್ಳಬೇಕು. ತಾನು ವ್ಯಸನಗಳಲ್ಲಿ ಸೇರದೆ, ಪ್ರಜೆಗಳ ವರ್ಣಾಶ್ರಮಧರ್ಮದ ಕಡೆಗೆ ಚೆನ್ನಾಗಿ ಲಕ್ಷಕೊಡಬೇಕು, ಎಂದು ಹೇಳಿದೆ. ರಾಜನ ತಪ್ಪಿನಿಂದಲೇ ಬರ, ಅಕಾಲಮೃತ್ಯು ಮುಂತಾದ ಪೀಡೆಗಳುಂಟಾಗುವವೆಂಬ ತಿಳುವಳಿಕೆಯಿತ್ತು. ಅರಾಜಕಸ್ಥಿತಿಯು ಹಾನಿಕರವೆಂದು ಹೇಳಿದೆ. ಅರಸನಿಗೆ ೮ ಜನ

ಮಂತ್ರಿಗಳಿರುತ್ತಿದ್ದರು. ಅರಸನಿಗೆ ಸಲಹೆ ಕೊಡುವ ಸಭೆಯಲ್ಲಿ ೪ ಜನ ಬ್ರಾಹ್ಮಣರು, ೮ ಜನ ಕ್ಷತ್ರಿಯರು, ೨೧ ಮಂದಿ ವೈಶ್ಯರು, ಮೂವರು ಶೂದ್ರರು ಈ ಪ್ರಕಾರ ೩೬ ಜನರಿರುತ್ತಿದ್ದರು. ಅತಿ ಮಹತ್ವದ ಪ್ರಸಂಗದಲ್ಲಿ ಇವರಲ್ಲಿ ೮ ಜನರು ರಾಜಕಾರ್ಯವನ್ನು ಕೈಕೊಳ್ಳುತ್ತಿದ್ದರು. ಬಾಹು ಬಲಕ್ಕಿಂತ ಮುತ್ಸದ್ದಿತನವು ಶ್ರೇಷ್ಠವು. ಮಂತ್ರಿಯು ಸರಳನೂ ವಿದ್ವಾಂಸನೂ ಇರಬೇಕು. ಅವನು ಕುಟಿಲ ನೀತಿಯನ್ನು ಕೈಕೊಳ್ಳಬಾರದು, ಎಂದು ವರ್ಣನೆಯುಂಟು.

ರಾಜನೇ ಮುಖ್ಯನ್ಯಾಯಾಧೀಶನು. ಆತನ ಕೆಳಗೆ ಬೇರೆ ನ್ಯಾಯಾಧೀಶರಿರುತ್ತಿದ್ದರು. ಆ ಕಾಲದಲ್ಲಿ ವಕೀಲರಿದ್ದಿಲ್ಲ. ನ್ಯಾಯಾಧೀಶರು ಸ್ಮೃತಿವಚನಗಳನ್ನೂ ಶಿಷ್ಟಾಚಾರವನ್ನೂ ಅನುಸರಿಸಿ ನಿರ್ಣಯ ಹೇಳುತ್ತಿದ್ದರು. ವಾದಿ ಪ್ರತಿಗಳಿಗೆ ಅಯೋಗ್ಯ ನಿರ್ಣಯವನ್ನು ಹೇಳಿದ್ದರಿಂದ, ನಿಮಿಯೂ, ನೃಗರಾಜನೂ ಕೇಡಿಗೊಳಗಾದರು. ಸುಳ್ಳು ಸಾಕ್ಷಿ ಹೇಳುವವರು ನಗರ ಬಾಹ್ಯರಾಗುತ್ತಿದ್ದರು. ಅವರ ತಲೆಯ ಪೂರ್ವಜರು ನರಕದಲ್ಲಿ ಬೀಳುವರು. ಸಾಮುದ್ರಿಕ ಹೇಳುವವನು, ಕಳವು ಮಾಡಿದವನು, ಸುಳ್ಳು ಭವಿಷ್ಯ ಹೇಳುವವನು, ವೈದ್ಯನು, ನಟನು, ಲೋಕಾಪವಾದಕ್ಕಂಜುವವನು, ಅರಸನು, ವ್ಯಭಿಚಾರಿಯು, ರಾಜಸೇವಕನು, ಮಗನು, ಅಣ್ಣನು, ವಿಧವೆಯು, ಸಣ್ಣಮಕ್ಕಳತಾಯಿಯು, ದಂಡಾಳು, ನೌಕರಿಯಿಂದ ತೆಗೆದು ಹಾಕಲ್ಪಟ್ಟವನು, ಇವರೆಲ್ಲರೂ ಸಾಕ್ಷಿಗೂ ಕೊಡುಕೊಳ್ಳುವ ವ್ಯವಹಾರಕ್ಕೂ ಅಪಾತ್ರರು.

ಬೆಂಕಿಹಚ್ಚುವವರಿಗೂ, ವ್ಯಭಿಚಾರಿಗಳಿಗೂ, ಕೊಲೆಯ ಪ್ರಯತ್ನಮಾಡುವವನಿಗೂ ಮರಣ ಶಿಕ್ಷೆಯಿತ್ತು. ಅರಸನು ತೀರ ಕ್ರೂರಶಿಕ್ಷೆ ಕೊಡಕೂಡದು. ಅದರಿಂದ ಅಪರಾಧಿಯ ಹೆಂಡತಿಯೂ ತಾಯಿಯೂ ನಾಶಹೊಂದುವರೆಂದು ಹೇಳಿದೆ. ೧೨ ವರ್ಷದ ಒಳಗಿನ ಹುಡುಗರ ಅಪರಾಧವು ಕ್ಷಮ್ಯವಾಗಿತ್ತು. ಕವಡಿಗಳು ನಾಣ್ಯಗಳಂತೆ ನಡೆಯುತ್ತಿದ್ದವು. ನಿಷ್ಕವೂ ಬಂಗಾರದ ತುಣುಕುಗಳೂ, ಮುಖ್ಯ ನಾಣ್ಯಗಳಾಗಿದ್ದವು. (ಶಾಂತಿ ೨೯೪. ೧೬; ವಿರಾಟ ೧೮। ೧೮)

ರಾಮಾಯಣದಲ್ಲಿ ದಂಡಿನ ವ್ಯೂಹರಚನೆಯಿಲ್ಲ. ದಂಡಿನ ಶಸ್ತ್ರಾಸ್ತ್ರಗಳು ತೀರ ಸಾದಾ ಇದ್ದವು. ಆದರೆ ಭಾರತದಲ್ಲಿ ಯುದ್ಧ ಪದ್ಧತಿಯು ಒಳ್ಳೇ ತಿದ್ದುಪಡಿಹೊಂದಿತ್ತು. ದಂಡಿನಲ್ಲಿ ಆಳು, ಕುದುರೆ, ತೇರು, ಆನೆಗಳಿರುತ್ತಿದ್ದವು. ಸೈನ್ಯದ ವಿವರವು ಹ್ಯಾಗೆಂದರೆ.—೧ ರಥವು, ೧ ಆನೆಯು, ೩ ಕುದುರೆಗಳು, ೫ ಕಾಲಾಳುಗಳು ಕೂಡಿದರೆ ೧ ಪತ್ತಿ ಯಾಗುತ್ತಿತ್ತು.

೩ ಪತ್ತಿ = ೧ ಸೇನಾಮುಖ.	೩ ವಾಹಿನಿ = ೧ ಪೃತನೆಯು.
೩ ಸೇನಾಮುಖ = ೧ ಗುಲ್ಮ.	೩ ಪ್ರತನೆ = ೧ ಚಮೂ.
೩ ಗುಲ್ಮ = ೧ ಗಣ.	೩ ಚಮೂ = ೧ ಅನೀಕಿನಿ.
೩ ಗಣ = ೧ ವಾಹಿನಿ.	೧೦ ಅನೀಕಿನಿ = ಅಕ್ಷೌಹಿಣಿ.

ಭಾರತಯುದ್ಧದಲ್ಲಿ ೧೮ ಅಕ್ಷೌಹಿಣಿ ಸೈನ್ಯವೆಂದರೆ ಸುಮಾರು ೪೦ ಲಕ್ಷ ಸೈನ್ಯವು ಕೂಡಿತ್ತು. ಇಷ್ಟು ಸೇನೆಯ ಅನ್ನ ನೀರಿನ ವ್ಯವಸ್ಥೆಯು ಹ್ಯಾಗೆ ಇತ್ತೋ? ಇದು ಅತ್ಯಾಶ್ಚರ್ಯಕರ ಸಂಗತಿಯು. ಕುದುರೆಗಳು ಕಾಂಬೋಜದೇಶಲ್ಲಿಯೂ ಆನೆಗಳು ವಿಂಧ್ಯ-ಹಿಮಾಲಯುಗಳಲ್ಲಿಯೂ ದೊರೆಯುತ್ತಿದ್ದವು. ಎಲ್ಲ ಸೈನಿಕರಲ್ಲಿ ರಥಿಕನೇ ಶ್ರೇಷ್ಠನು. ಶ್ರೇಷ್ಠ ಸಾರಥಿಯು ಅವಶ್ಯವಾಗಿದ್ದನೆಂಬದು ಶಲ್ಯ-ಶ್ರೀಕೃಷ್ಣರ ಸಾರಥ್ಯದಿಂದ ವ್ಯಕ್ತವಾಗುತ್ತದೆ. ಇಡಿ ದಂಡು ಒಬ್ಬನೇ ದಳವಾಯಿಯ ಆಳವಿನಲ್ಲಿರುತ್ತಿತ್ತು. ವಿಶೇಷವಾಗಿ ಮಳೆಗಾಲ ತೀರಿದ ಮೇಲೆ ಯುದ್ಧಕ್ಕೆ ಹೊರಡುತ್ತಿದ್ದರು. ಯುದ್ಧ ಪ್ರಾರಂಭವಾಗುವ ಪೂರ್ವದಲ್ಲಿ ದೂತನ ಮುಖಾಂತರವಾಗಿ ಒಪ್ಪಂದಕ್ಕಾಗಿ ಯತ್ನಿಸುತ್ತಿದ್ದರು. ದೂತನು ಅವಧ್ಯನು. ಯುದ್ಧದಲ್ಲಿ ಶತಘ್ನಿ, ಬಿಲ್ಲುಬಾಣಗಳು, ಗದೆ, ಕೊಡಲಿ, ಪರಿಘೆ, ತೋಮರ (ಕಡಗೋಲಿನಂಥ ಆಯುಧ) ತ್ರಿಶೂಲ, ಭಾಲೆ, ಚಕ್ರ, ಹಗ್ಗ, ಕವಣಿ, ವಜ್ರ ಮುಂತಾದ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಮೈಯಲ್ಲಿ ಕಬ್ಬಿಣದ ಕವಚಗಳನ್ನು ಹಾಕಿಕೊಳ್ಳುತ್ತಿದ್ದರು. ಬಾಣಬಿಡುವದಕ್ಕಾಗಿ ಕೈಗೆ ಚರ್ಮದ ಚೀಲ ಹಾಕಿಕೊಳ್ಳುತ್ತಿದ್ದರು. ಪಾಶುಪತಾಸ್ತ್ರ, ಅಗ್ನೇಯಾಸ್ತ್ರ, ವಾಯ್ವಸ್ತ್ರ ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು; ಆದರೆ ಅವುಗಳ ರಚನೆಯು ತಿಳಿಯುವಂತಿಲ್ಲ. ಕಾಳಗದಲ್ಲಿ ದಣಿದವರು, ಶಸ್ತ್ರಹೀನರು, ಓಡುವವರು, ಶರಣಾಗತರು, ರೋಗಿಗಳು, ಹುಡುಗರು, ಮುದುಕರು, ಎಚ್ಚರಿಲ್ಲದವರು, ಸಾರಥಿಯಿಲ್ಲದವರು, ಇವರ ಕೂಡ ಯುದ್ಧಮಾಡುತ್ತಿದ್ದಿಲ್ಲ. (ಶಾಂತಿ ೯೮-೪)

(೩) ವಿದ್ಯಾಪೀಠಗಳೂ ಕಲಿಸುವ ವಿಷಯಗಳೂ.

ಬ್ರಹ್ಮಚರ್ಯವು ವಿದ್ಯಾರ್ಜನೆಗಾಗಿ ಇರುವದು. ಲಕ್ಷವಿಲ್ಲದ, ಆಲಸ್ಯವುಳ್ಳ, ತನ್ನನ್ನು ತಾನೇ ಹೊಗಳಿಕೊಳ್ಳುವ, ಗರ್ವವುಳ್ಳ, ಹರಟೆಕೊಚ್ಚುವ, ಉದ್ಧಟತನವುಳ್ಳ, ಸುಖಕ್ಕೆ ಮೆಚ್ಚಿದ, ಹುಡುಗರು ವಿದ್ಯಾರ್ಜನೆಗೆ ಅಯೋಗ್ಯರು. ವಿದ್ಯಾರ್ಥಿಗಳು ಸರ್ವರೀತಿಯಿಂದ ಗುರುಗಳ ಆಧೀನದಲ್ಲಿರಬೇಕು. ಅವರು ನಗರದಿಂದ ದೂರವಾಗಿರುವ ಅಡವಿಯಲ್ಲಿ ಗುರುಗಳ ಬಳಿಯಲ್ಲಿ ವಿದ್ಯೆಕಲಿಯುತ್ತಿ

ದ್ದರು. ಒಬ್ಬೊಬ್ಬ ಗುರುವಿನ ಬಳಿಯಲ್ಲಿ ೧೦ ಸಾವಿರ ಶಿಷ್ಯರಿರುತ್ತಿದ್ದರು. ಇಂಥ ಗುರುವಿಗೆ ಕುಲಪತಿಯೆಂಬ ಹೆಸರು. ಗುರುವಿಗೆ ಕಾಲಕಾಲಕ್ಕೆ ಫೀ ಕೊಡುವ ಕಾರಣವಿದ್ದಿಲ್ಲ. ವಿದ್ಯೆಮುಗಿದಮೇಲೆ ಬೇಡಿದ ಗುರುದಕ್ಷಿಣೆಯನ್ನು ಕೊಡುತ್ತಿದ್ದರು. ಅರ್ಜುನನು ದ್ರೋಣನಿಗೆ ದ್ರುಪದನನ್ನು ಗುರುದಕ್ಷಿಣೆಯೆಂದು ತಂದು ಒಪ್ಪಿಸಿದನು. ಗುರುಗಳು ದರಿದ್ರರಾಗಿಯೇ ಇರುತ್ತಿದ್ದರು; ಆದರೆ ಪ್ರಸಂಗ ಬಂದಾಗ ಅರಸರು ಅವರಿಗೆ ಚನ್ನಾಗಿ ಸಹಾಯಮಾಡುತ್ತಿದ್ದರು. ವಿದ್ಯೆಯನ್ನು ಗಿಳಿಯಂತೆ ಅರ್ಥಜ್ಞಾನವಿಲ್ಲದೆ ಕಲಿಯುವದು ನಿರರ್ಥಕವೆಂದು ಹೇಳಿದೆ. (ಶಾಂತಿ೩೦೬।೧೩) ಪುಸ್ತಕಗಳಿಗಿಂತ ಗುರುಮುಖದಿಂದ ಕಲಿಯುವದೇ ಮೇಲಾದದ್ದೆಂದು ನಿಶ್ಚಯಿಸಿದ್ದರು. ಗುರುವು ಸೊಕ್ಕಿನವನಾಗಿ ಯೋಗ್ಯಾಯೋಗ್ಯ ವಿವೇಕವಿಲ್ಲದೆ ದುರ್ಮಾರ್ಗಿಯಾಗಿದ್ದರೆ ಅವನು ತ್ಯಾಜ್ಯನೆಂದು ತಿಳಿಯುತ್ತಿದ್ದರು. (ಉದ್ಯೋಗ ೧೭೮।೪೮) ಪ್ರತಿಯೊಂದು ಪಕ್ಷ ಪ್ರತಿಪದೆಯು ಸೂಟಿಯ ದಿವಸವು. ಆ ದಿನ ಓದುಕಲಿತರೆ, ಅದು ನಾಶವಾಗುವದು ಎಂದು ತಿಳಿಯುತ್ತಿದ್ದರು.

ನಾಲ್ಕುವೇದಗಳು, ಶತರುದ್ರೀಯ, ಶತಪಥಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳು, ಶಿಕ್ಷಾ-ಕಲ್ಪ-ವ್ಯಾಕರಣ-ನಿರುಕ್ತ-ಛಂದಸ್ಸು-ಜ್ಯೋತಿಷಗಳೆಂಬ ೬ ವೇದಾಂಗಗಳು, ಉಪವೇದಗಳು (ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಸ್ಥಾಪತ್ಯ) ಹಸ್ತಿಸೂತ್ರ, ಅಶ್ವಸೂತ್ರ, ರಥಸೂತ್ರ, ಯಂತ್ರಸೂತ್ರ, ೬ ಶಾಸ್ತ್ರಗಳು, ಪಂಚತಂತ್ರಮುಂತಾದ ಕಥಾಗ್ರಂಥಗಳು, ಕಾವ್ಯಗಳು, ಇವೆಲ್ಲ ಕಲಿಸತಕ್ಕವಿಷಯಗಳಾಗಿದ್ದವು. ವೈದ್ಯಶಾಸ್ತ್ರಜ್ಞಾನವು ಚೆನ್ನಾಗಿತ್ತು. ತ್ರಿದೋಷಗಳ ವಿವರವೂ, ಶರೀರ-ಮನಸ್ಸುಗಳ ಸಂಬಂಧವೂ, ಯಕೃತ್, ಪ್ಲೀಹಾ, ಆಮಾಶಯ, ರಕ್ತಾಶಯಗಳ ವಿವರವೂ, ಕಣ್ಣು, ತಲೆ, ಹಲ್ಲುಗಳ ರೋಗಗಳೂ, ಜ್ವರ, ಜಲೋದರ, ಕುಷ್ಟ, ಅಪಸ್ಮಾರ ಮುಂತಾದ ರೋಗಗಳೂ ಉಲ್ಲೇಖಿಸಲ್ಪಟ್ಟವೆ. ರಾಮಾಯಣದಲ್ಲಿ ಎಲ್ಲ ನಕ್ಷತ್ರಗಳ ಹೆಸರುಗಳು ಬಂದಿವೆ. ಆ ಕಾಲದಲ್ಲಿ ಚಾಂದ್ರವರ್ಷವು ಪ್ರಚಾರದಲ್ಲಿತ್ತು. ಸೂರ್ಯನ ಮೇಲಿನ ಕಲೆಗಳ ಜ್ಞಾನವೂ ಇತ್ತು. (ಯುದ್ಧಕಾಂಡ ೨೩।೯)

(ಘ) ಒಕ್ಕಲತನವೂ ವ್ಯಾಪಾರೋದ್ಯೋಗಗಳೂ.

ತಿಂಬುಂಬ ಪದಾರ್ಥಗಳ ಹುಟ್ಟುವಳಿಗೆ ಒಕ್ಕಲತನವು ಅತ್ಯವಶ್ಯವಾದದ್ದೆಂದು ಆ ಕಾಲದ ಜನರು ಮನಗಂಡಿದ್ದರು. ಜನಕರಾಜನು ಸ್ವತಃ ರಂಟೆ ಹೊಡೆಯುತ್ತಿದ್ದನು. (ಅಯೋಧ್ಯಾ ೧೧೮।೨೮) ಒಕ್ಕಲತನದಿಂದ ಜನರು

ಸುಖ-ಸಮೃದ್ಧಿಗಳುಳ್ಳವರಾಗಿದ್ದರು. (ಸಭಾ ೫೪।೭೯) ನೇಗಿಲಕ್ಕೆ ೨ ಇಲ್ಲವೆ ೪ ಎತ್ತುಗಳನ್ನು ಹೂಡುತ್ತಿದ್ದರು. ರೆಂಟೆ, ಕುಂಟೆ, ಗುದ್ದಲಿಗಳ ಹೆಸರುಗಳು ಅಲ್ಲಲ್ಲಿ ಬಂದಿವೆ. (ವನ ೧೦೦೭।೨೩) ಎಮ್ಮೆ ಆಕಳುಗಳ ಮಹತ್ವವು ಚೆನ್ನಾಗಿ ಗೊತ್ತಿತ್ತು. ಕರುಗಳಿರುವಾಗಲೇ ಗುರುತುಹಾಕಿ ಲೆಕ್ಕವಿಡುತ್ತಿದ್ದರು. ಆಕಳು ಅತ್ಯಂತಪವಿತ್ರವೆಂದು(ಈಗಿನಂತೆ) ತಿಳಿದಿದ್ದರು. ಆಕಳ ಮಲಮೂತ್ರಗಳನ್ನು ಸಹ ತಿರಸ್ಕರಿಸುತ್ತಿದ್ದಿಲ್ಲ. ಗೋಮಾಂಸವು ಅತ್ಯಂತ ನಿಷಿದ್ಧವಾಗಿತ್ತು. ಆಕಳನ್ನು ಕೊಲ್ಲುವವನು, ಅದರ ಮೈ ಮೇಲಿನ ಕೂದಲುಗಳಷ್ಟು ವರ್ಷಗಳ ವರೆಗೆ ನರಕದಲ್ಲಿ ಬೇಯುವನೆಂದು ಹೇಳಿರುವರು. (ಅನು ೭೪।೩।೪)

ವ್ಯಾಪಾರೋದ್ಯೋಗಗಳನ್ನು ವೈಶ್ಯರು ಮಾಡುತ್ತಿದ್ದರು. ಅದಕ್ಕಾಗಿ ಅವರು ಒಟ್ಟುಗೂಡಿ ಸಂಚರಿಸುತ್ತಿದ್ದರು. ಬಡ್ಡಿಯ ವ್ಯವಹಾರ ಮಾಡುವವರು ಹುಳಗಳಾಗುವರೆಂದು ಹೇಳಿದ್ದಾರೆ. (ಅನು ೧೧೭।೨೦) ಲೇಖನಕಲೆಯು ಬಹಳ ಬೆಳೆದಿತ್ತು. ಬರೆಯುವಾಗ ಒಮ್ಮೆ ಸಹ ಲೆಕ್ಕಣಿಕೆಯನ್ನು ನಿಲ್ಲಿಸದಂತೆ ಹೇಳಿದರೆ ಮಾತ್ರ ನಾನು ಲೇಖಕನಾಗುವೆನೆಂದು ಗಣಪತಿಯು ಹೇಳಿದ್ದಾನೆ. (ಆದಿ ೧।೭೮) ನೌಕಾರಿಕೆಯ ಕಲೆಯೂ ಚೆನ್ನಾಗಿತ್ತು. ೧೦೦ ಜನ ಅಂಬಿಗರು ಪ್ರತಿಯೊಂದರಲ್ಲಿರುವಂಥ ೫೦೦ ನಾವೆಗಳು ಗುಹನ ಬಳಿಯಲ್ಲಿದ್ದವಂತೆ (ಅಯೋಧ್ಯಾ ೮೪।೮) ಇದರಂತೆ ಕಂಚುಗಾರರು, ಕುಂಬಾರರು, ಅರ್ಕಸಾಲಿಗರು, ಅಗಸರು, ಸಿಂಪಿಗರು, ಮೀನುಬಲೆಗಾರರು, ಗಂದಿಗರು ಮುಂತಾದ ಹೋರೆಯವರ ಉಲ್ಲೇಖವು ಅಲ್ಲಲ್ಲಿರುವದು. ಇದಲ್ಲದೆ, ಭೂಮಿಯನ್ನು ಅಳೆಯುವವರ, ಅಡವಿಯನ್ನು ಕಡಿಯುವವರ, ಕಟ್ಟಿಗೆಕೊರೆಯುವವರ, ಸುಣ್ಣಗಾರರ, ಕಮ್ಮಾರರ, ಖಣಿಗಳಲ್ಲಿ ಕೆಲಸಮಾಡುವವರ, ಚಿತ್ರತೆಗೆಯುವವರ ಕೆಲಸಗಳೂ ಅಲ್ಲಲ್ಲಿ ತೋರುತ್ತವೆ.

ಫಲಜ್ಯೋತಿಷದಲ್ಲಿ ಆ ಕಾಲದ ಜನರ ನಂಬಿಗೆಯಿತ್ತು. ರಾಮನು ಹುಟ್ಟಿದಾಗ ಇದ್ದ ಎಲ್ಲ ಗ್ರಹಗಳನ್ನು ಹೇಳಿದ್ದಾರೆ. ಸ್ವಪ್ನಗಳನ್ನೂ ನಂಬುತ್ತಿದ್ದರು. ಸಾಮುದ್ರಿಕವು ಪ್ರಚಾರದಲ್ಲಿತ್ತು. ಯುದ್ಧಕಾಂಡದ ೪೮ನೇ ಅಧ್ಯಾಯದಲ್ಲಿ ಸ್ತ್ರೀಯರ ಸಾಮುದ್ರಿಕವು ಚೆನ್ನಾಗಿ ಹೇಳಿದೆ.

ಈ ಪ್ರಕಾರ ಪ್ರಾಚೀನ ಆರ್ಯರ ಸಮಾಜಸ್ಥಿತಿಯ ಚಿತ್ರವು ತಿಳಿದಷ್ಟು ತೆಗೆಯಲ್ಪಟ್ಟಿದೆ. ಇದು ಮಸ ಮಸಕಾಗಿರುವದು. ಕೆಲವು ನಿಯಮಿತ ವಿಷಯಗಳನ್ನು ತಕ್ಕೊಂಡು, ತೀರ ಸಂಕ್ಷೇಪವಾಗಿ ಹೇಳಿದ್ದೇವೆ. ಸಂಪೂರ್ಣ ವಿವೇಚನೆಯನ್ನು ಬುದ್ಧಿವಂತರು ಮಾಡಿದರೆ, ಸಾವಿರಾರು ಪುಟಗಳದೊಂದು ಪುಸ್ತಕವಾಗ

ಬಹುದು. ಆನೆಯು ದೊಡ್ಡದಾದರೂ ಗುಳಾಪಿನಲ್ಲಿ ಅದರ ಪ್ರತಿಬಿಂಬವು ತೀರ ಸಣ್ಣದಾಗಿ ಕಾಣುವಂತೆ, ಭಾರತ-ರಾಮಾಯಣ ಗ್ರಂಥಗಳೊಳಗಿನ ಸಮಾಜಸ್ಥಿತಿಯ ವಿವೇಚನೆಯು ತೀರ ಸ್ವಲ್ಪಸ್ಥಳದಲ್ಲಿ ಮಾಡಿರುತ್ತದೆ. ಭಾರತವು ಒಂದೂಕಾಲು ಲಕ್ಷ ಶ್ಲೋಕವುಳ್ಳದ್ದೂ, ರಾಮಾಯಣವು ೨೪ ಸಹಸ್ರ ಶ್ಲೋಕವುಳ್ಳದ್ದೂ ಇರುವದು. ಇವುಗಳೊಳಗಿನ ಸಾಮಾಜಿಕ ಸ್ಥಿತಿಯನ್ನು ಚಂದ್ರಿಕೆಯ ಕೆಲವು ಪುಟಗಳಲ್ಲಿ ಹೇಳುವದೆಂದರೆ, ಇಡಿ ಸಮುದ್ರವನ್ನು ಗಿಂಡಿಯಲ್ಲಿ ತುಂಬುವ ಯತ್ನದಂತೆ ಹಾಸ್ಯಾಸ್ಪದವಿರುತ್ತದೆ. ಆದರೂ ಸಹೃದಯರಾದ ವಾಚಕರು ದೋಷಗಳ ಬಗ್ಗೆ ಕ್ಷಮಿಸುವರೆಂದು ನಂಬಿಗೆಯುಂಟು.

ಶ್ರೀಮದ್ವೇದವ್ಯಾಸರು, “ಭಾರತದಲ್ಲಿಲ್ಲದ್ದು ಎಲ್ಲಿಯೂ ಇಲ್ಲ, ಬೇರೆ ಕಡೆಯಲ್ಲಿದ್ದದ್ದಲ್ಲ ಭಾರತದಲ್ಲಿದೆ” ಎಂದು ಹೇಳಿದ್ದಾರೆ. ಇಂಥ ಅಮೂಲ್ಯವಾದ ಪ್ರಚಂಡ ಗ್ರಂಥದಲ್ಲಿಯೂ ರಾಮಾಯಣದಲ್ಲಿಯೂ ಅಲ್ಪ ಬುದ್ಧಿಗೆ ಮಹತ್ವದವೆಂದು ತೋರಿದ ಕೆಲವು ಸಂಗತಿಗಳು ಪ್ರಾಚೀನ ಗ್ರಂಥದ ಅಭಿಮಾನಿಗಳಾದ ಚಂದ್ರಿಕೆಯ ವಾಚಕರಿಗೆ ಪ್ರೇಮಪೂರ್ವಕವಾಗಿ ಅರ್ಪಿಸಲ್ಪಟ್ಟಿರುತ್ತವೆ.

೩ ವರ್ಣವ್ಯವಸ್ಥೆಯಿಂದ ಹಿಂದು-ಸಮಾಜದಲ್ಲಿ ಆದ ಅಚ್ಚುಕಟ್ಟುತನವು.

ಅತಿ ಪ್ರಾಚೀನಕಾಲದಿಂದ ಮನುಷ್ಯರು ಎರಡು ಪ್ರಕಾರದವರಾಗುತ್ತ ಬಂದಿದ್ದಾರೆ. ಕೆಲವರು ಧರ್ಮನಿಷ್ಠರಾಗುತ್ತಾರೆ, ಬೇರೆ ಕೆಲವರು ಕಾಮಚಾರಿಗಳಾಗುತ್ತಾರೆ. ನೀತಿಯನ್ನವಲಂಬಿಸಿ ಯಮ-ನಿಯಮಾದಿ ಧರ್ಮಗಳಂತೆ ನಡೆಯುವವರು ಧರ್ಮನಿಷ್ಠರು; ಒಳಿತು-ಕೆಡಕುಗಳ ವಿಚಾರವಿಲ್ಲದೆ ಮನಬಂದಂತೆ ನಡೆಯುವವರು ಕಾಮಚಾರಿಗಳು. ಭಗವದ್ಗೀತೆಯಲ್ಲಿ ದೈವೀ ಸಂಪತ್ತಿನವರು, ಆಸುರೀ ಸಂಪತ್ತಿನವರು ಎಂದು ಎರಡು ವಿಭಾಗ ಮಾಡಿರುವ ಇಂಗಿತವಾದರೂ ಇದೇ ಇರುತ್ತದೆ.

ಸಮಾಜದ ಅತಿ ಸಣ್ಣರೂಪವೇ ದಂಪತಿಗಳು. ದಂಪತಿಗಳು ಅವ್ಯಭಿಚಾರ ವೃತ್ತಿಯಿಂದ ನಡೆಯುವದರಿಂದ ಧರ್ಮಪ್ರಜೆಯೂ, ಅಧರ್ಮಾಚರಣೆಯಿಂದ ನಡೆಯುವದರಿಂದ ಕಾಮಚಾರಿ ಪ್ರಜೆಯೂ ಉತ್ಪನವಾಗುತ್ತವೆ. ಪ್ರಜಾವೃದ್ಧಿಯಾದಂತೆ ಭಿನ್ನವೃತ್ತಿಯ ಮೂಲಕವಾಗಿ ಸಮಾಜದಲ್ಲಿ ಎರಡು ಪಂಗಡಗಳಾಗುತ್ತವೆ. ಅವುಗಳಲ್ಲಿ ಸ್ವಾಭಾವಿಕವಾಗಿ ವೈರವುಂಟಾಗುವದು. ಧರ್ಮನಿಷ್ಠರಲ್ಲಿ ಯಮ-ನಿಯಮಾದಿ ಸದ್ಗುಣಗಳೂ, ಒಕ್ಕಟ್ಟೂ ಇರುತ್ತವೆ; ಕಾಮಚಾರಿಗಳಲ್ಲಿ ಸ್ವಚ್ಛಂದವೃತ್ತಿಯೂ ತಮ್ಮ ತಮ್ಮೊಳಗೆ ಮತ್ಸರವೂ ಇರುತ್ತವೆ. ಆದ್ದ

ರಿಂದ ಆವೆರಡು ಪಂಗಡಗಳಲ್ಲಿ ಯುದ್ಧವೊದಗಲು ಧರ್ಮನಿಷ್ಠರಿಗೆ ಜಯವಾಗಿ ಕಾಮಚಾರಿಗಳು ಅವರ ದಾಸರಾಗುತ್ತಾರೆ. ಹೀಗೆ ಹಿಂದೂ ಸಮಾಜದ ಆರಂಭದ ಸ್ಥಿತಿಯಲ್ಲಿ ಸಾವಿರಾರು ವರ್ಷ ಯುದ್ಧಗಳು ನಡೆಯಲು, ಧೈರ್ಯ—ಶೌರ್ಯಾದಿಗುಣಗಳುಳ್ಳ ಕೆಲವು ಮನೆತನಗಳು ಮಾನ್ಯತೆ ಹೊಂದಿದವು. ಅವರಿಗೆ ದೂರಾಲೋಚನಹೇಳುವ ವಿಚಾರವಂತರ ವರ್ಗವೊಂದು ನಿರ್ಮಾಣವಾಯಿತು. ಇವೆರಡರ ಜೀವನಯಾತ್ರೆಯು ಸುಸೂತ್ರಸಾಗಲಿಕ್ಕೆ ಒಕ್ಕಲತನ-ಕೈಗಾರಿಕೆಗಳನ್ನು ಮಾಡುವ ಮೂರನೆಯ ಮನೆತನದವರು ಬೆಳಕಿಗೆ ಬಂದರು. ಇವರೆಲ್ಲರ ಪರಿಚರ್ಯವನ್ನು ಬೇರೆ ಕೆಲವರು ಕೈಕೊಂಡರು. ಹೀಗೆ ಆದ ನಾಲ್ಕು ವರ್ಗಗಳು ಪರಸ್ಪರ ಪೋಷಕಕಾರ್ಯವನ್ನು ಜರಗಿಸಿ ಸುಖದಿಂದ ಬಾಳಹತ್ತಿದವು. ಬಹುಕಾಲ ಸಂದ ಬಳಿಕ ಗುಣಕರ್ಮದಂತೆ ವಿಭಾಗಹೊಂದಿರುವ ಈ ನಾಲ್ಕು ವರ್ಗಗಳನ್ನು ಸ್ಥಿರಪಡಿಸಿ ಬಿಡಬೇಕೆಂದು ಸಮಾಜದಲ್ಲಿ ಬಹುಜನರು ಬಯಸಿದರು. ಇದೇ ಚಾತುರ್ವರ್ಣ್ಯವ್ಯವಸ್ಥೆಯು. ಇದನ್ನು ಎಲ್ಲಕ್ಕೂ ಮೊದಲು ಗೃತ್ಸಮದಶೌನಕನೆಂಬ ಅರಸನು ಅಮಲಿನಲ್ಲಿ ತಂದನು. (ವಿಷ್ಣುಪುರಾಣ ೪ ನೇಭಾಗ, ೮ ನೇ ಅಧ್ಯಾಯ. ೧) ಪ್ರಾರಂಭದಲ್ಲಿ ಚಾತುರ್ವರ್ಣ್ಯವ್ಯವಸ್ಥೆಯಲ್ಲಿ ಬಹಳ ಶಿಥಿಲತೆಯಿತ್ತು. ಬ್ರಾಹ್ಮಣನು ವೀರತ್ವವನ್ನು ತೋರಿಸಿ ಕ್ಷತ್ರಿಯನಾಗುತ್ತಿದ್ದನು. ಕ್ಷತ್ರಿಯನು ತಪಸ್ಸಿದ್ಧಿಯಿಂದ ಬ್ರಾಹ್ಮಣನಾಗುತ್ತಿದ್ದನು. ಉಚ್ಚವರ್ಣದವರು ಹೀನಕೃತ್ಯ ಮಾಡಿದರೆ, ಶೂದ್ರರಲ್ಲಿ ಸೇರಿಸಲ್ಪಡುತ್ತಿದ್ದರು. ಪೃಷದನು ಗೋವಧ ಮಾಡಿದ್ದರಿಂದ ಶೂದ್ರನಾದನು. ನಾಭಾಗನು ವೈಶ್ಯನಾದನು. (ವಿಷ್ಣು ಪು. ೪ ನೇ ಅ.) ಬರಬರುತ್ತ ಸ್ವವರ್ಣದ ಬಗ್ಗೆ ಅಭಿಮಾನವೂ ವರ್ಣಚ್ಯುತಿಯಾಗುವ ಭೀತಿಯೂ ಹೆಚ್ಚಾಗಿ ವರ್ಣವ್ಯವಸ್ಥೆ ದೃಢಮೂಲವಾಯಿತು. ಬ್ರಾಹ್ಮಣರು ಅಧ್ಯಯನ-ಅಧ್ಯಾಪನ-ಯಜನ-ಯಾಜನಗಳಲ್ಲಿ ತೊಡಗಿ, ದಾನಪ್ರತಿಗ್ರಹಗಳಿಂದ ನಿರ್ವಾಹಸಾಗಿಸುತ್ತಿದ್ದರು. ಅವರಿಗೆ ಬೇರೆ ಆಸ್ತಿಯಿದ್ದಿಲ್ಲ, ಅವರು ತಮ್ಮ ಧರ್ಮವನ್ನು ಚೆನ್ನಾಗಿ ಪಾಲಿಸುವರು, ಹೊಸ ಶೋಧಗಳನ್ನು ಮಾಡಿ, ಆ ಆ ಕೈಗಾರಿಕೆಯವರಿಗೆ ಕಲಿಸುವರು, ಪರಸ್ಪರರಲ್ಲಿ ಧಾರ್ಮಿಕ ಕಲಹಗಳುಂಟಾದರೆ, ಪಂಚರ ಒಪ್ಪಿಗೆಯಂತೆ, ಶಾಸ್ತ್ರವನ್ನು ಅನುಸರಿಸಿ, ಎಲ್ಲರೆದುರಿಗೆ ನಿರ್ಭಿಡೆಯಿಂದ ತೀರ್ಪುಹೇಳುವರು, ಸ್ವತಃ ಶಾಂತರೂ ದಾಂತರೂ ನಿರ್ಮತ್ಸರರೂ ನಿರಹಂಕಾರಿಗಳೂ ನಿರ್ಧನರೂ ನಿಸ್ಪೃಹರೂ ಇದ್ದದರಿಂದ ಅವರಿಂದ, ಪಕ್ಷಪಾತವಾಗುತ್ತಿದ್ದಿಲ್ಲ. ಅಂತೇ ಅವರಿಗೆ "ಭೂದೇವ"ಎಂಬ ಸಂಜ್ಞೆಯುಂಟಾಯಿತು. ನಿರ್ದ್ರವ್ಯರೂ, ಭೈಕ್ಷ್ಯವೃತ್ತಿ

ಯುವರೂ, ವರ್ತಮಾನ ಭೂತ ಭವಿಷ್ಯಜ್ಞರೂ, ಸರ್ವಲೋಕ ಹಿತತತ್ಪರರೂ ಆಗಿದ್ದದರಿಂದ, "ಉತ್ಪತ್ತಿರೇವ ವಿಪ್ರಸ್ಯಮೂರ್ತಿ ಧರ್ಮಸ್ಯಶಾಶ್ವತೀ"ಎಂದು ಅನ್ನಿಸಿಕೊಳ್ಳಲಿಕ್ಕೆ ತಕ್ಕವರಾಗಿದ್ದರು; ಇಂಥ ಪವಿತ್ರವಾದ ಪುಣ್ಯಜನಾಂಗವು ಹಿಂದಕ್ಕೆ ಇತ್ತೆಂದು ಹೇಳಿದರೆ, ಪಾಪಮಯವಾದ ಈಗಿನ ಕಾಲದಲ್ಲಿ ಸುಳ್ಳೆಂದು ತೋರುವದು. ಬ್ರಾಹ್ಮಣರಂತೆ ಆಗಿನ ಕ್ಷತ್ರಿಯರೂ ದೈತ್ಯಾಸುರರು ಮೊದಲಾದ ಶತ್ರುಗಳಿಗೆ ಬೆನ್ನುತೋರಿಸುತ್ತಿದ್ದಿಲ್ಲ. ಸಮಾಜದ ಹಾಗು ರಾಷ್ಟ್ರದ ಸಂರಕ್ಷಣೆಗಾಗಿ ಪ್ರಾಣವನ್ನು ಸಹ ಆಹುತಿಕೊಡುತ್ತಿದ್ದರು. ಸೋಲುವ ಹೊತ್ತು ಒದಗಿದರೂ ತೇಜೋಭಂಗವನ್ನು ಮಾಡಿಕೊಳ್ಳದೆ, ಬಂದ ಸಂಕಟಗಳನ್ನು ನಿವಾರಿಸಲಿಕ್ಕೆ ಮಿತಿಮೀರಿ ಹೆಣಗುತ್ತಿದ್ದರು. ಸಂಕಟಗಳೇ ಒದಗದಂತೆ ಮೊದಲಿನಿಂದಲೇ ಎಚ್ಚರದಿಂದಿರುತ್ತಿದ್ದರು. ಬ್ರಾಹ್ಮಣರು ಅವರ ಯೋಗಕ್ಷೇಮ ನೋಡುತ್ತ, ಯಜ್ಞಾದಿಗಳಿಂದ ಸಮಾಜದಲ್ಲಿ ಒಕ್ಕಟ್ಟು ಬೆಳಿಸುತ್ತ, ಅಪರಿಮಿತ ದ್ರವ್ಯವನ್ನು ವೆಚ್ಚಮಾಡಿಸಿ, ಜ್ಞಾನ-ವಿಜ್ಞಾನ-ಸಾಧನಸಂಪತ್ತಿಯನ್ನು ಒದಗಿಸಿ ಕೊಡುತ್ತ ಸಹಾಯಮಾಡುತ್ತಿದ್ದರು. ಇಂಥ ಸರ್ವೈಶ್ವರ್ಯ ಸಂಪನ್ನರಾದ ಮನು, ಇಕ್ಷ್ವಾಕು, ಸಗರ, ಜನಕ,ರಾಮ, ಮಾಂಧಾತ ಮುಂತಾದ ಪುಣ್ಯಶ್ಲೋಕ ಕ್ಷತ್ರಿಯ ರಾಜರ ಹೆಸರುಗಳು ಈಗ ಸಹ ಎಲ್ಲ ಭಾರತೀಯರ ಬಾಯಲ್ಲಿರುತ್ತವೆ.

ಇಂಥ ಧರ್ಮಮೂರ್ತಿಗಳಾದ ಬ್ರಾಹ್ಮಣರೂ ಶೌರ್ಯಸಂಪನ್ನರಾದ ಕ್ಷತ್ರಿಯರೂ ಆ ಕಾಲದಲ್ಲಿ ಹಿಂದೂಸಮಾಜದಲ್ಲಿರುತ್ತಿದ್ದರು. ಆದ್ದರಿಂದ ಸಮಾಜದಲ್ಲಿ ಶ್ರಮವಿಭಾಗವಾಗಿ ಪರಸ್ಪರ ಶ್ರಮವು ಪರಸ್ಪರರಿಗೆ ಉಪಯೋಗಿಸಲ್ಪಡುತ್ತಿತ್ತು. ಅದರಿಂದ ಸಮಾಜದಲ್ಲಿ ಒಳ್ಳೇ ಸುವ್ಯವಸ್ಥೆಯುಂಟಾಗಿತ್ತು. ಇಂಥ ಸಮಾಜವು ಬಹುಕಾಲ ಸುಖದಿಂದ ಬಾಳಿದ್ದೂ, ಬಗೆಬಗೆಯ ಆಘಾತಗಳು ಬಡಿದರೂ ನಾಶವಾಗದೆ ಜೀವದಿಂದ ಉಳಿದದ್ದೂ, ಬಹು ಚಮತ್ಕಾರವೂ ಮನೋರಂಜಕವೂ ಆಗಿರುವದು. ಯಾವದೋ ಒಂದು ಗೂಢಕಾರಣವು ಇದ್ದದರಿಂದಲೇ ಹಿಂದೂಸಮಾಜವು ಇನ್ನೂ ಸ್ಥಿರವಾಗಿ ಉಳಿದದೆ. ಅಂಥ ಗೂಢಕಾರಣವು ಯಾವದೆಂದರೆ, ಚಾತುರ್ವರ್ಣ್ಯವ್ಯವಸ್ಥೆಯಿಂದ ಪ್ರತಿಯೊಬ್ಬ ಹಿಂದೂ ಮನುಷ್ಯನನ್ನು ಆವರಿಸಿಕೊಂಡಿರುವ ಧರ್ಮವು. ಇಲ್ಲಿ ಧರ್ಮವೆಂಬ ಶಬ್ದವನ್ನು "ಪರಮೇಶ್ವರನನ್ನು ಹೊಂದಿಕೊಳ್ಳುವ ಸಾಧನವು" ಎಂಬ ಅರ್ಥದಿಂದ ಉಪಯೋಗಿಸಿಲ್ಲ. ಆದರೆ "ಸರ್ವಜನರಿಗೆ ಹಿತವನ್ನು ಮಾಡುವ ವರ್ತನವನ್ನು ನೆಲೆಗೊಳಿಸುವ ಕಟ್ಟಳೆಗಳ ಸಮುದಾಯವು" ಧರ್ಮವೆಂದು ಉಪಯೋಗಿಸಿರುತ್ತದೆ. ಇದರಲ್ಲಿ ಹಲವುಬಗೆಯ

ನಿಯಮಗಳ ಸಮಾವೇಶವಾಗುತ್ತದೆ. ಸಂಸಾರದ ನಿಯಮಗಳು, ನಿತ್ಯಕರ್ಮದ ನಿಯಮಗಳು, ನ್ಯಾಯನಿರ್ಣಯದ ನಿಯಮಗಳು, ಪವಿತ್ರತೆಯ ಬಗ್ಗೆ ಇರುವ ನಿಯಮಗಳು, ಉಪಾಸನೆಯ ನಿಯಮಗಳು, ಧನೋತ್ಪಾದನದ ನಿಯಮಗಳು, ಸೇವೆ ಮಾಡುವ ನಿಯಮಗಳು, ಸ್ತ್ರೀಪುರುಷ–ಸಮಾಗಮದ ನಿಯಮಗಳು, ದಾನಪ್ರತಿಗ್ರಹ ಅಧ್ಯಯನಾಧ್ಯಾಪನ, ಪ್ರಜೋತ್ಪಾದನ, ಅಂತ್ಯೇಷ್ಟಿ ಇವುಗಳ ಸಂಬಂಧದ ನಿಯಮಗಳು ಇವೆಲ್ಲ ಮೇಲೆಹೇಳಿದ ವ್ಯಾವಹಾರಿಕ ಧರ್ಮದಲ್ಲಿಯೇ ಸೇರಿಕೊಳ್ಳುತ್ತವೆ. ಇವೆಲ್ಲ ನಿಯಮಗಳನ್ನು ಪಾಲಿಸುವ ದೇಶವೇ ಧರ್ಮರಾಜ್ಯವು, ಅದೇ ರಾಮರಾಜ್ಯವು, ಅದೇ ಸೌರಾಜ್ಯವು. ಇಂಥ ಧರ್ಮರಾಜ್ಯವನ್ನು ಕ್ಷತ್ರಿಯ ರಾಜನು ಬ್ರಾಹ್ಮಣರ ಆಲೋಚನೆಯಂತೆ ನಡಿಸುವನು. ರಾಜ್ಯದಲ್ಲಿ ಶತಗ್ರಾಮಮಂಡಲ—ದಶಗ್ರಾಮಮಂಡಲಗಳುಇರುವವು. ಒಂದು ಗ್ರಾಮವು ಸಹ, ಸ್ವರಾಜ್ಯ ಸುಖವನ್ನನುಭವಿಸುತ್ತಿರುವದು. ಹ್ಯಾಗಂದರೆ:—ಒಬ್ಬ ಕ್ಷತ್ರಿಯನು ಗ್ರಾಮಾಧ್ಯಕ್ಷನಿರುವನು. ಬ್ರಾಹ್ಮಣ, ವೈಶ್ಯರಲ್ಲಿ ಪ್ರಮುಖರು ಅವನಿಗೆ ಆಲೋಚನೆ ಹೇಳುವರು. ಪ್ರಮುಖ ಶೂದ್ರನು ಪೋಲಿಸ ಅಮಲದಾರನಾಗಿರುವನು. ಊರಲ್ಲಿ ಜಗಳವುಂಟಾದರೆ ಗ್ರಾಮಪಂಚಾಯತಿ ಕೂಡಿ, ಬ್ರಾಹ್ಮಣನ ಶಾಸ್ತ್ರಾಧಾರದಂತೆ ನ್ಯಾಯನಿರ್ಣಯ ಹೇಳುವದು. ಹೀಗೆ ರಾಜಕರಣವು ಸಹ ಧರ್ಮಕ್ಕನುಸರಿಸಿರಾಗುವದು.

ಗ್ರಾಮದ ಘಟಕವಾದ ಕುಟುಂಬಗಳು ಸಹ ಧರ್ಮಾನುಸಾರವಾಗಿ ನಡೆಯುವವು. ದಂಪತಿಗಳು, ಸಹಧರ್ಮಚಾರಿಗಳಾಗಿ ಆಮರಣ ನಡಕೊಳ್ಳುವರು. “ಆತ್ಮಾವೈ ಪುತ್ರನಾಮಾಸಿ” ಎಂಬ ವಚನದಂತೆ ವಂಶದ ಪವಿತ್ರತೆಯನ್ನು ಮಹಾತ್ಮ್ಯವನ್ನೂ ಕಾಯ್ದುಕೊಳ್ಳಲಿಕ್ಕೆ ಪ್ರತಿಯೊಬ್ಬನು ಹೆಣಗುವನು. “ಯಥಾಬೀಜಸ್ತಥಾಂಕುರಃ। ಯಥಾಕ್ಷೇತ್ರಸ್ತಥಾಂಕುರಃ,, ಎಂಬ ಮಾತಿನ ಮರ್ಮವು ಚೆನ್ನಾಗಿ ರೂಢವಾಗಿರುವದು; ಇದರಿಂದಲೇ ಸಮಾನ ಧರ್ಮದವರಲ್ಲಿ ವಿವಾಹಗಳಾಗುವವು. ಅನಾರ್ಯರ ಶರೀರಸಂಬಂಧ ಮಾಡಲಿಕ್ಕೆ ಪರಾಙ್ಮುಖತೆಯು ತೋರುವದು. ಈ ರೀತಿಯಿಂದ ಜಾತಿಭೇದವು ಉತ್ತರೋತ್ತರ ದೃಢವಾಗುತ್ತ ಹೋಯಿತು.

ಚಾತುರ್ವರ್ಣ್ಯವ್ಯವಸ್ಥೆಯಿಂದ ಸರ್ವಾಂಗ ಸುಂದರವಾದ ಹಿಂದೂ ಸಮಾಜವು ಒಮ್ಮೆ ಒಳಕಾರಣಗಳಿಂದಲೂ ಮತ್ತೊಮ್ಮೆ ಹೊರಗಿನ ಕಾರಣಗಳಿಂದ ಅವನತಿ ಹೊಂದಿದಂತೆ ತೋರುವದು. ಯಾವ ಸಮಾಜದವರಾದರೂ ತಮ್ಮ

ತವೊಳಗೆ ಬಡಿದಾಡಿ, ಅವನತಿಯನ್ನಾಗಲಿ ನಾಶವನ್ನಾಗಲಿ ಹೊಂದುವರು. ಇಲ್ಲವೆ ಶತ್ರುಗಳಿಂದ ಸೋತು ಅವನತಿ ಹೊಂದುವರು. ಚಾತುರ್ವರ್ಣ್ಯವ್ಯವಸ್ಥೆಯಲ್ಲಿ ಪ್ರತಿಯೊಬ್ಬನು ಗುಣಕರ್ಮಗಳಿಂದ ಬದ್ಧನಾಗಿ ತನ್ನ ವರ್ಣದಲ್ಲಿಯೇ ಏಳ್ಗೆ ಹೊಂದಲಿಕ್ಕೆ ಪೂರ್ಣ ಅನುಕೂಲತೆಯಿರುವದು, ಮಹತ್ತಮವಾದ ತಪಸ್ಸು ಮಾಡಿ ಬ್ರಾಹ್ಮಣರ ಸಮ್ಮತಿಹೊಂದಿ ಹೆಚ್ಚಿನ ವರ್ಣದಲ್ಲಿ ಸೇರಲಿಕ್ಕೂ ಅನುಕೂಲತೆಯಿರುವದು, ಆದ್ದರಿಂದ ಸಮಾಜದಲ್ಲಿ ವ್ಯಾಪಕವಾದ ಅವ್ಯವಸ್ಥೆಯುಂಟಾಗಲಿಕ್ಕೆ ಮಾರ್ಗವಿರಲಿಲ್ಲ. ಆದರೆ ಬ್ರಾಹ್ಮಣರು 'ನಾವು ಹೆಚ್ಚಿನವರು' ಕ್ಷತ್ರಿಯರು 'ನಾವು ಹೆಚ್ಚಿನವರು' ಎಂದು ಹಟತೊಡುವದರಿಂದ ಒಮ್ಮೊಮ್ಮೆ ಬಡಿದಾಟವೇಳುತ್ತಿತ್ತು. ಆದರಲ್ಲಿ ಇಬ್ಬರೂ ಬಲಹೀನರಾಗುತ್ತಿದ್ದರು. ಇಂಥ ಉದಾಹರಣೆಗಳು ಪುರಾಣಗಳಲ್ಲಿ ಎಷ್ಟೋ ಇರುತ್ತವೆ. ಆದರೆ ಸಮಾಜದ ಈ ಬಲಹೀನತೆಯು ಸ್ವಲ್ಪಕಾಲ ಮಾತ್ರ ಉಳಿಯುತ್ತಿತ್ತು. ಬೇಗನೆ ಕ್ಷತ್ರಿಯರಾಜನು ಬ್ರಾಹ್ಮಣನ ಆಲೋಚನೆ ಕೇಳುತ್ತ ಪ್ರಜಾಪಾಲನತತ್ಪರನಾಗುತ್ತಿದ್ದನು.

ಗುಣಕರ್ಮಗಳಿಗನುಸರಿಸಿ, ಮೂಲತಃ ನಾಲ್ಕೇ ಜಾತಿಗಳಿದ್ದವು. ಈಗ ಹಲವು ಜಾತಿಗಳುಂಟಾಗಿರುವವು. ಇದರ ಕಾರಣವೇನೆಂಬದನ್ನು ವಿಚಾರಮಾಡುವ:—ವರ್ಣವ್ಯವಸ್ಥೆಯು ಋಗ್ವೇದ ಕಾಲದಿಂದ ರೂಢವಾಗಿದೆ. ಪುರುಷಸೂಕ್ತಉಂಟಾಗುವ ಪೂರ್ವದಲ್ಲಿಯೇ ೪ ವರ್ಣಗಳುಂಟಾಗಿದ್ದವೆಂದು ಅದರ ಭಾಷೆಯಿಂದ (ಕೃತಃ) ಗೊತ್ತಾಗುತ್ತದೆ. ಋಗ್ವೇದಕಾಲದಲ್ಲಿ ನಾಲ್ಕೂ ವರ್ಣಗಳವರು ತಮ್ಮ ತಮ್ಮ ವರ್ಣಗಳ ಹೆಣ್ಣನ್ನೇ ಮದುವೆಮಾಡಿಕೊಳ್ಳುವದು ಉಚಿತವೆಂತಲೂ, ಬೇರೆ ವರ್ಣದ ಕನ್ಯೆಯನ್ನು ವರಿಸುವದು ಗೌಣವೆಂತಲೂ ತಿಳಿಯುತ್ತಿದ್ದರು. ಪಾಂಡವರ ಕಾಲದಲ್ಲಂತೂ ನಾಲ್ಕೂ ವರ್ಣಗಳವರು ಅನ್ಯವರ್ಣಗಳ ಕನ್ಯೆಯನ್ನು ಲಗ್ನಮಾಡಿಕೊಳ್ಳುವದು ತೀರ ಕಡಿಮೆ ಮಾಡಿದ್ದರು. ಬೇರೆ ಬೇರೆ ವರ್ಣಗಳ ದಂಪತಿಗಳಿಂದ ಹುಟ್ಟಿದವರಿಗೆ ಸಂಕರಜರೆನ್ನುತ್ತಿದ್ದರು. ಅವರ ಜಾತಿಯ ಹೆಸರು ಬೇರೆಯಾಯಿತು. ಬ್ರಾಹ್ಮಣ–ಕ್ಷತ್ರಿಯರ ಬೆರಿಕೆಯಿಂದ ಹುಟ್ಟಿದ ಜನರು ಸೂತರೆಂದೆನಿಸಿಕೊಳ್ಳುತ್ತಿದ್ದರೆಂದು ಭಾರತದಲ್ಲಿ ಹೇಳಿದೆ. ಮೂಲ ಜಾತಿ ಬಿಟ್ಟು ಹೋಗಿ, ಹೊಸ ಜಾತಿಯ ಪ್ರಜೆಯುಂಟಾಗುವದೆಂಬ ಹೆದರಿಕೆಯುಂಟಾಯಿತು. ತಂದೆಯು ತನ್ನ ಹೆಂಡತಿಯಲ್ಲಿ ತನ್ನ ಸರ್ವಸಂಸ್ಕಾರದೊಂದಿಗೆ ಪುತ್ರರೂಪದಿಂದ ಹುಟ್ಟುವನೆಂಬ ಆರ್ಯರ ತಿಳುವಳಿಕೆಯು, ಅನುಲೋಮ–ಪ್ರತಿಲೋಮ ವಿವಾಹಕ್ಕೆ ಅಡ್ಡಿಮಾಡಿತು. ಸಂಸ್ಕಾರ ಹೀನವಾಗಿ, ಬೇರೆ ತರದ ಸ್ವಭಾ

ವೋದ್ಯೋಗಗಳುಳ್ಳದ್ದಾಗಿ, ಬೇರೆ ಪರಿಸ್ಥಿತಿಯನ್ನು ತಾಳುವಂಥ ಅವಗುಣದ ಸಂತತಿಯನ್ನುಂಟುಮಾಡುವದು, ಸಮಾಜಕ್ಕೆ ಹಾನಿಕರವೆಂದು ಆಗಿನ ಆರ್ಯರು ತಿಳಿಯುತ್ತಿದ್ದರು. ಆದರೆ ತಮ್ಮ ವರ್ಣಕ್ಕೆ ಉಪಯೋಗಿಸುವ ಉತ್ಕೃಷ್ಟ ಪ್ರಜೆಯನ್ನುಂಟುಮಾಡಬೇಕೆಂದು ಬಯಸುತ್ತಿದ್ದರು. ಆದರೂ ಬೆರಿಕೆಯ ಜಾತಿಗಳುಂಟಾಗುತ್ತಲೇ ಇದ್ದವು. ಅವುಗಳ ಉಪಜೀವನಕ್ಕೆ ವೈಶ್ಯ-ಶೂದ್ರರು ಮಾಡುವ ಕೆಲವು ಹೋರೆಗಳು ನಿಯಮಿಸಿ ಕೊಡಲ್ಪಟ್ಟವು. ಇಂಥ ಸಂಕರ ಜಾತಿಯಲ್ಲಿ ಸಚ್ಛೀಲರಾದವರು ೩। ೫। ೭ ತಲೆಗಳ ತರುವಾಯ ಮೂಲ ಶ್ರೇಷ್ಠಜಾತಿಗೆ ಸೇರಲಿಕ್ಕೆ ಮಾರ್ಗಮಾಡಿಕೊಟ್ಟದ್ದರು. ಅಷ್ಟು ದೀರ್ಘಕಾಲದನಂತರ, ಬಂಧು ಬಳಗದವರನ್ನೂ, ಪರಂಪರೆಯ ಹೋರೆಯನ್ನೂ, ತೊರೆದು ಯಾರೂ ಮೂಲ ವರ್ಣವನ್ನು ಸೇರಲಿಕ್ಕೆ ಬಯಸಿದಂತೆ ತೋರಲಿಲ್ಲ. ಈ ಸಂಕರ ಜಾತಿಗಳು ತಂದೆಯ ವರ್ಣಕ್ಕಿಂತ ಕಡಿಮೆಯಾದ, ಆದರೆ ತಾಯಿಯ ವರ್ಣಕ್ಕಿಂತ ಮೇಲ್ತರದ್ದಾದ ಸ್ಥಾನವನ್ನು ಪಡೆದವು. ಮೊದಲಿದ್ದ ಸೂತ-ಮಾಗಧ ಮುಂತಾದ ಸಂಕರಜಾತಿಗಳು ಲೋಪಹೊಂದಿವೆ. ಆದರೆ ಉಳಿದವುಗಳು ಪುನಃ ಸಂಕರವಾಗಿ ಕೆಲವು ಜಾತಿಗಳು ಹೆಚ್ಚಾಗಿವೆ.

ಪರೀಕ್ಷಿತ ರಾಜನಿಗಿಂತ ಪೂರ್ವದಲ್ಲಿಯೇ ಸಂಕರ ಜಾತಿಗಳುಂಟಾಗಿದ್ದವು. ಮುಂದೆ ಒಂದು ಸಾವಿರ ವರ್ಷಗಳಲ್ಲಿ ಅವು ಒಳ್ಳೆ ಊರ್ಜಿತಸ್ಥಿತಿಯನ್ನು ಹೊಂದಿದವು. ಯಾಕೆಂದರೆ ಧನೋತ್ಪಾದನದ ಎಷ್ಟೋ ಕೈಗಾರಿಕೆಗಳು ಅವರಿಂದಲೇ ನಡೆಯುತ್ತಿದ್ದವು. ದೀರ್ಘಕಾಲದ ಶಾಂತತೆಯುಂಟಾಗಲು, ಕ್ಷತ್ರಿಯರು ವಿಷಯಲೋಲುಪರಾದರು. ಬ್ರಾಹ್ಮಣರು ಸಹ ಯಜ್ಞಯಾಗಗಳನ್ನೂ ವ್ರತೋದ್ಯಾಪನಗಳನ್ನೂ ಅಳತೆಮೀರಿದ ನಿತ್ಯ ನೈಮಿತ್ತಿಕಕರ್ಮಗಳನ್ನೂ ಎಸಗುತ್ತ, ರಾಷ್ಟ್ರೀಯ ಧರ್ಮಜಾಗ್ರತಿಯ, ಹಾಗು ಹೊಸ ಶೋಧಗಳ, ಕಾರ್ಯದಿಂದ ವಿಮುಖರಾದರು. ಈ ಸೌಖ್ಯದ ಪರಮಾವಧಿಯ ಕಾಲದಲ್ಲಿ ರಸಭರಿತಕಾವ್ಯಗಳೂ ಪುರಾಣಾದಿ ಗ್ರಂಥಗಳೂ ಹೇರಳವಾಗಿ ರಚಿಸಲ್ಪಟ್ಟವು. ಶಬ್ದಪಾಂಡಿತ್ಯವು ಬೆಳೆಯಿತು. ಆದರೆ ಸಮಾಜವು ತೇಜೋಹೀನವಾಯಿತು. ಬರಬರುತ್ತ ಸಂಕರಜಾತಿಗಳ ಬಲವು ಹೆಚ್ಚಾಯಿತು. ಅವರು ಮೂಲ ಆರ್ಯಜಾತಿಗಳಿಗಿಂತ ಕಡಿಮೆಯವರಲ್ಲೆಂದು ಅಭಿಮಾನಪಡಹತ್ತಿದರು. ಸುಖಲೋಲುಪರಾದ ಬ್ರಾಹ್ಮಣರು ಅವರಿಗೆ ಅನುಕೂಲವಾದ ಧರ್ಮತತ್ವಗಳನ್ನು ಪ್ರತಿಪಾದಿಸಹತ್ತಿದರು. ಕ್ಷತ್ರಿಯರು ಸಂಕರ ಜಾತಿಯ ಕನ್ನಿಕೆಯರನ್ನು-ಶೂದ್ರಕನ್ನಿಕೆಯರನ್ನು ಸಹ-ಮದುವೆ ಮಾಡಿಕೊಳ್ಳ

ಹತ್ತಿದರು. ಆಗ ಚಾರ್ವಾಕಮತವು ಪ್ರಸಾರವಾಗಹತ್ತಿತು. ಹಿಂದೂ ಸಮಾಜದಲ್ಲಿ ಆದ ಬಹು ದೊಡ್ಡ ಕ್ರಾಂತಿಯು ಇದೇ. ಇದರಿಂದ ಆಸ್ತಿಕ್ಯ ಬುದ್ಧಿಯು ಅಳಿದು ಹೋಯಿತು, ಯಜ್ಞಕರ್ಮವು ಲೋಪಹೊಂದಿತು, ಬ್ರಾಹ್ಮಣ ಧರ್ಮದ ಅಧಿಕಾರವು ಕಳೆಗುಂದಿತು. ಇದರಂತೆ ಕ್ಷತ್ರಿಯರ ಅವಸ್ಥೆಯೂ ಕೆಟ್ಟು ಹೋಯಿತು. ಅವರು ಉನ್ಮತ್ತರಾಗಿ ಬ್ರಾಹ್ಮಣರ ಮಂತ್ರಾಲೋಚನೆಗೆ ಕಿವಿಗೊಡದೆ, ಶೂದ್ರ ಸ್ತ್ರೀಯರನ್ನು ಮದುವೆಯಾಗಹತ್ತಿದರು. ಪ್ರದ್ಯೋತ ವಂಶದೊಳಗಿನ ಮಹಾನಂದಿಯೆಂಬ ರಾಜನು ತನ್ನ ಶೂದ್ರ ಪತ್ನಿಯ ಮಗನಾದ ನಂದನೆಂಬವನನ್ನು ಅರಸನನ್ನು ಮಾಡಿದನು. ಅವನು ಎಲ್ಲ ಕ್ಷತ್ರಿಯರನ್ನು ನಾಮಶೇಷಮಾಡಿ ಬಿಟ್ಟನು. ಮುಂದೆ ೬೦೦ ವರ್ಷಗಳವರೆಗೆ ಅಂದರೆ ಉತ್ತರಹಿಂದುಸ್ಥಾನದಲ್ಲಿ ಗುಪ್ತ ರಾಜವಂಶವೂ ದಕ್ಷಿಣದಲ್ಲಿ ಚಾಲುಕ್ಯ ರಾಜವಂಶವೂ ತಲೆಯೆತ್ತುವವರೆಗೆ ಒಬ್ಬ ಕ್ಷತ್ರಿಯ ರಾಜನೂ ಇದ್ದಿಲ್ಲ.

ಚಾತುರ್ವರ್ಣ್ಯವನ್ನನುಸರಿಸುವ ಪ್ರತಿಯೊಂದು ವ್ಯಕ್ತಿಗೆ, ಪುತ್ರಧರ್ಮ, ಕುಲಧರ್ಮ, ಜಾತಿಧರ್ಮ, ವರ್ಣಧರ್ಮ, ಆಶ್ರಮಧರ್ಮ, ದೇಶಧರ್ಮಗಳೆಂಬ ಆರು ವೇಷ್ಟನಗಳು ಇದ್ದೇಇರುತ್ತವೆ. ಈ ಮಾತು ಸಹಜವದೆ. ಹ್ಯಾಗೆಂದರೆ, ಪ್ರತಿಯೊಬ್ಬನು ಯಾವ ತಾಯಿತಂದೆಗಳಿಂದಾದರೂ ಹುಟ್ಟಿರುವನಷ್ಟೇ. ಅವನು ಗರ್ಭದಲ್ಲಿರುವಾಗ, ಹುಟ್ಟಿದಕೂಡಲೆ, ಬೆಳೆಬೆಳೆದಂತೆ, ಈ ೬ ವೇಷ್ಟನಗಳು ಕ್ರಮವಾಗಿ ಗಟ್ಟಿಯಾಗುತ್ತ ಹೋಗುತ್ತವೆ. ಅವನು ಪುತ್ರಧರ್ಮವನ್ನು ಅನುಸರಿಸಿ, ದೇವತೆಗಳು, ಪಿತೃಗಳು, ಜ್ಞಾನದಾತರಾದ ಋಷಿಗಳು, ಇವರ ಋಣದಿಂದ ಮುಕ್ತನಾಗಲಿಕ್ಕೆ ವೇದಧರ್ಮವನ್ನನುಸರಿಸಿ ನಡೆಯಬೇಕಾಗುವದು. ತನ್ನ ಕುಲದೇವತೆಗಳ, ಹಾಗು ಜಾತಿಸಂಬಂಧದ, ಕರ್ತವ್ಯಗಳನ್ನು ವೇದಶಾಸ್ತ್ರಗಳನ್ನನುಸರಿಸಿ ಮಾಡಬೇಕಾಗುವದು, ಬ್ರಾಹ್ಮಣಾದಿವರ್ಣಗಳ ಸಂಬಂಧದಿಂದಲೂ, ಕೆಲವು ಕಾರ್ಯಗಳನ್ನು ಮಾಡಬೇಕಾಗುವದು. ಕ್ರಮವಾಗಿ ಬ್ರಹ್ಮಚರ್ಯ, ಗಾರ್ಹಸ್ಥ್ಯ ಮುಂತಾದ ಆಶ್ರಮೋಚಿತಕಾರ್ಯಗಳನ್ನು ಜರಗಿಸಬೇಕಾಗುವದು. ರಾಜಕಾರಣದ ಮೂಲಕ ದೇಶಧರ್ಮವು ಅವನಿಗೆ ಕ್ಷಣಶಃ ಅಂಟಿಕೊಳ್ಳುತ್ತಿರುವದು. ಆದ್ದರಿಂದ ಪಿತೃಗಳು, ಗೋತ್ರಪುರುಷನು, ಕುಲ, ಗುರು, ಜಾತಿ, ವರ್ಣ, ಆಶ್ರಮಗಳನ್ನು ಅವನು ಶ್ರದ್ಧಾಪೂರ್ವಕವಾಗಿ ನೆನಿಸುತ್ತ, ಅವುಗಳಬಗ್ಗೆ ಪ್ರೇಮವನ್ನೂ, ಅಭಿಮಾನವನ್ನೂ ತಾಳುವನು. ಅವುಗಳಂತೆ ನಡೆಯದಿದ್ದರೆ ಅವನಿಗೆ ಪರಮ ಖೇದವಾಗುವದು. ಈ ಧರ್ಮಗಳನ್ನು ವೇದಾದಿಸಂಸ್ಕೃತವಚನಗಳಂತೆ, ಇಷ್ಟ

ದಿನದಲ್ಲಿ, ಪ್ರತಿದಿನದಲ್ಲಿ, ಪ್ರತಿಕ್ಷಣದಲ್ಲಿ, ಪಾಲಿಸುವನು; ಸ್ನಾನಮಾಡುವಾಗ ತನ್ನ ಜನ್ಮಸ್ಥಾನವಾದ ಪುಣ್ಯಭೂಮಿಯ ಹೆಸರು ತಕ್ಕೊಳ್ಳುವನು. ಹೀಗೆ ಪ್ರತಿದಿನದಲ್ಲಿ ಅವನು ತನ್ನ ದೇಶದ, ಭಾಷೆಯ, ಧರ್ಮದ, ಕುಲದ, ಸಮಾಜದ ಇತಿಹಾಸವನ್ನೇ ಪಾರಾಯಣ ಮಾಡುತ್ತಿರುವನು. ಹೀಗೆ ಹಿಂದೂ ಆರ್ಯನಿಗೆ ಬಲವಾದ ೬ ಕವಚಗಳಿರುವದರಿಂದ ಅವನು ಪರಧರ್ಮದವನಿಗೆ ದುರ್ಭೇದ್ಯನಾಗುವನು. ಈ ೬ ಕವಚಗಳನ್ನು ಸಡಲಿಸಿ ಕಳೆದೊಗೆಯಬೇಕೆಂದು ಚಾರ್ವಾಕರು ಯತ್ನಮಾಡಹತ್ತಿದರು. ಹಿಂದೂಆರ್ಯರು ಬಳ್ಳೇ ಶ್ರದ್ಧೆಯಿಂದ ನಂಬಿರುವ ವೇದಾದಿಗ್ರಂಥಗಳ, ಅವುಗಳೊಳಗಿನ ಮತಗಳ, ಬ್ರಾಹ್ಮಣರ, ಯಜ್ಞಕರ್ಮಗಳ ನಿಂದೆಯನ್ನು ಮಾಡಹತ್ತಿದರು.

ಪಶುಶ್ಚೇನ್ನಿಹತಃ ಸ್ವರ್ಗಂ ಜ್ಯೋತಿಷ್ಟೋಮೇಗಮಿಷ್ಯತಿ।
ಸ್ವಪಿತಾ ಯಜಮಾನೇನ ತತ್ರ ಕಸ್ಮಾನ್ನ ಹಿಂಸ್ಯತೇ॥
ನ ಸ್ವರ್ಗೋನಾಪವರ್ಗೋ ವಾ ನೈವಾತ್ಮಾ ಪಾರಲೌಕಿಕಃ।
ನೈವ ವರ್ಣಾಶ್ರಮಾದೀನಾಂ ಕ್ರಿಯಾಶ್ಚ ಫಲದಾಯಕಾಃ॥
ಅಗ್ನಿಹೋತ್ರಂ ತ್ರಯೋ ವೇದಾಸ್ತ್ರಿದಂಡಂ ಭಸ್ಮಗುಂಠನಂ।
ಬುದ್ಧಿಪೌರುಷ ಹೀನಾನಾಂ ಜೀವಿಕೇತಿ ಬೃಹಸ್ಪತಿಃ॥

ಚಾರ್ವಾಕಮತ ಪ್ರತಿಪಾದಕನಾದ ಬೃಹಸ್ಪತಿಯು ಹೇಳುತ್ತಾನೆ "ಜ್ಯೋತಿಷ್ಟೋಮಯಜ್ಞದಲ್ಲಿ ಕೊಂದ ಪಶುವು ಸ್ವರ್ಗವನ್ನೈದುವದಾದರೆ, ಯಜ್ಞಮಾಡುವವನು ಅದರಲ್ಲಿ ತನ್ನ ತಂದೆಯನ್ನು ಯಾಕೆ ಕೊಲ್ಲಬಾರದು? ಸ್ವರ್ಗ, ಮೋಕ್ಷ, ಆತ್ಮ, ಇವೆಲ್ಲ ಸುಳ್ಳು; ವರ್ಣಾಶ್ರಮಧರ್ಮವೂ ವ್ಯರ್ಥವು; ಅಗ್ನಿಹೋತ್ರವು ವೇದಾಧ್ಯಯನವು, ಸನ್ಯಾಸವು, ಮೈಗೆ ಬೂದಿಬೊಳಿದುಕೊಳ್ಳೋಣವು, ಇವನ್ನೆ ಬುದ್ಧಿಹೀನರೂ ಗಂಡಸುತನವಿಲ್ಲದವರೂ, ಹೊಟ್ಟೆಹೊರಕೊಳ್ಳಲಿಕ್ಕೆ ಮಾಡುತ್ತಾರೆ"

ಈ ಬಗೆಯ ನಿಂದೆಯಿಂದ ಅವಿಚಾರಿಗಳು ಬೇಗ ಮರುಳಾದರು. ಅಸಂಖ್ಯ ಜನರು ಬೌದ್ಧಧರ್ಮವನ್ನು ಸ್ವೀಕರಿಸಿದರು. ಚಾತುರ್ವರ್ಣ್ಯದ ಪುರಸ್ಕರ್ತರಾದ ಕ್ಷತ್ರಿಯರು ಹತವೀರ್ಯರಾದ್ದರಿಂದ ಸಮಾಜದಲ್ಲಿ ಅನವಸ್ಥೆಯು ಆಳತೆಗೆಟ್ಟಿತು. ಶಕ-ಯವನ-ಪಲ್ಲವರಾಜರು ಇಡಿ ಭರತಖಂಡವನ್ನಾಕ್ರಮಿಸಿದರು, ಸಂಸ್ಕೃತಭಾಷೆಯ ಸ್ಥಳವನ್ನು ಪ್ರಾಕೃತಭಾಷೆಯು ವ್ಯಾಪಿಸಿತು. ಯಜ್ಞಕ್ರಿಯೆಗಳು ಬಂದಾದವು. ವೇದಗಳು ಮುನೆತವು. ಆಸ್ತಿಕ್ಯಬುದ್ಧಿಯು ಲಯವಾಯಿತು. ಇಂಥ ಅವನತಸ್ಥಿತಿಯಲ್ಲಿ

ಚಾತುರ್ವರ್ಣವ್ಯವಸ್ಥೆಯು ಟುಕು ಟುಕು ಜೀವಹಿಡಕೊಂಡು ಹ್ಯಾಗೋ ಬ-
ದುಕಿ ಉಳಿದಿತ್ತು. ವಿಚಾರಿಗಳು ಬಹಿರಂಗದಲ್ಲಿ ಬೌದ್ಧರಾಗಿದ್ದರೂ, ತಮ್ಮ
ಧರ್ಮದ ಒ ಕವಚಗಳನ್ನು ತೆಗೆದೊಗೆದಿದ್ದಿಲ್ಲ. ಅದರಿಂದ ಬರಬರುತ್ತ ಯಜ್ಞಕ್ಕೆ
ಬದಲು ತ್ರಿಮೂರ್ತಿಗಳ ಪೂಜೆಗೆ ಆರಂಭವಾಯಿತು. ಯಜ್ಞಮಾರ್ಗವು ಉಪಾಸ
ನೆಯ ರೂಪಹೊಂದಿತು. ಯಜ್ಞದಲ್ಲಿ ಅನ್ನುವ ವೇದ ಮಂತ್ರಗಳು ಉಪಾಸನೆಯ,
ಹಾಗು ಬೇರೆ ಬೇರೆ ಸಂಸ್ಕಾರಗಳ ಪ್ರಸಂಗದಲ್ಲಿ ಉಪಯೋಗಿಸಲ್ಪಡಹತ್ತಿದವು.
ಬಹುಕಾಲದ ಮೇಲೆ ಗುಪ್ತ—ಚಾಲುಕ್ಯರೆಂಬ ಧರ್ಮಾಭಿಮಾನಿಗಳಾದ ಕ್ಷತ್ರಿಯರಾ
ಜರು ಪ್ರಬಲರಾದ ಕೂಡಲೆ, ಬ್ರಾಹ್ಮಣರು ಕ್ಷತ್ರಿಯರಿಗೆ ಸಹಾಯ ಮಾಡಿದ ಕೂ-
ಡಲೆ, ಯಜ್ಞಕ್ರಿಯೆಯೂ ಸಂಸ್ಕೃತಭಾಷೆಯೂ ಬೇರೆ ಕ್ಷತ್ರಿಯರೂ ಏಳ್ಗೆಹೊಂದಿ
ದರು. ಶಕ-ಯವನ-ಪಲ್ಲವಾದಿರಾಜರು ಅದೃಶ್ಯರಾದರು. ಹಿಂದೂ ಸಮಾಜ
ದಲ್ಲಿ ಮತ್ತೆ ಸುವ್ಯವಸ್ಥೆಯುಂಟಾಯಿತು. ಕ್ಷತ್ರಿಯರ ಬಾಹುಬಲ, ಬ್ರಾಹ್ಮಣರ
ಬುದ್ಧಿಬಲ, ಇವುಗಳ ಏಕೀಕರಣದಿಂದಲೇ ಸಮಾಜದಲ್ಲಿ ಸ್ಥೈರ್ಯವುಂಟಾಗುವ
ದೆಂಬ ಮಾತು ಮತ್ತೊಮ್ಮೆ ನಿದರ್ಶನಕ್ಕೆ ಬಂತು.

ದಕ್ಷಿಣ ಹಿಂದುಸ್ತಾನದಲ್ಲಿ ಶಬರಸ್ವಾಮಿ, ಶ್ರಿ ಶಂಕರಾಚಾರ್ಯರಂಥ ಬ್ರಾ-
ಹ್ಮಣರ ಬುದ್ಧಿವೈಭವದಿಂದಲೂ ಚಾಲುಕ್ಯರಾಜರ ಬಾಹುಬಲದಿಂದಲೂ, ಉತ್ತರ
ಹಿಂದುಸ್ತಾನದಲ್ಲಿ ಸೂರ್ಯವಂಶದ ಶ್ರೀ ರಾಮಚಂದ, ಚಂದ್ರವಂಶದ ಶ್ರೀಕೃಷ್ಣ
ಪಾಂಡವರು, ಇವರ ವಂಶಸ್ಥರಾದ ವೀರಕ್ಷತ್ರಿಯರ ಪ್ರೋತ್ಸಾಹನದಿಂದಲೂ ಚಾತು
ವರ್ಣ ವ್ಯವಸ್ಥೆಯು ೧ ಸಾವಿರವರ್ಷಗಳ ವರೆಗೆ ಉತ್ತಮೋತ್ತಮವಾಗಿ ಪಾಲಿಸ
ಲ್ಪಟ್ಟು, ಸಮಾಜವು ಶ್ರೇಷ್ಠವಾದ ಸ್ಥೈರ್ಯವನ್ನು ಪಡೆಯಿತು. ನಡುನಡುವೆ
ಶ್ರೇಷ್ಠತೆಯ ಸಲುವಾಗಿ ರಾಜರಾಜರಲ್ಲಿ ಬಳಜಗಳಗಳು ಆಗುತ್ತಿದ್ದವು. ಅದರಿಂದ
ಸಮಾಜದಲ್ಲಿರುವ ಕರ್ತೃತ್ವ ಶಾಲಿಗಳು ಉದ್ವಿಗ್ನ ಚಿತ್ತರಾಗುತ್ತಿದ್ದರು. ಆದರೆ
ಉಳಿದವರು ಶಾಂತಚಿತ್ತರಾಗಿ, ಧರ್ಮಾಚರಣೆಯಲ್ಲಿ ತೊಡಗಿ, ಸುಖಶಾಂತಿ
ಯಿಂದ ಬಾಳುತ್ತಿದ್ದರು. ಬರಬರುತ್ತ ಜಗಳಗಳು ಮಿತಿಮೀರಿದವು. ಕ್ಷತ್ರಿ
ಯರು ನಾಶಹೊಂದುವವರೆಗೆ ಹೊಡೆದಾಡಿ ತೇಜೋಹೀನರಾಗಹತ್ತಿದರು.
ಬ್ರಾಹ್ಮಣರು ಕ್ಷಾತ್ರಕರ್ಮವನ್ನು ಕೈಕೊಳ್ಳಹತ್ತಿದರು. ಸುಖಾಭಿಲಾಷೆಯು ಅಳ
ತೆಮೀರಿತು, ಕ್ಷುಲ್ಲಕಕಾರಣಗಳಿಗಾಗಿ ಭಯಂಕರ ಅನರ್ಥಪಾತವಾಗಹತ್ತಿತು.
ಇಂಥ ಕೀಳ್ದೆಸೆಯುಂಟಾದ ಕಾಲದಲ್ಲಿಯೇ ಶಕ-ಯವನಾದಿಗಳ ವಂಶಸ್ಥರಾದ ಮು-
ಸಲ್ಮಾನರು ಈ ದೇಶವನ್ನು ಅಭಿಯೋಗಿಸಿದರು. ಅವರು ಹಿಂದೂ ಸಮಾಜದ

ಸಂಸ್ಕೃತಿಯನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ಮಾನಸಿಕ ಸ್ಥಿತಿಯನ್ನೂ ಸಾಮಾಜಿಕ ಸ್ಥಿತಿರೀತಿಗಳನ್ನೂ ಗಣನೆಗೆ ತರಲಿಲ್ಲ. ಧಾರ್ಮಿಕ ಚರ್ಚೆಮಾಡಿ ಮುಸಲ್ಮಾನೀಧರ್ಮವು ಹಿಂದೂ ಧರ್ಮಕ್ಕಿಂತ ಹೆಚ್ಚಿನದೆಂದು ಸಿದ್ಧ ಮಾಡುವ ಗೊಡವೆಗೆ ಹೋಗಲಿಲ್ಲ. ಆದರೆ ಮುಹಮ್ಮದೀ ಧರ್ಮದ ಪ್ರಸಾರವೇ ಮುಖ್ಯ ಕರ್ತವ್ಯವೆಂದು ತಿಳಿದು ಬಗೆಬಗೆಯ ಪೀಡೆಯನ್ನುಂಟುಮಾಡಹತ್ತಿದರು. ಹಿಂದೂ ಸಮಾಜದ ಮನಸ್ಸನ್ನು ಗೆದ್ದು ಮುಸಲ್ಮಾನರನ್ನು ಮಾಡಲಿಲ್ಲ. ಆದರೆ ಬಾಹು ಬಲದಿಂದ ಮುಸಲ್ಮಾನರನ್ನು ಮಾಡಹತ್ತಿದರು. ಹಿಂದೂ ಜನರ ಗುಡಿಗಳು ನೆಲಸಮ ಮಾಡಲ್ಪಟ್ಟವು, ಇಲ್ಲವೆ ಮಸೀದೆಗಳಾದವು! ಮೂರ್ತಿಗಳು ಒಡೆಯಲ್ಪಟ್ಟವು, ಇಲ್ಲವೆ ಅಂಗಳದಲ್ಲಿ ಹಾಕಲ್ಪಟ್ಟವು. ಸ್ತ್ರೀಯರು ಕೆಡಿಸಲ್ಪಟ್ಟರು; ಸಾಧುಸಂತರು ಛಲಿಸಲ್ಪಟ್ಟರು. ಬ್ರಾಹ್ಮಣರು ಗುಪ್ತವಾಗಿ ಧರ್ಮವನ್ನಾಚರಿಸಹತ್ತಿದರು. ಕೆಲವರು ಕುಲಗೆಟ್ಟರು. ಕೆಲವರು ದೂರ ಓಡಿ ಹೋದರು, ಅಣ್ಣನು ಕುಲಗೆಟ್ಟು ದಿಲ್ಲಿಯಲ್ಲಿ ನಿಂತಿದ್ದರೆ ಕುಲಗೆಡದ ತಮ್ಮನು ಕಾವೇರೀ ತೀರ ಸೇರುತ್ತಿದ್ದನು. ಕ್ಷತ್ರಿಯರ ಶೂರ ವೃತ್ತಿಯು ಬಂಜೆಯಾಯಿತು. ವೈಶ್ಯ ವರ್ಗವು ಸುಲಿಯಲ್ಪಟ್ಟು ಕೋಮಟಿಗರೆಂಬ ಹೆಸರು ಹೊಂದಿ ತಿರುಗಾಡಹತ್ತಿತು. "ಸೆಟ್ಟಿ ಇಳಿದಲ್ಲಿ ಪಟ್ಟಣ"ವೆಂಬ ಗಾದೆಯು ರೂಢವಾಯಿತು. ಎಷ್ಟೋ ಜನರು ಮುಸಲ್ಮಾನ ಸಾಧುಸಂತರ ಸೇವೆಮಾಡಹತ್ತಿದರು. ಬಡವರೂ ಕಡಿಮೆ ಕುಲದವರೂ ಸುಮ್ಮನೆ ಮುಸಲ್ಮಾನರಾದರು. ಹೀಗೆ ಬ್ರಾಹ್ಮಣ ಧರ್ಮವು ಪೂರ್ಣಮುಳುಗಿತು. ಎಲ್ಲಿಯೋ ಹಳ್ಳಿಪಳ್ಳಿಗಳಲ್ಲಿ ಬ್ರಾಹ್ಮಣರು ಒಂಟಿಗರಾಗಿ ಧರ್ಮವನ್ನಾಚರಿಸುತ್ತ ವಾಸಿಸಿದರು.

ಈ ಸ್ಥಿತಿಯು ೪೦೦ ವರ್ಷಗಳ ವರೆಗೆ ಅಖಂಡವಾಗಿ ಸಾಗಿತು. ಅಷ್ಟರಲ್ಲಿ ವಿಜಯನಗರದಲ್ಲಿ ಹಿಂದೂರಾಜ್ಯವು ಮೊಳೆದೋರಿ, ದಿನದಿನಕ್ಕೆ ಬೆಳೆಯಹತ್ತಿತು. ಕ್ಷಾತ್ರವೃತ್ತಿಯ ಧರ್ಮಾಭಿಮಾನದ ವೃಕ್ಷವು ತೋರಹತ್ತಿತು. ಕೂಡಲೆ ಮುಸಲ್ಮಾನರ ತಾಪದಿಂದ ಕಂಗೆಟ್ಟು ಹಾಯ್! ಅನ್ನುತ್ತಿದ್ದ ಹಿಂದೂ ಪಂಡಿತರೂ, ಯೋಧರೂ, ಮುತ್ಸದ್ದಿಗಳೂ, ಕೈಗಾರಿಕೆಯವರೂ ವ್ಯಾಪಾರಸ್ಥರೂ ಆ ವೃಕ್ಷದ ನೆರಳನ್ನಾಶ್ರಯಿಸಲಿಕ್ಕೆ ಎಲ್ಲ ದಿಕ್ಕಿನಿಂದಲೂ ಬರುವವರಾದರು. ಮಾಧವಾಚಾರ್ಯ, ಸಾಯಣಾಚಾರ್ಯ, ಲಕ್ಷ್ಮಣದೇವ, ಅಪ್ಪಾಜಿ ಮುಂತಾದ ಬ್ರಾಹ್ಮಣರ ಬುದ್ಧಿಬಲವೂ ಹರಿಹರರಾಯ, ದೇವರಾಯ, ಅಚ್ಯುತರಾಯ, ಕೃಷ್ಣರಾಯ ಮುಂತಾದವರ ಕ್ಷಾತ್ರತೇಜವೂ ಒಂದಾದ ಕೂಡಲೆ ಮತ್ತೆ ಚಾತುರ್ವರ್ಣ್ಯವ್ಯವಸ್ಥೆಯು ನೆಲೆಗೊಂಡು, ಹಿಂದೂಸಮಾಜವು ಸುಸ್ಥಿತಿಹೊಂದಿತು. ಆದರೆ ದುರ್ದೈ

ವದಿಂದ ತಾಳೀಕೋಟೆಯು ಕಾಳಗವಾಗಿ ವಿಜಯನಗರದ ಸಾಮ್ರಾಜ್ಯವು ಧ್ವಂಸವಾಯಿತು! ಅದರಿಂದ ಅಖಿಲಭರತಖಂಡವು ಶೋಕಸಾಗರದಲ್ಲಿ ಮುಳುಗಿತು. ಆಗ ಜನರು ಮಾಡಿದ ಹಾಹಾಕಾರವನ್ನು ವರ್ಣಿಸುವದಕ್ಕೆ ಲೆಕ್ಕಣಿಕೆಯ ಸಾಮರ್ಥ್ಯವು ಸಾಲದು. ಅದನ್ನು ಆ ಕಾಲದ ಎಷ್ಟೋ ಗ್ರಂಥಗಳಲ್ಲಿ ನೋಡಿಕೊಳ್ಳಬಹುದು.

ವಿಜಯನಗರದ ರಾಜ್ಯವು ನಷ್ಟವಾದ ಬಳಿಕ ಚಾತುರ್ವರ್ಣ್ಯವ್ಯವಸ್ಥೆಯು ಹ್ರಾಸವಾಗುತ್ತ ನಡೆದು ಸಮಾಜವು ಮತ್ತೆ ವಿಸ್ಖಲಿತವಾಯಿತು. ಧರ್ಮಾಂಧರಾದ ಎಷ್ಟೋ ಪ್ರಬಲ ಮುಸಲ್ಮಾನ ರಾಜರಿಂದ ಹಿಂದೂ ಸಮಾಜಕ್ಕೆ ಭಯಂಕರ ಯಾತನೆಯುಂಟಾಯಿತು. ಎಲ್ಲರೂ ಮುಸಲ್ಮಾನರಾಗಬೇಕು, ಇಲ್ಲವೆ ಪ್ರಾಣದ ಪರವೆಯಿಲ್ಲದೆ ಧರ್ಮರಕ್ಷಣೆಗಾಗಿ ಹೆಣಗಾಡಬೇಕು ಎಂಬ ಸ್ಥಿತಿಯುಂಟಾಯಿತು. ಎಲ್ಲರೂ ಮುಸಲ್ಮಾನರಾಗಿದ್ದರೆ ಚಾತುರ್ವರ್ಣ್ಯದ, ಅದರೊಡನೆ ಹಿಂದೂ ಸಮಾಜದ ಲಯವಾಗಿ ಹೋಗುತ್ತಿತ್ತು. ಆದರೆ ಧರ್ಮವೇ ಪ್ರಾಣಕ್ಕಿಂತ ಹೆಚ್ಚೆಂದು ಎಷ್ಟೋ ಮಹಾತ್ಮರು ಧರ್ಮೋದ್ಧಾರದ ಕಾರ್ಯಕ್ಕೆ ಎತ್ತುಗಡೆ ಮಾಡಹತ್ತಿದರು. ಉಳಿದವರು ''' ಏನು ಗತಿಯಾಯಿತಲ್ಲ! ನಾವು ಈ ಧಾರ್ಮಿಕ ಸಂಕಟದೊಳಗಿಂದ ಹ್ಯಾಗೆ ಪಾರಾದೇವು? ದೇವರೇ, ನೀನು ಅವತಾರ ತಾಳಿ ನಮ್ಮನ್ನು ಉದ್ಧರಿಸು, ಎಂದು ಹಲುಬುತ್ತಿದ್ದರು. ಇಡಿ ದೇಶಕ್ಕೆ ಪ್ರಸವ ವೇದನೆಯಾಗಹತ್ತಿತು. ಮಹಾರಾಷ್ಟ್ರ ಸಾಧುಸಂತರು ಕಾಣಿಸಿಕೊಂಡು, ಪ್ರಸಂಗ ಬಿದ್ದಾಗ ಮರೆಯಲ್ಲಿದ್ದು ಧರ್ಮಜಾಗ್ರತಿ ಮಾಡುತ್ತ ಜನರ ಮನಸಿನಲ್ಲಿ ಧರ್ಮಾಭಿಮಾನವನ್ನು ಚೆನ್ನಾಗಿ ನೆಲೆಗೊಳಿಸಿದ್ದರು. ಕೆಲಕಾಲದ ಮೇಲೆ ಆರ್ಯಭೂಮಾತೆಯು ಶಿವಾಜಿ ಮಹಾರಾಜನೆಂಬ ಪುತ್ರರತ್ನವನ್ನು ಹಡೆದಳು. ಅವನಿಗೆ ದಾದೋಜಿ ಕೋಂಡದೇವ, ರಾಮದಾಸ-ಸ್ವಾಮಿಗಳು ಇವರ ಉಪದೇಶವು ದೊರೆಯಿತು. ಮತ್ತೆ ಬ್ರಹ್ಮತೇಜವೂ ಕ್ಷಾತ್ರತೇಜವೂ ಒಟ್ಟಾದ ಕೂಡಲೆ, ಶಿಥಿಲವಾಗಿದ್ದ ಚಾತುರ್ವರ್ಣ್ಯವ್ಯವಸ್ಥೆಯು ಬಲಗೊಂಡಿತು; ಹಿಂದೂಸಮಾಜವು ಪೀಡಾರಹಿತವಾಗಿ ಕರ್ತವ್ಯತತ್ಪರವಾಯಿತು.

ಇತ್ತ ಮೈಸೂರ ರಾಜ್ಯವು ದಿನದಿನಕ್ಕೆ ಬೆಳೆದು ಹಿಂದೂಸಮಾಜದ ಸುವ್ಯವಸ್ಥೆಗೆ ಆಶ್ರಯಸ್ಥಾನವಾಯಿತು. ಅದು ಮಧ್ಯದಲ್ಲಿ ರಾಹುಗ್ರಸ್ತವಾಗಿತ್ತು; ಆದರೆ ನಿರ್ಮುಕ್ತವಾಯಿತು. ಅದು ಈಗಾದರೂ ಬ್ರಹ್ಮ-ಕ್ಷತ್ರಿಯ ಶಕ್ತಿಗಳ ಸಮುಚ್ಚಯದಿಂದ ದೈದೀಪ್ಯಮಾನವಾಗಿ ಕಂಗೊಳಿಸುತ್ತಿರುವದು. ಉತ್ತರಹಿಂದು

ಸ್ತಾನದಲ್ಲಿ ಪ್ರಜಾಪ್ರೇಮರಹಿತರಾದ ಮುಸಲ್ಮಾನ ರಾಜರು ಬೇಗ ದುರ್ಬಲರಾದರು. ರಜಪೂತರು ಬರಬರುತ್ತ ರಣಹೇಡಿಗಳಾಗುತ್ತ ನಡೆದಿದ್ದರೂ ಮುಸಲ್ಮಾನರ ಕಾಟ ತಪ್ಪಿಸಿಕೊಳ್ಳುವ ಮಟ್ಟಿಗೆ ಸಮರ್ಥರಿದ್ದರು; ರಜಪೂತರೊಡನೆ ದಿಲ್ಲಿಯ ಬಾದಶಹರು ಮಾಡಿಕೊಂಡಿರುವ ಪ್ರತಿಯೊಂದು ಒಡಂಬಡಿಕೆಯಲ್ಲಿ ಗೋವಧವಾಗಗೊಡಬಾರದೆಂಬ ಕಲಮು ಇದ್ದೇ ಇರುವದನ್ನು ನೋಡಿದರೆ ರಜಪೂತರಾಜರು ಹಿಂದೂ ಸಂಸ್ಕೃತಿಯ ಬಗ್ಗೆ ಪೂರ್ಣ ಅಭಿಮಾನಿಗಳಿದ್ದರೆಂದು ಸ್ಪಷ್ಟವಾಗಿ ತೋರುತ್ತದೆ. ಹಿಂದೂ ಮುಸಲ್ಮಾನ ಸಮಾಜಗಳಲ್ಲಿ ಕಲಹವು ತಕ್ಕದ್ದಲ್ಲೆಂದು ನಾನಕ ಕಬೀರ ಮುಂತಾದ ಸಾಧುಗಳು ಯತ್ನಮಾಡಹತ್ತಿದರು. ಮುಸಲ್ಮಾನರು ಬಹುಕಾಲ ಹಿಂದುಸ್ತಾನದಲ್ಲಿ ವಾಸಿಸಿದ್ದರಿಂದ ಈ ದೇಶವೇ ತಮ್ಮ ಮಾತೃಭೂಮಿಯೆಂದು ತಿಳಿಯಹತ್ತಿದರು. ನಿಜಾಮನು ತನ್ನ ರಾಜ್ಯದೊಳಗಿನ ಹಿಂದೂ ಮುಸಲ್ಮಾನರನ್ನು ಸಮದೃಷ್ಟಿಯಿಂದ ನಡಿಸಿಕೊಳ್ಳುವದು ಇದಕ್ಕೆ ಸಾಕ್ಷಿಯಾಗಿದೆ. ಧರ್ಮಸಹಿಷ್ಣುತೆಯುಳ್ಳ ಹಿಂದೂ ಸಮಾಜವು ಅವರಿಗೆ ನೆರವಾಗಹತ್ತಿತು. ಮೈಸೂರ, ತ್ರಾವಣಕೋರ ರಜಪೂತಸ್ತಾನದೊಳಗಿನ ಹಿಂದೂ ಅರಸರು ಮುಸಲ್ಮಾನ ಪ್ರಜೆಗಳನ್ನು ಚೆನ್ನಾಗಿ ಪಾಲಿಸುವ ಸಂಗತಿಯು ಇದಕ್ಕೆ ಉದಾಹರಣವಾಗಿದೆ. ಕಡೆಗೆ ಭಿನ್ನ ಸಂಸ್ಕೃತಿಯುಳ್ಳ, ಭಿನ್ನ ಆಚಾರ ವಿಚಾರಗಳುಳ್ಳ ಬೇರೆ ತರದ ಜ್ಞಾನ ವಿಜ್ಞಾನವುಳ್ಳ ಬೇರೊಂದು ಸಮಾಜವು ಹಿಂದುಸ್ತಾನದಲ್ಲಿ ವರ್ಚಸ್ಸು ಪಡೆಯಿತು. ಅದು ಧಾರ್ಮಿಕ ವಿಷಯದಲ್ಲಿ ಕೈಹಾಕುವದಿಲ್ಲ. ಪರಸ್ಪರರಲ್ಲಿ ಧಾರ್ಮಿಕಕಲಹವನ್ನು ಮಾಡಗೊಡುವದಿಲ್ಲ. ಅದರಿಂದ ಹಿಂದೂ ಸಮಾಜವು ಮತ್ತೆ ಸ್ಥಿರವಾಗಿ ಕಾಲಹರಣ ಮಾಡಲಿಕ್ಕೆ ಅನುಕೂಲತೆಯುಂಟಾಗಿದೆ. ಆ ಸಮಾಜವೇ ನಮ್ಮ ಪರಮಪೂಜ್ಯರಾದ ಜಾರ್ಜ ಬಾದಶಹರವರ ಘನವಂತವಾದ ಆಂಗ್ಲ ಸಮಾಜವು.

ಸಂಪೂರ್ಣ.